Superintendents and Assistant Secretaries in the Secretariat.

(Rules for Promotion).

Q.—899. SRI D. R. KARI GOWDA (Hassan).—

Will the Government be pleased to state :—

the rules to be followed with respect to appointment of Superintendents, Assistant Secretaries and Secretaries in the Mysore Government Secretariat ?

A.—Sri K. HANUMANTHAIYA (Chief Minister).—

Re : *Superintendents.*—First Division Clerks who have qualified themselves by passing (i) Accounts Higher, (ii) Revenue Higher, and (iii) Criminal Higher are eligible for promotion as Superintendents. According to seniority and merit, an eligibility list of officials eligible for promotion is prepared and approval of the Public Service Commission obtained. Appointments are made as per the approved eligibility list, as and when vacancies occur.

Re : *Assistant Secretaries.* Superintendents in the Secretariat who have qualified themselves by passing (i) Accounts Higher, (ii) Revenue Higher, and (iii) Criminal Higher are generally eligible for promotion as Assistant Secretaries. According to seniority and merit an eligibility list of Superintendents is prepared and the approval of the Public Service Commission obtained. Appointments are made as per the approved eligibility list as and when vacancies occur. Some of the posts of Assistant Secretaries are also held by officers of the State Civil Service.

Re : *Secretaries.*—All the post of Secretaries are Senior Duty Posts in the I.A.S. cadre. Officers who are in the grade of Senior Duty Posts are appointed to these posts except in the case of the Secretary to Government, Law Department, which is held by an Officer of the Judicial Department with the rank and status of a District Judge.

LEGISLATIVE BUSINESS.

Mr. SPEAKER.—We shall now go to the next item of business in the Agenda.

Mysore Agricultural Income-tax Bill, 1955.

Introduct on.

Sri K. HANUMANTHAIYA (Chief Minister).—

Sir, I beg to introduce the Mysore Agricultural Inco ne-Tax Bill, 1955.

Sri B. N. BORANNA GOWDA (Belur).—I have been authorised to put one question.

Mr. SPEAKER.—Questions are over. The next item of business was also taken up.

MYSORE TENANCY (SECOND AMENDMENT) BILL, 1955.

Motion to consider (continued).

ಶ್ರೀ ಮಲ್ಲಿಕಾರ್ಜುನಪ್ಪಗೌಡ (ಸೊರಬ-ಶಿಕಾರಿಪುರ).—ಸ್ವಾಮಿ, ನಾನು ಈ ಟೆನೆನ್ಸಿ ತಿದ್ದುಪಡಿ ಮಸೂದೆಯನ್ನು ಅನುಮೋದಿಸುತ್ತ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನನ್ನ ಕೆಲವು ಮಿತ್ರರು ಈಗಾಗಲೇ ಮಾತನಾಡುತ್ತ ಈಗ ಈ ಟೆನೆನ್ಸಿ ಮಸೂದೆಗೆ ತಂದಿರತಕ್ಕಂಥ ತಿದ್ದುಪಡಿಯು ಆವಶ್ಯಕತೆಯೇ ಇರಲಿಲ್ಲ ಅಂತ ಹೇಳಿದರು. ಆದರೆ ಈಗ ತಂದಿರತಕ್ಕಂಥ ತಿದ್ದುಪಡಿ ತುಂಬಾ ಆವಶ್ಯಕ ಅಂತ ನಾನು ಹೇಳುತ್ತೇನೆ. ಕಾರಣ ಈ ಹಿಂದೆ ಮಾಡಿರತಕ್ಕಂಥ ಈ ಟೆನೆನ್ಸಿ ಬಿಲ್ಲು ರೈತರಿಗೆ ಅಷ್ಟು ಉತ್ಸಾಹದಾಯಕವಾಗಿಲ್ಲ. ತಾವು ಹಿಂದೆ ರಚಿಸಿರುವ ಟೆನೆನ್ಸಿ ಬಿಲ್ಲಿನಲ್ಲಿ ಐದು ವರ್ಷದ ಒಂದು ಲಿಮಿಟ್ಟನ್ನು ಮಾತ್ರ ಹಾಕಿರುತ್ತೀರಿ. ಇದರಿಂದ ರೈತರಿಗೆ ಆ ವಾಯಿದೆ ಕಳೆದನಂತರ ಆ ಜಮೀನು ತಮಗೇ ಉಳಿಯುತ್ತದೆಯೆಂಬ ಭರವಸೆ ಅವರಿಗೆ ಉಂಟಾಗದೆ ಇರುವುದರಿಂದ ಅವರು ಈಗ ಈ ಜಮೀನುಗಳಲ್ಲಿ ಹೆಚ್ಚು ಉತ್ಪತ್ತಿ ಬರುವಂತೆ ಮಾಡುವುದಕ್ಕೆ ಅವರಿಗೆ ಮನಸ್ಸಿರುವುದಿಲ್ಲ. ಈಗ ನನ್ನ ಅಭಿಪ್ರಾಯದಲ್ಲಿ ತಾವು ಈ ಐದು ವರ್ಷಗಳ ಲಿಮಿಟ್ಟನ್ನು ತಪ್ಪಿಸಿ ಹತ್ತು ವರ್ಷಗಳ ಒಂದು ಅವಧಿಯನ್ನು ನಿರ್ಧರಿಸಿದರೆ ಆಗ ಆತನಿಗೆ ಆ ಜಮೀನು ಹೇಗೂ ತನ್ನ ವಶದಲ್ಲಿ ಹತ್ತು ವರ್ಷಗಳ ಕಾಲವಾದರೂ ಇದ್ದೇ ಇರುತ್ತದೆಯಲ್ಲಾ ಅನ್ನುವಂಥ ಒಂದು ಭರವಸೆ ಮೇಲೆ ಅವನು ಉತ್ಸಾಹದಿಂದ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ಲಿಮಿಟ್ಟನ್ನು ಹತ್ತು ವರ್ಷಗಳಿಗೆ ಹೆಚ್ಚಿಸಬೇಕೆಂದು ಹೇಳುತ್ತೇನೆ. ಹೀಗೆ ಒಂದು ಭರವಸೆಯನ್ನು ಸರ್ಕಾರದವರು ಆ ರೈತನಿಗೆ ಕೊಡದೆ ಹೋದರೆ ಆತನು ಜಮೀನನ್ನು ಅಭಿವೃದ್ಧಿಗೆ ತರಲಾರ ಮತ್ತು ಉತ್ಪತ್ತಿಯನ್ನು ಸಹ ಹೆಚ್ಚುಮಾಡಲಾರನೆಂದು ನನಗೆ ಅನಿಸುತ್ತದೆ.

ಇದರ ಜೊತೆಗೆ ಈಗ ರೈತನಿಗೆ ಮತ್ತೊಂದು ಅನುಮಾನ ಬೇರೆ ಇದೆ. ಜಮೀನ್ದಾರರೇ ಏನಾ

(ಶ್ರೀ ಮಲ್ಲಿಕಾರ್ಜುನಪ್ಪಗೌಡ.)

ದರೂ ಆ ಜಮೀನನ್ನು ತಾವೇ ಸ್ವಂತವಾಗಿ ವ್ಯವಸಾಯ ಮಾಡಿಕೊಂಡು ಹೋಗುತ್ತೇವೆ; ಆ ಜಮೀನು ತಮಗೆ ಬೇಕೆಂದು ಜಮೀನ್ದಾರರು ಅಪೇಕ್ಷೆ ಪಟ್ಟಲ್ಲಿ ರೈತನಿಗೆ ಕೊಟ್ಟಿರತಕ್ಕಂಥ ಜಮೀನನ್ನು ಬಿಡಿಸಿಕೊಳ್ಳಬಹುದು ಅಂತ ಕಾನೂನಿನಲ್ಲಿ ಸೂಚಿಸಿದ್ದೀರಿ. ಇದರಿಂದ ಯಾವ ಕಾಲದಲ್ಲಿ ಈ ಜಮೀನ್ದಾರರು ಜಮೀನನ್ನು ತಮ್ಮ ಸ್ವಂತ ಸಾಗುವಳಿಗೇ ಬೇಕಾಗಿರುತ್ತೆಂದು ಬಿಡಿಸಿಕೊಳ್ಳುತ್ತಾರೋ ಅನ್ನತಕ್ಕ ಒಂದು ಅನುಮಾನ ಬೇರೆ ಇರುವುದರಿಂದ ಈ ದಿವಸ ರೈತನಲ್ಲಿ ಯಾವ ಉತ್ಸಾಹವೂ ಇಲ್ಲ. ರೈತನಿಗೆ ರಾಜಕೀಯ ಸ್ವಾತಂತ್ರ್ಯ ಮಾತ್ರ ಲಭಿಸಿದೆ. ಆದರೆ ಈಗ ರೈತವರ್ಗ ಇನ್ನೂ ಈ ಆರ್ಥಿಕ ಸ್ವಾತಂತ್ರ್ಯತೆಗೆ ಹೋರಾಟ ನಡೆಸಬೇಕಾಗಿದೆ. ಈ ಆರ್ಥಿಕ ವಿಚಾರ ಸರಿಯಾಗಿಲ್ಲದ ಪಕ್ಷದಲ್ಲಿ ಇದು ಮಾನವನ ಮನಸ್ಸಿನ ಮೇಲೆ ಒಂದು ಹೆಚ್ಚು ಪರಿಣಾಮಕಾರಿಯಾದ ಅದಲು ಬದಲಾವಣೆಗೆ ಕಾರಣವಾಗುತ್ತದೆಂದು ನನ್ನ ಅಭಿಪ್ರಾಯ. ಆದರೆ ಈಗ ತಂದಿರತಕ್ಕಂಥ ತಿದ್ದುಪಡಿಯನ್ನು ವಿರೋಧಮಾಡುತ್ತ ನನ್ನ ಮಿತ್ರರಾದ ಶ್ರೀ ಎಚ್. ಎಂ. ಚೆನ್ನಬಸಪ್ಪನವರು ಕೆಲವು ಅಂಕಿಅಂಶಗಳನ್ನು ಕೊಟ್ಟರು. ಆದರೆ ನಾನೂ ಸಹ ಕೆಲವು ಅಂಕಿಅಂಶಗಳನ್ನು ಇಟ್ಟುಕೊಂಡಿದ್ದೇನೆ. ಒಂದು ಎಕರೆ ಮತ್ತು ಅದಕ್ಕಿಂತ ಕಡಿಮೆ ವಿಸ್ತೀರ್ಣ ಇರತಕ್ಕಂಥ ಜಮೀನ್ದಾರರು ನಮ್ಮ ದೇಶದಲ್ಲಿ 2,41,191 ಜನಗಳಿದ್ದಾರೆ. ಇವರ ಹಿಡುವಳಿಯಲ್ಲಿರತಕ್ಕ ಒಟ್ಟು ವಿಸ್ತೀರ್ಣ 324,224 ಎಕರೆಗಳು. 1 ಎಕರೆಗೆ ಮೇಲ್ಪಟ್ಟು ಐದು ಎಕರೆ ವಿಸ್ತೀರ್ಣದೊಳಗಿರತಕ್ಕಂಥ ಜಮೀನ್ದಾರರ ಸಂಖ್ಯೆ 556,530 ಮತ್ತು ಪ್ರದೇಶ 1,784,117 ಎಕರೆಗಳು. ಐದು ಎಕರೆಗಳ ಮೇಲ್ಪಟ್ಟು ಹತ್ತು ಎಕರೆ ವಿಸ್ತೀರ್ಣದೊಳಗಿರತಕ್ಕಂಥ ಜಮೀನ್ದಾರರ ಸಂಖ್ಯೆ 2,78,171. ಇವರ ಅನುಭವದಲ್ಲಿರುವ ಜಮೀನು 2,023,303 ಎಕರೆಗಳು. ಇನ್ನು ಹತ್ತು ಎಕರೆಗಳ ಮೇಲ್ಪಟ್ಟು ಐವತ್ತು ಎಕರೆಗಳ ಒಳಗಿರತಕ್ಕಂಥ ಜಮೀನ್ದಾರರ ಸಂಖ್ಯೆ 1,54,211. ಇವರ ಸ್ವಾಧೀನದಲ್ಲಿರುವ ಜಮೀನು 3,009,749 ಎಕರೆ. 50 ಎಕರೆಗಳ ಮೇಲೆ 100 ಎಕರೆ ಒಳಗೆ ಇರುವಂಥ ಜಮೀನ್ದಾರರ ಸಂಖ್ಯೆ 12,670. ಇವರ ಹಿಡಿತದಲ್ಲಿರತಕ್ಕ ಜಮೀನು 7,92,596 ಎಕರೆ. 100 ಎಕರೆಗಳಿಂದ 500 ಎಕರೆಗಳೊಳಗೆ ಇರತಕ್ಕಂಥ ಜಮೀನ್ದಾರರ ಸಂಖ್ಯೆ 2,412 ಮತ್ತು ಜಮೀನಿನ ವಿಸ್ತೀರ್ಣ 3,41,722 ಎಕರೆಗಳು. ಇನ್ನು 500 ಎಕರೆಗಳಿಗೆ ಮೇಲ್ಪಟ್ಟ ಜಮೀನಿರತಕ್ಕಂಥ ಜಮೀನ್ದಾರರ ಸಂಖ್ಯೆ 77 ಮತ್ತು ಜಮೀನು 64,576 ಎಕರೆಗಳು. ಇವುಗಳನ್ನೆಲ್ಲಾ ನಾವು ಒಟ್ಟಾಗಿ ಸೇರಿಸಿ ಲೆಕ್ಕಮಾಡಿದರೆ ಒಂದು ಎಕರೆಯೊಳಗೆ ಇರತಕ್ಕಂಥ ಜಮೀನ್ದಾರರೂ, ಒಂದರಿಂದ ಐದು ಎಕರೆಯೊಳಗಿರುವಂಥ ಜಮೀನ್ದಾರರೂ ಮತ್ತು ಐದರಿಂದ ಹತ್ತು ಎಕರೆಯೊಳಗೆ ಇರತಕ್ಕಂಥ ಜಮೀನ್ದಾರರುಗಳ ಒಟ್ಟು ಸಂಖ್ಯೆ 1,075,892. ಇಷ್ಟು ಜನರು ತಮ್ಮ ಹಿಡುವಳಿಯಲ್ಲಿ 4,131,644 ಎಕರೆ ಜಮೀನನ್ನು ಇಟ್ಟುಕೊಂಡಿರುತ್ತಾರೆ. ಇನ್ನು ಹತ್ತು ಎಕರೆ ಮೇಲೆ 50 ಎಕರೆಗಳೊಳಗೆ ಮತ್ತು 50 ಎಕರೆಗಳಿಂದ 100 ಎಕರೆಗಳೊಳಗೆ ಮತ್ತು 100 ಎಕರೆಗಳಿಂದ 500 ಎಕರೆಗಳವರೆಗೂ ಮತ್ತು 500 ಎಕರೆಗಳಿಗೂ ಜಾಸಿ ಯಾಗಿ ಜಮೀನನ್ನು ಇಟ್ಟುಕೊಂಡಿರತಕ್ಕಂಥವರ ಸಂಖ್ಯೆ 1,69,730. ಇವರ ಹಿಡುವಳಿಯಲ್ಲಿರತಕ್ಕ ಒಟ್ಟು ಜಮೀನು 4,208,643 ಎಕರೆಗಳು. ಈಗ ಒಂದು ಎಕರೆಯೊಳಗೆ ಮತ್ತು ಒಂದರಿಂದ ಐದು ಎಕರೆ ಮತ್ತು ಐದು ಎಕರೆಗಳಿಂದ 10 ಎಕರೆಯೊಳಗೆ ಇರುವಂಥ ಜಮೀನ್ದಾರರ ಸಂಖ್ಯೆ 1,075,892 ; ಮತ್ತು ಹತ್ತು ಎಕರೆಗಳಿಂದ ಹಿಡಿದು 50 ಎಕರೆಗಳ ಒಳಗೆ ಮತ್ತು 50 ಎಕರೆಗಳಿಂದ 100 ಎಕರೆಯೊಳಗೆ ಮತ್ತು 100 ರಿಂದ 500 ಎಕರೆ ಮತ್ತು ಅದಕ್ಕೆ ಮೇಲ್ಪಟ್ಟು ಜಮೀನನ್ನು ಇಟ್ಟುಕೊಂಡಿರತಕ್ಕಂಥ ಜಮೀನ್ದಾರರ ಸಂಖ್ಯೆ 1,69,370 ಅಂದರೆ 10 ಎಕರೆಗಳ ಮೇಲ್ಪಟ್ಟು 500 ಎಕರೆವರೆಗೂ ಮತ್ತು ಅದಕ್ಕೆ ಮೇಲ್ಪಟ್ಟು ಜಮೀನನ್ನು ಪಡೆದಿರತಕ್ಕವರ ಸಂಖ್ಯೆ ಹತ್ತು ಎಕರೆ ಒಳಗೆ ಜಮೀನ್ ಪಡೆದಿರತಕ್ಕವರ ಸಂಖ್ಯೆಗಿಂತ ಸುಮಾರು ಒಂಭತ್ತು ಲಕ್ಷ ಜನರು ಜಾಸ್ತಿಯಾಗುತ್ತಾರೆ. ಈಗ ಈ ಒಂಭತ್ತು ಲಕ್ಷ ಜನಕ್ಕೆ ಒಂದು ಕಾನೂನನ್ನು ಮಾಡಬೇಕಾಗಿರುತ್ತದೆ. ಇದು ಅನಾವಶ್ಯಕ ಎಂದು ನಮ್ಮ ಮಿತ್ರರು ಹೇಳಿದರು. ಹಾಗಾದರೆ ನಮ್ಮ ದೇಶದಲ್ಲಿ ಈಗ ಇರತಕ್ಕ ಜನಸಂಖ್ಯೆ ಸುಮಾರು 98 ಲಕ್ಷ ಇದೆ. ಆದರೆ, ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಸುಮಾರು ಒಂದು ಸಾವಿರ ಜನಗಳಿರಬಹುದು. ಈ 98 ಲಕ್ಷದಲ್ಲಿ ಈ ಒಂದು ಸಾವಿರ ಜನಗಳಿಗೋಸ್ಕರವಾಗಿ ಇಷ್ಟೊಂದು ಪೋಲೀಸ್ ಸಿಬ್ಬಂದಿ ಕೋರ್ಟು ಇತ್ಯಾದಿಗಳನ್ನೆಲ್ಲಾ ಇಟ್ಟುಕೊಂಡು ಇಷ್ಟೇಕೆ ಖರ್ಚು ಮಾಡಬೇಕು ಇವುಗಳನ್ನೆಲ್ಲಾ ತೆಗೆದ ಬಿಡಿ ಎಂದು ಹೇಳಿದ ಹಾಗೆ ಆಯಿತು.

ಅದಕ್ಕೋಸ್ಕರ ಒಂದು ನೀತಿಯ ತಿದ್ದುಪಡಿ ಮಾಡುವುದಕ್ಕೋಸ್ಕರ ಈ ಟೆನೆನ್ಸಿ ಕಾನೂನು ಬೇಕು ಎಂದು ಹೇಳುತ್ತೇನೆ. ಇದನ್ನು ಹೇಳಬೇಕಾದರೂ ಒಂದು ಜವಾಬ್ದಾರಿಯುತವಾದ ಮಾತನ್ನು ಹೇಳುತ್ತೇನೆ. ನನ್ನ ಕ್ಷೇತ್ರದ ರೈತರ ಪರವಾಗಿ ನಾನು ಬಂದಿರುವುದರಿಂದ ರೈತರ ವಿಚಾರದ ಆಗು ಹೋಗುಗಳನ್ನು ಕುರಿತು ಮಾತನಾಡಬೇಕಾಗಿದೆಯೇ ಹೊರತು 300-500 ಎಕರೆ ಜಮೀನುದಾರರ ವಿಚಾರವಲ್ಲ: ನಾನೂ ಸಹ ಆ ರೀತಿಯ ಜಮೀನ್ದಾರರ ಪೈಕಿ ಒಬ್ಬ. ಆದ್ದರಿಂದ ಈ ದಿನ ನಾನು ಒಂದು ಜವಾಬ್ದಾರಿಯಿಂದ ಭೂಮಿ ಯಾರ ಸ್ವತ್ತೂ ಆಗಿರತಕ್ಕುದಲ್ಲ ಎಂದು ಹೇಳುತ್ತೇನೆ. 300 ರಿಂದ 500 ಎಕರೆ ಜಮೀನು ಇರತಕ್ಕವರಲ್ಲಿ ನಾನು ಒಬ್ಬ ಈ ವಿಷಯವನ್ನು ಹೇಳುತ್ತಿದ್ದೇನೆಂದು ಒಂದು ಸಂಶಯ ನಮ್ಮ ಮಾನ್ಯ ಮಿತ್ರರಿಗೆ ಬರಬಹುದು. ಆದರೆ ಒಂದು ನೀತಿಯನ್ನು ಸಾಧಿಸುವುದಕ್ಕೆ ಸ್ವಲ್ಪ ಸ್ವಲ್ಪವಾದರೂ ಕಾನೂನಿಗೆ ಹೊಂದಿಕೊಂಡು ನಡೆದು ಆಶೆಯನ್ನು ಕಡಿಮೆಮಾಡಿಕೊಳ್ಳುತ್ತಾ ಹೋಗುವುದು ನಮ್ಮ ಜಮೀನ್ದಾರರಿಗೆ ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ.

ಈ ಕಾನೂನನ್ನು ನಾವು ಇಲ್ಲಿ ಮಾಡುತ್ತೇವೆನ್ನೋಣ. ಆದರೆ ಇದರ ಉಪಯೋಗ ರೈತರಿಗೆ ದೊರೆಯಲು ಬಹಳ ತೊಂದರೆಗಳಿವೆ ಎಂದು ನನ್ನ ಅನುಭವ. ಈಗ ಬೊಂಬಾಯಿ ಪ್ರಾಂತದಲ್ಲಿ ಈ Tenancy Bill ತಂದಿದ್ದಾರೆ. ಅಲ್ಲಿ ಪ್ರತಿ ತಾಲ್ಲೂಕಿಗೂ ಒಬ್ಬ ಟೆನೆನ್ಸಿ ಮಾಮಲೇದಾರರನ್ನು ಹಾಕಿದ್ದಾರೆ. ಇವರು ಪ್ರತಿ ಹಳ್ಳಿಗೂ ಹೋಗಿ ಟೆನೆನ್ಸಿ ವಿಚಾರದಲ್ಲಿ ಪ್ರಚಾರಮಾಡುತ್ತಾರೆ. ಸಾಮಾನ್ಯವಾಗಿ ಅಸೆಂಬ್ಲಿ ಸದಸ್ಯರುಗಳು ಈ ಕಾರ್ಯವನ್ನು ಮಾಡಲು ಇಲ್ಲಿ ಸಾಧ್ಯವಿಲ್ಲವೆಂದು ನಾನು ಅನುಭವದಿಂದ ತಿಳಿದುಕೊಂಡಿದ್ದೇನೆ. ಅಲ್ಲಿ ಮಾಮಲೇದಾರರು ಹಳ್ಳಿಗಳಲ್ಲಿ ಪ್ರಚಾರಮಾಡಿ, ರೈತರಿಗೆ ದೊರೆಯಬೇಕಾದ ಅನುಕೂಲತೆಗಳನ್ನು ಅವರಿಗೆ ಕೊಡಿಸಿಕೊಡುವುದಕ್ಕೆ ನೆರವಾಗುತ್ತಾರೆ, ಆದ್ದರಿಂದ ನಮ್ಮ ಸಂಸ್ಥಾನದಲ್ಲಿಯೂ ಸಹ ತಾಲ್ಲೂಕಿಗೆ ಒಬ್ಬರಂತೆ ಮಾಮಲೇದಾರರನ್ನು ನೇಮಕಮಾಡಿ ಈ ಟೆನೆನ್ಸಿ ವಿಚಾರದಲ್ಲಿ ಪ್ರಚಾರಮಾಡಿ ಜನಗಳಿಗೆ ಅವರ ಹಕ್ಕುಗಳನ್ನು

ಕೊಡಿಸಿಕೊಡಬೇಕು ಎಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಭೂಮಿಯು ಒಡೆತನದ ವಿಚಾರ ವಾಗಿ ಒಂದು ನೀತಿ ಹೇಳುತ್ತಾರೆ. ಅದೇನೆಂದರೆ, "ಹಾವು ಕಚ್ಚಿದರೆ ಒಬ್ಬ ಮನುಷ್ಯ ಸಾಯುತ್ತಾನೆ. ಭೂಮಿ ಕಚ್ಚಿದರೆ ಕುಟುಂಬವೇ ನಾಶವಾಗುತ್ತದೆ" ಎಂದು ಒಂದು ನೀತಿ ಇದೆ. ಇದು ನಿಜ. ಹೇಗೆಂದರೆ 1932-33ನೆ ಇಸವಿಯಲ್ಲಿ ಜಮೀನು ಕಚ್ಚಿತು. ಆವಾಗ ಕಂದಾಯಕೊಡುವುದಕ್ಕೆ ಸಹ ಆಗದೆ ಅನೇಕರ ಮನೆ ಗಳು ಹಾಳಾದುವು. ಅದು ಭೂಮಿ ಹೆಚ್ಚಾಗಿರಕೂಡದು ಎನ್ನುವುದರ ತತ್ವ. ಈಗ ಒಂದು ವಿಧವಾದ ಪ್ರಯತ್ನ ಮಾಡಿದೆ. ಅದರಂತೆ ಯಾರೊಬ್ಬನಿಗೂ ಭೂಮಿ ಹೆಚ್ಚಾಗಿರಕೂಡದು. ತಾನು ಎಷ್ಟು ಸಾಗುವಳಿ ಮಾಡುತ್ತಾನೆಯೋ ಎಷ್ಟು ಉಪಯೋಗ ಮಾಡುತ್ತಾ ನೆಯೋ ಅಷ್ಟು ಮಾತ್ರ ಸಾಕು. ಈ ಭೂಮಿಗೆ ನಾವು ಒಡೆ ಯರು ಎಂದು ಒಂದು ಸಲ ಹೇಳುತ್ತೇವೆ, ಒಂದೊಂದು ಸಲ ಭೂಮಿಯನ್ನು ತಾಯಿ ಎಂದು ಕರೆಯುತ್ತೇವೆ. ತಾಯಿ ಎನ್ನುವುದು ನಿಜವೋ ಅಥವಾ ಒಡೆಯ ಎನ್ನು ವುದು ನಿಜವೋ ಎಂದು ಯೋಚಿಸಬೇಕಾಗುತ್ತದೆ. ತಾಯಿಗೆ ಒಡೆಯ ಎಂದು ಹೇಳುವುದು ಸರಿಯಾದದ್ದಲ್ಲ ವೆಂದು ನಾನು ಹೇಳುತ್ತೇನೆ. ಈಗ ನಾವೆಲ್ಲಾ ಜಮೀನ್ದಾರರು. ಜಮೀನಿನ ಉತ್ಪತ್ತಿಯಿಂದ ಜೀವನ ಮಾಡುತ್ತಿದ್ದೇವೆ. ಇದರಿಂದ ನಮ್ಮ ಮುಂದಿನ ಪೀಳಿಗೆ ಅಭಿವೃದ್ಧಿಯಾಗಬೇಕು ಎನ್ನುವುದಕ್ಕಿಂತ ಇವೊತ್ತು ನಮ್ಮ ಹಕ್ಕುಗಳು ಶ್ರಮಕೆಲಸಕ್ಕೋಸ್ಕರವಾಗಿವೆ, ಶ್ರಮಕೆಲಸದ ಮುಖಾಂತರ ನಾವು ಬಾಳಬೇಕು ಎನ್ನು ವುದನ್ನು ತಮ್ಮ ಎದುರಿಗೆ ಹೇಳುತ್ತೇನೆ.

ಈಗ ಇನ್ನೂ ಒಂದು ವಾದವಿದೆ. ಒಂದು ಸಂಸಾರ ದಲ್ಲಿ ಬರೀ ಹೆಂಗಸರು ಮಕ್ಕಳು ಮಾತ್ರವಿದ್ದು ಅವರ ಜಮೀನು ಈ ರೀತಿಯಾಗಿ Tenancy Actಗೆ ಒಳ ಪಟ್ಟರೆ ಅವನ ಜೀವನ ಹೇಗೆ ನಡೆಯಬೇಕು ಎಂಬ ವಾದವನ್ನು ಒಬ್ಬರು ಮಿತ್ರರು ಇಟ್ಟಿದ್ದಾರೆ. ಜಮೀನು ಇಲ್ಲದ ಮನೆಯೊಳಗೆ ಇಂಥ ತಾಯಿಮಕ್ಕಳಿದ್ದರೆ ಅವರ ಸಂಸಾರ ಯಾರು ಸಾಗಿಸಿಕೊಂಡು ಹೋಗುತ್ತಾರೆಂಬು ದನ್ನು ನಾವು ಯೋಚನೆಮಾಡಬೇಕು.

ಇನ್ನು ಈ Tenancy Act ನ್ನು ನಮ್ಮ ಮಾನ್ಯ ಮಂತ್ರಿಗಳು ತಂದಿರುವುದರಲ್ಲಿ ಒಂದು ಅನ್ಯಾಯ ಆಗಿದೆ ಎಂದು ನನ್ನ ಭಾವನೆ. ಒಂದು ಜಮೀನಿನಲ್ಲಿ ಬೆಳೆಯುವ ವಸ್ತುಗಳಲ್ಲಿ ಅರ್ಧಕ್ಕಿಂತ ಹೆಚ್ಚಾಗಿಲ್ಲದೆ ಅಂದರೆ 1/3 ಅಥವಾ 1/4 ಭಾಗ ರೈತರು ಕೊಡಬೇ ಕೆಂದು ತಂದಿದ್ದಾರೆ. ಆತನು ಎಷ್ಟೇ ಬೆಳೆಯನ್ನು ಬೆಳೆ ದರೂ ಈ ರೀತಿ ಕೊಡಬೇಕೆಂದಿದೆ. ಇದರಲ್ಲಿ ಇನ್ನೂ ಒಂದು ತೊಂದರೆ ಇದೆ. ಜಮೀನ್ದಾರರು ಹುಲ್ಲನ್ನು ಸಹ 1/3 ಭಾಗ ಕೊಡಬೇಕು ಎಂದು ತರಲೆಮಾಡ ಬಹುದು. ಈ ಕಾನೂನಿನಿಂದ ಬಸವಣ್ಣನಿಗೆ ಸಿಕ್ಕತಕ್ಕ ಹುಲ್ಲಿಗೆ ಅನ್ಯಾಯವಾಗಿದೆ. ಜಮೀನಿನಲ್ಲಿ ಕಷ್ಟಪಟ್ಟು ದುಡಿದು ಉತ್ತು ಬೆಳೆಯನ್ನು ಇಡಲು ಸಹಾಯಕವಾಗಿ ರುವ ಬಸವಣ್ಣನಿಗೆ ಇದರ ಪಾಲು ಸೇರಬೇಕು. ಈ ರೀತಿ ಜಮೀನ್ದಾರರಿಗೆ ಸಹ 1/3 ಭಾಗ ಹುಲ್ಲು ಸೇರಬೇ ಕೆಂದು ವಿವಾದಾಸ್ಪದವಾಗಿ ಮಾಡಿರುವುದನ್ನು ಈಗಲಾ ದರೂ ತಿದ್ದಿಕೊಳ್ಳಬೇಕು ಮತ್ತು ಸೂಕ್ತ ಬದಲಾವಣೆ ಮಾಡಬೇಕೆಂದೂ ಹೇಳುತ್ತೇನೆ.

ಇನ್ನೊಂದು ವಿಚಾರ. ಈ ಹೊತ್ತಿನ ದಿವಸ ಬರೀ ಜಮೀನ್ದಾರರಿಗೆ ಅನ್ವಯಿಸುವಂತೆ ಈ ಕಾನೂನು ತಂದಿ ದ್ದೀರಿ. ಪಟ್ಟಣಗಳಲ್ಲಿ ಮನೆಗಳನ್ನು ಉಳ್ಳವರು ಸರ್ಕಾರಿ ನೌಕರಿಯಲ್ಲಿದ್ದು ಹೆಚ್ಚಾಗಿ ಸಂಬಳ ತೆಗೆದುಕೊಳ್ಳುವವರು ಇಂಥವರಿಗೋಸ್ಕರ ಏನುಮಾಡುವಿರಿ ಎಂಬ ಒಂದು ವಾದವೂ ಇದೆ. ಅದಕ್ಕೆ ನಾನು ಉತ್ತರ ಹೇಳುತ್ತೇನೆ. ಭೂಮಿಯಿಂದಲೇ ಎಲ್ಲರೂ ಮುಂದೆ ಬರತಕ್ಕಂಥಾದ್ದು. ಭೂಮಿಯ ತೊಡಕನ್ನು ನಮ್ಮ ದೇಶದೊಳಗೆ ಬಿಡಿಸಿ ದರೆ, ಇತರ ತೊಡಕುಗಳು ಹೆಚ್ಚು ದಿವಸ ನಿಲ್ಲಲಾರವು. ಪೇಟೆಗಳಲ್ಲಿ, ಪಟ್ಟಣಗಳಲ್ಲಿ ಇರತಕ್ಕಂಥವರಿಗೆ ಈ ಕಾನೂನನ್ನು ಪ್ರಚಾರಮಾಡಿ ತಿಳುವಳಿಕೆ ಕೊಡುವುದಕ್ಕೆ ಒಬ್ಬ ಅಧಿಕಾರಿಯನ್ನು ನೇಮಿಸಬೇಕಾದ ಅವಶ್ಯಕತೆ ಇಲ್ಲ. ಆದರೆ ಹಳ್ಳಿಯಲ್ಲಿ ಇರತಕ್ಕಂಥ ಅವಿದ್ಯಾವಂತ ರಿಗೆ, ಅನಕ್ಷರಸ್ಥರಿಗೆ ಮಾತ್ರ ಪ್ರಚಾರಮಾಡಿ ಅವನಿಗೆ ಸಲ್ಲಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡಲು ಪ್ರಯತ್ನಮಾಡಬೇಕು. ಪಟ್ಟಣಗಳಲ್ಲಿ ಬಾಡಿಗೆ ಮನೆಗಳಲ್ಲಿರುವವರು ಬುದ್ಧಿವಂತರಾಗಿರುವುದರಿಂದ ಕಾನೂನು ಕಟ್ಟಳೆಗಳನ್ನು ತಿಳಿದುಕೊಂಡು ತಕ್ಷಣ ಅದರ ಲಾಭ ಹೊಂದುತ್ತಾರೆ. ಉದಾಹರಣೆಗೆ ಹೇಳಬೇಕಾದರೆ ಹಿಂದೆ ಒಂದು ಸಲ ಸಾವಿರ ರೂಪಾಯಿ ನೋಟು ಗಳನ್ನು ಹೊಂದಿರುವವರು ಸಮಜಾಯಿಷಿ ಕೊಡಬೇ ಕೆಂದು ಕೇಳಿದರು. ಆಗ ಸರಿಯಾದ ಸಮಜಾಯಿಷಿ ಕೊಡುವುದಕ್ಕೆ ಆಗದೆ, ಸುಮಾರು 50 ಕೋಟಿ ರೂಪಾ ಯಿಗಳ ಉಳಿತಾಯವಾಯಿತು. ಅದೇ ರೀತಿಯಾಗಿ ಸಮತಾವಾದ ತತ್ವದ ಪ್ರಕಾರ ಹೆಚ್ಚು ಮನೆಗಳನ್ನೂ ಕಟ್ಟಡಗಳನ್ನೂ ಉಳ್ಳವರು ಮೊದಲಾದವರಿಗೋಸ್ಕರ ಒಂದು ಕಾನೂನು ಬರುವುದು ಶತಸಿದ್ಧವಾದುವು. ಆದುದರಿಂದ ನಾವು ಜಮೀನುದಾರರು ಈ ದಿನ ನಮ್ಮ ಮೇಲೆ ಬಂದಿರತಕ್ಕದ್ದನ್ನು ನೋಡಿ ನಮ್ಮ ಮುಂದಿನ ರೀತಿ, ನೀತಿ, ಮಾರ್ಗಗಳನ್ನು ತಿಳಿದುಕೊಂಡು ಅದರಂತೆ ನಮ್ಮ ಸಂಸಾರಗಳನ್ನು ನಡೆಸಿಕೊಂಡು ಹೋಗುವು ದನ್ನು ತಿದ್ದಿಕೊಳ್ಳಬೇಕೇ ಹೊರತು, ಈ ರೀತಿಯ ಕಾನೂ ನನ್ನು ಪಟ್ಟಣಗಳಲ್ಲಿ ಮನೆಮಾರುಗಳನ್ನು ಹೊಂದಿರ ತಕ್ಕವರಿಗೂ ಅನ್ವಯಿಸುವಂತೆ ತನ್ನಿ. ಇನ್ನೊಬ್ಬರಿಗೆ ಅನ್ವಯಿಸುವಂತೆ ತನ್ನಿ ಎಂದು ಹೇಳುವುದು ಸರಿಯಾದ ದ್ದಲ್ಲವೆಂದು ನನ್ನ ಭಾವನೆ. ಈ ದಿನ ನಮ್ಮ ಮುಂದೆ ಇಟ್ಟಿರುವ Tenancy Bill ನಾನು ಸಂಪೂರ್ಣ ವಾಗಿ ಅನುಮೋದಿಸುತ್ತೇನೆ.

ಆದ್ದರಿಂದ ಈ ಕಾನೂನು ಕಾಲಕ್ಕೆ ಸರಿಯಾಗಿದೆ ಯೆನ್ನಬೇಕು. ಮಾನ್ಯ ಸದಸ್ಯರು ಇದನ್ನು ಅನುಮೋ ದಿಸಿ ಯಾರಿಗೆ ನಿಜವಾಗಿ ಜಮೀನು ಸಲ್ಲಬೇಕೋ ಆತ ನಿಗೆ ಕೊಡುವುದಕ್ಕೆ ಒತ್ತಾಯಮಾಡಬೇಕು. ನಮ್ಮದೇ ಒಂದು ಆಸೆಗಾಗಿ ಸ್ವಾರ್ಥಕ್ಕಾಗಿ ಇದನ್ನು ಮೊಟಕು ಮಾಡಬಾರದು. ಯಾರು ನಮ್ಮ ಮೇಲೆ ನಂಬಿಕೆಯಿಟ್ಟು ತಮ್ಮ ಪ್ರತಿನಿಧಿಯಾಗಿ ಕಳುಹಿಸಿದ್ದಾರೋ ಅವರಿಗೆ ನಾವು ಸೇವೆಮಾಡಿದಂತಾಗುವುದಿಲ್ಲ. ಈ ಸಭೆಯಲ್ಲಿ ನಡೆದಿರುವ ವಾದಗಳನ್ನು ನೋಡಿದರೆ, ಸೋಷಿಯ ಲಿಸ್ಟ್ ಎಂದು ಹೇಳುವವರೂ ಈ ಟೆನೆನ್ಸಿ ಬಿಲ್ಲು ಏಕೆ ಎಂದು ಹೇಳುವವರೂ ಕೆಲವರಿದ್ದಾರೆ. ಕಾಂಗ್ರೆಸ್ ಎಂದು ಹೇಳುವವರೂ ಈ ಬಿಲ್ಲು ಏಕೆಂದು ವಾದಮಾಡು ತ್ತಿದ್ದಾರೆ. ಹಾಗೆ ಹೇಳುವವರು ಇತ್ತಕಡೆಯೂ ಇದ್ದಾರೆ, ಅತ್ತಕಡೆಯೂ ಇದ್ದಾರೆ. ಅಂದಮಾತ್ರಕ್ಕೆ ನಾನು ಮಾತ್ರ ಎಲ್ಲಾ ಆಸೆ ಬಿಟ್ಟಿದ್ದೇನೆಂದು ಹೇಳುವು ದಿಲ್ಲ. ಆದರೂ, ಕಾಲಕ್ಕೆ ಸರಿಯಾಗಿ ಹೊಂದಿಕೊಂಡು ಆದಷ್ಟು ನಮ್ಮ ಆಸೆಯನ್ನು ಕಡಮೆಮಾಡಿಕೊಂಡು ಹೋಗೋಣ ಎನ್ನುವುದೇ ನನ್ನ ಸೂಚನೆ ಏಕೆಂದರೆ, ಭೂಮಿಯಿರುವವರಿಗೆ ಹಣವಿರುವವರಿಗೆ ಶತ್ರುಗಳು ಯಾರೆಂದರೆ, ದೂರದವರಲ್ಲೇನೂ ಇಲ್ಲ. ನಮ್ಮ ಮಗ್ಗುಲ ಲ್ಲಿರುವ ಬಡವರೇ ಶತ್ರುಗಳು ಆಗುತ್ತಾರೆ. ಸ್ವಾತಂತ್ರ್ಯ ಬಂದ ಮೇಲೆ ಅವರಿಗೂ ಜ್ಞಾನೋದಯ ವಾಗಿದೆ. ಶ್ರೀ ಭೀಮಪ್ಪನಾಯಕರು, ಶ್ರೀ ಚನ್ನಬಸಪ್ಪ ನಂಥವರು ಎಲ್ಲೆಲ್ಲೂ ಇದ್ದಾರೆ. ಅವರ ವಾದ ಹೇಗಿದೆ

(ಶ್ರೀ ಮಲ್ಲಿಕಾರ್ಜುನಪ್ಪಗೌಡ.)

ಯೆಂದರೆ, ಮನೆಯಲ್ಲಿ ಮುದುಕರು ಮಕ್ಕಳಿಗೆ ಹಿಂದೆ ನಾವು ಕೆಲಸಮಾಡುತ್ತಿದ್ದಾಗ ಹಾಗಿತ್ತು, ಹೀಗಿತ್ತು, ಅವನು ಹಾಗೆಮಾಡಿದ, ಇವನು ಹೀಗೆಮಾಡಿದ ಎಂತ ಹೇಳುತ್ತಿರುವ ಹಾಗಿರುತ್ತದೆ. ಕೆಲವು ಮಿತ್ರರು ಇಷ್ಟೆಲ್ಲಾ ಸರ್ಕಾರ ಏಕೆಮಾಡಬೇಕು ಎಂದು ಹೇಳಿದ್ದಾರೆ. ಕೆಲ ಮಿತ್ರರು ತಮ್ಮಲ್ಲಿ ಟೆನೆಂಟ್ಸ್‌ಗೇನೂ ಕಷ್ಟವಿಲ್ಲವೆಂದು ಹೇಳಿದರೂ, ಹೆಚ್ಚು ಜನ ಬೇರೆ ಕಡೆಗಳಲ್ಲಿ ಇದು ಅವಶ್ಯಕವೆಂದು ಹೇಳುವುದನ್ನು ಮನಗಂಡು ಇದನ್ನು ಪ್ರತಿಭಟಿಸದೆ ಇರುವುದು ಮೇಲು. ಯಾರಿಗೆ ಉಪಯೋಗ ಆಗಬೇಕೋ ಅವರಿಗಾದರೂ ಆಗಲಿ ಎಂದು ಸುಮ್ಮನೆ ಇರುವುದು ಲೇಸೆಂದು ಹೇಳಿ ನಾನು ಈ ಬಿಲ್ಲನ್ನು ಅನುಮೋದಿಸುತ್ತೇನೆ.

Member's right to continue his speech after an interval, if absent when debate begins.

(Sri H. M. Channabasappa rose)

Mr. SPEAKER.—I think the rules do not permit to allow a member to continue his speech if he is absent. When discussion commences after an interwal. Anyhow, I will look into the procedure adopted in other Legislatures and will make a statement on Monday. I do not want to cut short the privilege of any Hon'able Member. But I am sorry the rules are very clear on this point. " If any member who is so called upon does not speak, he shall not be entitled, except by the permission of the Speaker, to speak to the motion at any later stage of the debate." The rule is very clear.

*Sri H. M. CHANNABASAPPA (Periyapatna).—I would like to invite kind attention to Rule 24 of the Rules of Procedure and Conduct of Business in the Mysore Legislative Assembly. It reads as follows.—

> " 24. Unless the Speaker otherwise directs the first hour of every day of meeting shall be available for the asking and answering of questions."

I would like to submit respectfully to the Chair that rule 24 requires that the first hour of the business is meant for asking and answering of questions, unless it is otherwise directed. I think the Hon'ble Members in this House have reason to take that the first hour is for the questions. That is point No. 1. Rule 150 says.

> " 150. (1)......If any member who is so called upon does not speak, he shall not be entitled, except by the permission of the Speaker, to speak to the motion at any later stage of the debate."

"*At a later stage of the debate*". It does not specify at what stage the Speaker may permit him to speak. I should like to submit that it is exclusively at the discretion of the Hon'ble Speaker to permit or not. I should like to further submit that I do not want to take much time of this House. I would like to draw the attention to the fact that the Tenancy Bill is of far-reaching consequence and the Bill is calculated to change the entire psychology of agricultural economy and we want such an economy to take place. I want to make out a good case for changing that psychology in the proper direction. I would like to submit to the Speaker that I may be permitted to speak at this stage. Because if I had repeat to many of these things, I am compelled out of circumstances to repeat them again, though that would not be in the interests of economic use of the time of the House. I should like to request the Hon'able Speaker to exercise his discretion at this stage and permit me to speak.

*Sri B. HUTCHE GOWDA (Turuvekere).—Even otherwise the Speaker can permit the Hon'ble Member to speak for the second time.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು)—ಈಗ ಅವರು ಹೇಳಿದ ಹಾಗೆ, ಒಂದುವೇಳೆ ಅವರು ಸಕಾಲದಲ್ಲಿ ಇಲ್ಲಿಗೆ ಬಂದಿದ್ದು, ಅವರೇ ' First Speaker for the day ' ಆಗಿದ್ದರೆ ಅವರಿಗೆ first preference ಕೊಡಬಹುದಾಗಿತ್ತು. ಆದರೆ ಅವರು ಸಕಾಲಕ್ಕೆ ಬರದೆಯಿದ್ದ ಮೇಲೆ ಆ chance ನ್ನು ಬೇರೆಯವರಿಗೆ ಕೊಡಲಾಯಿತು. ಆದಕಾರಣ ಅವರು ಹೇಳಿದ ರೂಲ್ಸ್ ಪ್ರಕಾರ ಅವರಿಗೆ ಅಧಿಕಾರವಿಲ್ಲ.

ಎರಡನೆಯದಾಗಿ ಅವರು ತಾವು ಮಾತನಾಡಿ ಸದಸ್ಯರುಗಳ ಮನಸ್ಸಿನ psychologyಯನ್ನು ಬದಲಾವಣೆ ಮಾಡಬೇಕೆಂದಿದ್ದೇನೆಂದು ಹೇಳುತ್ತಾ, ತಾವೊಬ್ಬರೇ ಈ ಬಿಲ್ಲನ್ನು ಅರ್ಥಮಾಡಿಕೊಂಡಿರುವ ಹಾಗೂ,

---

* Asterisk indicates that the speech has not been revised by the Member concerned.

ಇನ್ನ್ಯಾರೂ ಅರ್ಥಮಾಡಿಕೊಂಡಿಲ್ಲವೆನ್ನುವ ಹಾಗೂ ಅವರು ಭಾವಿಸಿರುತ್ತಾರೆ.

Mr. SPEAKER.—No personal attack. Every member has got a right to speak. Every member is interested about this Bill. If you permit him to speak for the second time, other members may not get the opportunity to speak. But now, he cannot claim as the first speaker for the day.

*Sri H. M. CHANNABASAPPA.—He has made a personal remark against me. It is not correct on the part of the Hon'ble Member to make a personal remark.

Mr. SPEAKER.—I have asked him already not to make any personal remarks.

Sri H. M. CHANNABASAPPA.—I am only appealing to the Chair to exercise its discretion and permit me to speak as the Chair has discretion to allow the member to speak for the second time.

*Sri H. SIDDAVEERAPPA (Minister for Home and Industries).—Sir, I just wanted to speak about rule 24. No doubt rule 24 clearly says that every first hour of its business will have to be allotted for the question hour. But what happens is supposing there are no questions or all the members who have tabled questions refuse to put questions, does it mean we have to sit one hour unnecessarily?

It is the duty of every member to wait and be ready in his seat when his turn comes up. I feel, my friend has lost his chance.

(*Interruption*).

I am still on my legs, I have not yet completed.

Sir, under rule 150:

> " 150 (1) After the member who moves has spoken, other members may speak to the motion in such order as the Speaker may call upon them. If any member who is so called upon does not speak, he shall not be entitled, except by the permission of the Speaker, to speak to the motion at any later stage of the debate."

Now he has lost his right to speak, as he was not present when he was called upon by the Speaker to speak. It is an adjourned debate. When the member was not in his seat, really the House cannot wait for him. It is his duty to be present in the House. Of course, it is in your discretion according to rule 150 to allow the Honourable Member to speak only at a later stage, if you feel there is need for it. There are quite a large number of members to speak on this Bill. I believe, Sir, my friend—though I sympathise with him,—has forfeited his right to speak now.

9 A.M.

Sri H. M. CHANNABASAPPA.—Thank you for your crocodile tears. Where is it stated that I shall speak last?

Sri H. SIDDAVEERAPPA.—Rule 150 is clear on the point. If at all you have to speak, it is at the mercy of the Speaker. Sri M. Linganna has also stated that if an Hon'ble Member is called upon to speak and he does not speak, the rule says that he shall not be entitled to speak except with the permission of the Speaker. Even then he can be permitted to speak at any later stage of the debate—at a later stage when all other Members have had their chances.

*Sri M. LINGANNA (Nanjangud).—Sir, though the matter seems to be very simple, I wish to submit that this is a matter of right and therefore is of paramount importance to the Members concerned. The attitude taken by the Treasury Bench seems to be very strange. Willy nilly, my name has also been dragged in. I only casually remarked that the rule is very specific and left it at that. I did not explain myself as to the very specific application of that rule in question. The Rule is very plain,—plain in the sense that it is left to the discretion of the Speaker to call upon the member to speak at a later stage. Which is the later stage and which is an earlier stage is a matter entirely left to the discretion of the Chair. This discretion should be used very carefully. Suppose we make a precedent to the effect that X or Y who has spoken for a number of hours is called upon to speak, could not speak because he was not present, as it happened just now, and the House

(SRI M. LINGANNA.)

were to take a decision that he should not be given a chance, then we are going to create a precedent which is bad. The right of the member concerned is involved here. It also involves the right of the Treasury Bench. It looks rather strange that the Hon'ble Minister on the Treasury Bench should interpret to the disadvantage of the Hon'ble Member and he is suggesting that Sri. Channabasappa may not be allowed to speak further. We should not take such a wrong decision and I submit to the Chair that the Member may be called upon to continue at a later stage. At what stage he should be called upon, is a matter within the discretion of the Speaker. It is not right that the right of the Members should be curtailed May be that the member has spoken for two days, but he has not finished his spech. He was in the midst of labyrinth of notions on the Tenancy Bill and that apart, he has a right to continue his speech and the Speaker will have to determine at what stage he can resume his speech. I submit that the situation demands and justice demands that he should be given the earliest chance. The right of the Member should not be taken away by giving a ruling to the effect that once a member has spoken and afterwards when he is called upon to speak, he was not found in his seat, he may not be given a further chance. The rule should be interpreted keeping the right of the member in view and in a manner which would promote that right, not to curtail it.

*Sri D. DEVARAJ URS (Hunsur).—Sir, the Hon'ble Home' Minister has a peculiar and wonderful way of his own in interpreting some of these rules. In this particular situation, Sir, the business that was likely to be taken after the question hour, had to be taken up in place of the question hour and this is a situation, I submit, Sir, where Rule 150 will not properly hold and at the present juncture, it must be read along with Rule 24 wherein it is very clearly stated that unless the Speaker otherwise directs, the first hour of every day shall be devoted for putting and answering question. Today, the situation is that the Chair was compelled to drop the questions and that time had to be utilised for other business. Had it been known that the question hour would today be utilised for business than questions the member would not have been absent. The Member concerned was under the impression that as usual questions would be taken up and he would have to continue his speech thereafter and therefore came a little late and this opportunity should not be utilised to curtail his right to speak. The Speaker has discretion to regulate the business to the best advantage. Although the Chair has discretion in the matter, the Chair will have to take into consideration Rule 24 in the present context before exercising that discretion. Therefore, I feel the Hon'ble Member has a right but the Speaker will have to permit and I suggest that he may be permitted to speak at the earliest opportunity taking into consideration, Rule 24.

*Sri Mulka GOVINDA REDDY (Chitaldrug).—I, Sir, agree with Sri Devaraj Urs and Sri M. Linganna that the discretion of the Speaker to allow a member to speak again should be exercised in favour of the Member. He should have continued his speech as soon as the question hour was over; and peculiarly today, to our utter surprise, the question hour was over within five minutes. The Hon'ble Member had spoken at length on this Bill and we hold opposite views. But all the same, he should be allowed another chance of making his speech on this all-important Bill.

Sir, Rule 150 (1) and (2) give discretion to the Speaker. It says:

> "...If any member who is so called upon does not speak..."

In this particular case, when the member was called upon, he was absent. If he were present, he would have certainly spoken. Because he was absent, he could not speak. And further it says:

> "...he shall not be entitled except by the permission of the

Speaker, to speak to the motion at any later stage of the debate."

One Member has already spoken. It does not matter if this Member who was speaking on this Bill the other day is allowed to speak again and it will not seriously affect the rights and privileges of the other members of this House.

Rule 150(2) says :

"Except in the exercise of a right of reply or as otherwise provided by these rules, no Member shall speak more than once on any motion, except with the permission of the Speaker."

Even under this Rule, the Speaker has ample powers to permit a member to speak on the Bill.

So, we request that the Speaker may kindly use his discretion and allow the Hon'ble Member Sri H. M. Channabasappa to continue his speech on this Bill.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಮೆಂಬರನ್ನು ಮಾತನಾಡಲು ಕರೆದಾಗ ಅವರು ಆ ಅವಕಾಶವನ್ನು ಉಪಯೋಗಿಸಿಕೊಳ್ಳದೇಯಿದ್ದರೆ ಅವರಿಗೆ ಪುನಃ ಮಾತನಾಡತಕ್ಕಂಥ ಹಕ್ಕಿದೆಯೆಂಬುದನ್ನು ನಾನು ಒಪ್ಪುವುದಿಲ್ಲ. ಅವರು ಆ ಹಕ್ಕನ್ನು ಕಳೆದುಕೊಂಡಿದ್ದಾರೆಂಬುದು ಖಚಿತವಾದುದು. ಆದರೆ, ಅಧ್ಯಕ್ಷರು ಅವಕಾಶಕೊಟ್ಟರೆ, ಅವರು ಕೊನೇ ಗಳಿಗೆಯಲ್ಲಿ ಮಾತನಾಡಬಹುದು. ಈಗ ಇಲ್ಲಿರುವ ಸನ್ನಿವೇಶ ತಗೆದುಕೊಂಡರೆ ಅವರಾಗಲೇ ಎರಡು ದಿವಸಗಳಿಂದ ಈ ವಿಷಯದ ಮೇಲೆ ಮಾತನಾಡಿದ್ದಾರೆ. ಈ ದಿವಸ ಅವರು ಮಾತನಾಡಬೇಕಾಗಿತ್ತು. ಅದು ನಿಗದಿಯಾಗಿಯೂ ಇತ್ತು ಮತ್ತು ಅವರಿಗೆ ಚೆನ್ನಾಗಿ ಗೊತ್ತಿತ್ತು. ಆ ಕಾಲದಲ್ಲಿ ಅವರು ಇಲ್ಲದೆ ಇದ್ದದ್ದರಿಂದ ಇತರರು ಮಾತನಾಡುವವರು ಬಹಳ ಜನ ಇರುವುದರಿಂದ ಈ ಸನ್ನಿವೇಶವನ್ನು ಹಿನ್ನೆಲೆಯಾಗಿಟ್ಟುಕೊಂಡು ಸ್ಪೀಕರ್‌ರವರು ಒಂದು ಪಕ್ಷ ಉದಾರತೆಯಿಂದ ಅವರಿಗೆ ಮಾತನಾಡಲು ಅವಕಾಶ ಕೊಡಬೇಕೆಂದಿದ್ದ ಪಕ್ಷದಲ್ಲಿ ಇನ್ನೂ ಅನೇಕರು ಮಾತನಾಡಿದ ಮೇಲೆ ಕೊನೆಯಲ್ಲಿ ಅವರಿಗೆ ಅವಕಾಶ ಕೊಡಬಹುದೇ ಹೊರತು, ಈಗ ತಕ್ಷಣ ಕೊಡುವುದಕ್ಕೆ ಅವಕಾಶವೇ ಇಲ್ಲವೆಂದು ಭಾವಿಸಿಕೊಂಡಿದ್ದೇನೆ.

ಆಮೇಲೆ ಪ್ರಶ್ನೋತ್ತರಗಳ ಕಾಲದ ವಿಷಯ ಹೇಳಿದರು. ಈಗಾಗಲೇ ಪ್ರೀಸಿಡೆಂಟ್ಸ್ ಇವೆ. ಅನೇಕ ದಿವಸಗಳು ಈ ಪ್ರಶ್ನೋತ್ತರ ಕಾಲದಲ್ಲಿ ಪ್ರಶ್ನೆಗಳು ಮುಗಿದುಹೋದತಕ್ಷಣ ಬೇರೆ ಸಬ್‌ಜೆಕ್ಟುಗಳು ಪ್ರಾರಂಭವಾಗಿವೆ. ಕೆಲವು ದಿನಸಗಳಲ್ಲಿ ಪ್ರಶ್ನೆಗಳು ಕೇವಲ $\frac{1}{2}$ ಗಂಟೆಯಲ್ಲೇ ಮುಗಿದುಹೋಗಿ ಬೇರೆ ಸಬ್‌ಜೆಕ್ಟುಗಳನ್ನು ತೆಗೆದುಕೊಳ್ಳಲಾಗಿದೆ. ಆದ್ದರಿಂದ question hour ಅನ್ನುವುದು ಪೂರ್ತಿ ಒಂದು ಗಂಟೆ ಎಂದು ಹೇಳಿ ಮಾನಲಾಗಿಟ್ಟಿದೆ ಎನ್ನುವುದರಲ್ಲಿ ಅರ್ಥವಿಲ್ಲ.

Sri D. DEVARAJ URS.—Let him clearly read Rule No. 24.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನಾನೂ ಓದಿದ್ದೇನೆ. ಮೊನ್ನೆದಿವಸ ಉದಾಹರಣೆ ಕೊಟ್ಟಹಾಗೆ ಪುನಃ ಅದನ್ನೇ ಪುನರುಕ್ತಿಮಾಡುವುದಿಲ್ಲ. ನಾನು ತಿಳಿದುಕೊಂಡಿರುವ ಹಾಗೆ question hour ಅನ್ನುವುದು 15 ನಿಮಿಷ ಆಗಬಹುದು, ಅರ್ಧಗಂಟೆ ಆಗಬಹುದು. ಇರತಕ್ಕ ಒಂದು ಗಂಟೆಯನ್ನು ಉಪಯೋಗಿಸಿಕೊಳ್ಳದಿದ್ದರೆ ಬೇರೆ subject ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ ಎಂದು ತಿಳಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಈ ವಿಚಾರದಲ್ಲಿ ದೊಡ್ಡ ಚರ್ಚೆ ಆಗುವುದು ಅನಾವಶ್ಯಕ. ನೆನ್ನೆ ದಿವಸ ಶ್ರೀಮಾನ್ ಚನ್ನಬಸಪ್ಪನವರು ಮಾತನಾಡಿದ್ದಾರೆ. ಅವರು ಮಾತನಾಡುತ್ತಾ ಇರುವಾಗ ಹೇಳಿದ್ದನ್ನೇ ಪುನಃ ಪುನಃ ಹೇಳುತ್ತಾ ಇದ್ದಾರೆ ಎಂದು ಹೇಳಿ ಈ ಮಸೂದೆಯನ್ನು ಮಂಡಿಸಿದ ಮಾನ್ಯ ಮಂತ್ರಿಗಳು ತಮ್ಮ ಗಮನಕ್ಕೆ ತಂದಿದ್ದಾರೆ. ಅವರು ಪುನರುಚ್ಚಾರಣೆ ಮಾಡುವುದಕ್ಕೆ ಕಾರಣವೇನೆಂಬುದನ್ನು ಹೇಳಿದ್ದಾರೆ. ಏನು ವಾದ ಹೂಡುತ್ತಾರೆಯೋ ಅದು ಸಭಿಕರ ಮನಸ್ಸಿಗೆ ಬರಬೇಕಾದರೆ ಹಿಂದೆ ಏನುಹೇಳಿದ್ದರೋ ಅದನ್ನು ಜ್ಞಾಪಿಸಬೇಕಾದ ಅಗತ್ಯವಿದೆ ಎಂಬುದನ್ನು ವಿವರಿಸಿದ್ದಾರೆ. ಹೀಗಿದ್ದರೂಸಹ ಚನ್ನಬಸಪ್ಪನವರು ಈ ಮಸೂದೆಯ ಮೇಲೆ ಹೆಚ್ಚು ಕಾಲ ಭಾಷಣಮಾಡಿ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕೊಡಬಾರದು ಎಂಬ ದೃಷ್ಟಿಯಿಂದ, ಮಂತ್ರಿ ವರ್ಗದವರು, ಮುಖ್ಯವಾಗಿ ಈ ಮಸೂದೆಯನ್ನು ಮಂಡಿಸಿದ ರೆವೆನ್ಯೂ ಮಂತ್ರಿಗಳು, ಅವರ ಭಾಷಣಕ್ಕೆ ಅಡ್ಡಿ ಆತಂಕ ತರುತ್ತಾ ಇದ್ದಾರೆ ಎಂದು ನನಗೆ ಎನ್ನಿಸುತ್ತಾ ಇದೆ. ಕೂಲಂಕಷವಾಗಿ ಈ ಮಸೂದೆಯ ಮೇಲೆ ಚರ್ಚೆಮಾಡಿ, ಸಭಿಕರ ಮನಸ್ಸನ್ನು ಸೆಳೆದು ಈ ಮಸೂದೆಗೆ ವಿರೋಧವಾಗಿ ಏನಾದರೂ ಅಭಿಪ್ರಾಯ ವ್ಯಕ್ತಪಡಿಸಿ ಒಂದು ವಾತಾವರಣವನ್ನುಂಟುಮಾಡುತ್ತಾರೆಯೋ ಏನೋ ಎಂದು ಭಾವಿಸಿ, ಅವರು ಮಾತನಾಡದ ಹಾಗೆ ಬಾಯಿ ಕಟ್ಟಬೇಕೆಂಬ ಉದ್ದೇಶದಿಂದ ಈ ರೀತಿ ಮಂತ್ರಿಗಳು ಮಾಡುತ್ತಾ ಇದ್ದಾರೆ ಎಂದು ಸಂಶಯ ಬರುತ್ತಿದೆ. ರೂಲ್ಸ್ ಪ್ರಕಾರ ಸಭಾಧ್ಯಕ್ಷರಿಗೆ ಅಧಿಕಾರವಿದೆ. ತಾವು ಶ್ರೀಚನ್ನಬಸಪ್ಪನವರಿಗೆ ಅವಕಾಶಕೊಡಬಹುದು ಅಥವಾ ಕೊಡದೇಇರಬಹುದು. ಆದರೂ, 'ಅವರು ಸಭೆಗೆ ಲೇಟ್ ಆಗಿ ಬಂದರು, ಮುಂದೆ ನೋಡೋಣ" ಎಂದು ತಾವು ಅಪ್ಪಣೆ ಕೊಡಿಸಿದಿರಿ ಎಂದು ಹೇಳುತ್ತಾರೆ. ಅದು ತಮಗೆ ಬಿಟ್ಟಿದ್ದು. ತಮ್ಮಲ್ಲಿ ನನ್ನ ಅರಿಕೆ ಏನೆಂದರೆ, ಇದು ಒಂದು ಬಹಳ ಪ್ರಾಮುಖ್ಯವಾದ ಮಸೂದೆ. ಈ ವಿಷಯದಲ್ಲಿ ಅನೇಕ ಅಂಕಿಅಂಶಗಳು ಮತ್ತು ವಿವರಗಳನ್ನು ಚರ್ಚೆ ಮಾಡುವುದು, ಪ್ರಸ್ತಾಪಮಾಡುವುದು ಅಗತ್ಯವಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇದರ ಪರಿಣಾಮ ದೇಶದ ಮೇಲೆ ಬಹಳ ಮಹತ್ತರವಾದದ್ದಾಗಿದೆ. ಇದು ಜಾರಿಗೆ ಬರುವುದಾದರೆ, ಬದಲಾವಣೆ ಆಗುವುದಾದರೆ, ಬಹಳ ಪರಿಣಾಮಕಾರಿಯಾಗುತ್ತದೆ. ಆದ್ದರಿಂದ ಇಂಥ ಸಂದರ್ಭದಲ್ಲಿ ಚರ್ಚೆಮಾಡುವುದಕ್ಕೆ ಯಾರಿಗೇ ಆಗಲಿ ಅವಕಾಶವಿಲ್ಲ, ರೂಲ್ಸ್ ಪ್ರಕಾರ ಕಾಲ ಮೀರಿ ಹೋಯಿತು, ತಡ ಆಯಿತು ಎಂಬುದನ್ನು ಗಮನಿಸದೇ ಶ್ರೀ ಚನ್ನಬಸಪ್ಪನವರು ಏನುಹೇಳಬೇಕೋ ಅದನ್ನು ಹೇಳಲು ಅವರಿಗೆ ಅವಕಾಶ ಕೊಡಬಹುದು. ಅವರ ವಾದ ಸರಣಿಯ ಒಂದು ಧಾಟಿ ಏಸಿದೆ ಅದನ್ನು ಅವರು ಮುಗಿಸಿದ ಮೇಲೆ ಬಾಕಿಯವರಿಗೆ ಅವಕಾಶ ಕೊಡಬೇಕು. ಇದರಿಂದ ಒಂದು ವೇಳೆ ನಿಯಮ

(ಶ್ರೀ ಎಚ್. ಕೆ. ವೀರಣ್ಣಗೌಡ.)

ನಿಬಂಧನೆಗಳಿಗೆ ತೊಡಕು ಬರುತ್ತದೆ ಎನ್ನುವಹಾಗಿದ್ದರೆ, ತಮಗೆ ಅಧಿಕಾರ ಇದೆ. ಅದನ್ನು ನಿವಾರಿಸಿ ಅವರಿಗೆ ಅವಕಾಶ ಕೊಡುವುದು ಸೂಕ್ತ. ಕೇವಲ ಟೆಕ್ನಿಕಲ್ ಗ್ರೌಂಡ್ಸ್ ಮೇಲೆ ಅವಕಾಶವಿಲ್ಲ ಎಂದು ವಾದ ಮಾಡುವುದು ಸರಿಯಾದದ್ದಲ್ಲ ಎಂದು ನನ್ನ ಅಭಿಪ್ರಾಯ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಈಗ ಎರಡು ದಿವಸಗಳ ಹಿಂದೆ ಶ್ರೀಮಾನ್ ಚೆನ್ನಬಸಪ್ಪನವರು ಟೆನೆನ್ಸಿ ಬಿಲ್ ಮೇಲೆ ಮಾತನಾಡಿದ್ದನ್ನು ಕೇಳಿದ್ದರ ಮೇಲೆ ಇದು ಬಹಳ ಮುಖ್ಯವಾದ ವಿಷಯ ಎಂದು ನನಗೆ ಅರ್ಥವಾಗಿದೆ. ಇಷ್ಟು ದೊಡ್ಡ ವಿಷಯ ಚರ್ಚೆಮಾಡ ತ್ತ ಇರುವಾಗ ಮಾತನಾಡಲು ಉತ್ಸಾಹವಿರತಕ್ಕ ಒಬ್ಬ ಮಾನ್ಯ ಸದಸ್ಯರಿಗೆ ಅವಕಾಶ ಕೊಡದೇ ಇದ್ದರೆ ದೇಶದ ಮೇಲೆ ಅದರ ಪರಿಣಾಮ ಒಳ್ಳೆಯದಾಗಲಿಕ್ಕಿಲ್ಲ. ಎಲ್ಲರೂ ವಿದ್ಯಾವಂತರಾಗಿದ್ದರೂ ಸಹ ಇಂಥ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಟೆನೆನ್ಸಿ ಆಕ್ಟು ಎಂಬುದು ಯಾರಿಗೆ ಅರ್ಥವಾಗಿದೆ ಎಂದು ಹೇಳುತ್ತಾರೆಯೋ ಅಂಥವರಿಗೆ ಅವಕಾಶ ಕೊಡಬೇಕೇ ಹೊರತು, ನಮ್ಮಂಥವರಿಗೆ ಅವಕಾಶಕೊಟ್ಟರೆ ಒಂದೆರಡು ಮಾತು ಹೇಳಬಹುದೇ ಹೊರತು ಹೆಚ್ಚಾಗಿ ಹೇಳಲಿಕ್ಕೆ ಸಾಧ್ಯವಿಲ್ಲ. ಒಂದು ಕಾನೂನು ಎಂದರೆ ದೇಶದ ಜನಕ್ಕೆ ಹಿತವಾಗಬೇಕು, ಒಳ್ಳೆಯದಾಗಬೇಕು ಎಂದು ತಿಳಿದುಕೊಂಡು ಅಭಿಪ್ರಾಯಗಳನ್ನು ಹೇಳಬೇಕಾಗುತ್ತದೆ. ಈ ಪ್ರಜಾಪ್ರಭುತ್ವದಲ್ಲಿ ಒಂದನ್ನು ಜ್ಞಾಪಕಕ್ಕೆ ಬರುತ್ತದೆ. ಪ್ರಜೆಗಳೆಲ್ಲರೂ ಒಳ್ಳೆಯದು ಎಂದು ಒಪ್ಪಿಬಿಟ್ಟರೆ ಅದೇ ಸಿದ್ಧಾಂತ, ಅದೇ ಕಾನೂನು ಎಂದು ಹೇಳುವುದಾದರೆ ಯಾರಾದರೂ ಒಬ್ಬ ಮನುಷ್ಯ ಬದುಕಿದ್ದರೂ ಕೂಡ ಅನೇಕರು ಸತ್ತುಹೋದ ಎಂದು ಹೇಳಿಬಿಟ್ಟರೆ ಅವನನ್ನು ಹೂಳುವುದಕ್ಕಾಗುತ್ತದೆಯೋ ? ಜನರು ಹೇಳಿಬಿಟ್ಟರೆ ಆಯಿತಲ್ಲಾ ! ಆ ರೀತಿ ಅಲ್ಲ. ವಿಷಯ ಚೆನ್ನಾಗಿ ಹೇಳಬೇಕಾದರೆ ಪ್ರತಿಯೊಬ್ಬರಿಗೂ ಅವಕಾಶಕೊಟ್ಟು ಎಲ್ಲರೂ ಒಪ್ಪಿಕೊಂಡು ಕಾನೂನು ಮಾಡಬೇಕಾದದ್ದು ದೊಡ್ಡ ವಿಷಯ. ಇದು ದೇಶದ ಆಗುಹೋಗುಗಳಿಗೆ ಸಂಬಂಧಪಟ್ಟ ಪ್ರಶ್ನೆ. ಯಾರೊಬ್ಬರ ಮನಸಿನಲ್ಲೇ ಆಗಲಿ ಸಂಶಯವಿದ್ದರೆ ಅದು ನಿವಾರಣೆಯಾಗಬೇಕು. ಅಷ್ಟೇ ಹೊರತು ಅನೇಕರು ಒಪ್ಪಿದ್ದಾರೆ, ಆದ್ದರಿಂದ ಕಾನೂನು ಆಗಬೇಕು ಎಂದು ಹೇಳಿ ಮಾಡುವುದು ಸರಿಯಾದದ್ದಲ್ಲ. ಕಾನೂನಿಗೆ ಒಳಪಟ್ಟು ಎಲ್ಲರ ಮನಸ್ಸನ್ನೂ ಒಪ್ಪಿಸಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಶ್ರೀಮಾನ್ ಚೆನ್ನಬಸಪ್ಪನವರಿಗೆ ಅವಕಾಶ ಕೊಡುವುದು ನ್ಯಾಯ ಎಂದು ನಾನು ಹೇಳುತ್ತೇನೆ.

Mr. SPEAKER.—I want to bring to the notice of the Hon'ble Members that it is no use appealing to the sympathy of the Speaker. I want the correct interpretation of the rules. I am mainly guided by the interpretation of the rules as passed and approved by the Legislature. Therefore, I want enlightenment. Hon'ble Members can speak on the interpretation of the rules and I welcome it.

*ಶ್ರೀ ವಿ. ವೆಂಕಟಪ್ಪ (ಚೆನ್ನಪಟ್ಟಣ).—ಸ್ವಾಮಿ, ಈಗ ಉಂಟಾಗಿರತಕ್ಕ ಪರಿಸ್ಥಿತಿ ಬಹಳ ವಿಚಿತ್ರವಾಗಿದೆ. ಸಾಧಾರಣವಾಗಿ ಒಂದು ಗಂಟೆಯ ಕಾಲ ಪ್ರಶ್ನೋತ್ತರಗಳು ನಡೆಯುತ್ತವೆ ಎಂಬ ಭಾವನೆ ಸಾಮಾನ್ಯವಾಗಿ ಎಲ್ಲ ಸದಸ್ಯರಲ್ಲೂ ಉಂಟು. ಒಂದು ವೇಳೆ ಮೊದಲು ಯಾರ ಪ್ರಶ್ನೆ ಬಂದಿತೋ ಅದನ್ನು ಕರೆದಾಗ ಅವರು ಇಲ್ಲದೇ ಇದ್ದರೆ ಅವರ ಹಕ್ಕು ಹೋಯಿತು, ಮುಂದೆ ಕೇಳುವ ಹಾಗಿಲ್ಲ, ಎಂದು ತಾವು ಇದುವರೆಗೂ ಮಾಡಿಲ್ಲ. ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೀರಿ. ಸದಸ್ಯರಾಗಲಿ, ಸಂಬಂಧಪಟ್ಟ ಮಂತ್ರಿಗಳಾಗಲಿ ಇಲ್ಲದೇ ಇದ್ದರೆ ಅವರು ಬಂದನಂತರ ಪುನಃ ತೆಗೆದುಕೊಳ್ಳುತ್ತೀರಿ. ತಾವು ಈಗ ಏನು ಇಂಟರ್‌ಪ್ರಿಟೇಷನ್ ಹೇಳುತ್ತಾ ಇದ್ದೀರಿ ? ಒಬ್ಬ ಸದಸ್ಯರನ್ನು ಕೂಗಿದಾಗ ಅವರು ಇಲ್ಲದೇ ಇರುವ ಪಕ್ಷದಲ್ಲಿ ಆತನಿಗೆ ಭಾಷಣಮಾಡಲು ಇರತಕ್ಕ ಒಂದು ಅವಕಾಶ ಹೋಯಿತು ಎನ್ನುವುದು, ಯಾವ ವಿಷಯದಲ್ಲಿ ಚರ್ಚೆ ಪ್ರಾರಂಭವಾಗಿದೆಯೋ, ಆ ವಿಷಯ ತೆಗೆದುಕೊಂಡ ಕಾಲದಲ್ಲಿ ಆ ಸದಸ್ಯರು ಇಲ್ಲದೇ ಇದ್ದಿದ್ದರೆ ಸರಿಹೋಗುತ್ತಿತ್ತು. ಈಗ ಆಗಿರತಕ್ಕದ್ದು ಹೇಗೆ ಎಂದರೆ, ಪ್ರಶ್ನೆಗಳನ್ನು ಹಾಕಿದ ಸದಸ್ಯರು ಇಲ್ಲದೇ ಇದ್ದಿದ್ದರಿಂದ ಒಂದು ವಿಶೇಷ ಪರಿಸ್ಥಿತಿ ಒದಗಿತು. ಇದು ಒಂದು peculiar situation. ಆದ್ದರಿಂದ ಅವರಿಗೆ ಅವಕಾಶ ಕೊಡಬಹುದಾಗಿತ್ತು. ಒಂದು ವೇಳೆ ತಾವು ಹಾಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ, ಒಬ್ಬ ಸದಸ್ಯರ ಹೆಸರನ್ನು ಕೂಗಿದಾಗ ಅವರು ಇಲ್ಲದೇಹೋದರೆ ಅವರು ಬಂದ ಮೇಲೆ ಏಕೆ ಅವಕಾಶ ಕೊಡುತ್ತೀರಿ ಎನ್ನುವುದು ಅರ್ಥವಾಗುವುದಿಲ್ಲ. ಆದ್ದರಿಂದ ತಾವು ಏನು ಒಂದು ಇಂಟರ್‌ಪ್ರಿಟೇಷನ್ ಕೊಡುತ್ತಾ ಇದ್ದೀರೋ, ಅದು ಸರಿಯಲ್ಲ. ಮಂತ್ರಿಗಳು ಇಲ್ಲದೇ ಇದ್ದರೆ ಅವರು ಬಂದಾಗ ಮತ್ತೆ ಪುನಃ ಅವರಿಗೆ ಹೇಗೆ ಅವಕಾಶವನ್ನು ಕೊಟ್ಟು ಮಾತನಾಡುವುದಕ್ಕೆ ಅನುಕೂಲಮಾಡಿಕೊಡುತ್ತೀರೋ, ಅದೇ ರೀತಿ ಸದಸ್ಯರಾದವರಿಗೂ ಕೂಡ ಅನುಕೂಲಮಾಡಿಕೊಡಬೇಕು. ಮಾನ್ಯ ಚೆನ್ನಬಸಪ್ಪನವರು ಹಿಂದೆ ಮಾತನಾಡಿದ್ದರು ; ಈ ದಿವಸ ಮಾತನಾಡಬೇಕಾಗಿದೆ ಎಂದು ಅವರಿಗೂ ಗೊತ್ತಿತ್ತು. ಅವರು ಆ ಕಾಲದಲ್ಲಿ ಬರುವುದಕ್ಕೆ ಸಿದ್ಧವಾಗಿದ್ದರು. ಆದರೆ ಈ ಒಂದು peculiar situation ಉಂಟಾದದ್ದರಿಂದ, ಅವರು ಸ್ವಲ್ಪ ತಡವಾಗಿ ಬಂದರು ಎಂದು ಹೇಳಿ ಅವರಿಗೆ ಮಾತನಾಡುವುದಕ್ಕೆ ಅವಕಾಶವೇ ಇಲ್ಲ ಎಂದು ಹೇಳತಕ್ಕ ವಾದ ಸರಿಯಲ್ಲ. ರೂಲ್ಸನ್ನು ಇಂಟರ್‌ಪ್ರಿಟ್ ಮಾಡುವುದಾದರೆ-ಶ್ರೀ ಚನ್ನಬಸಪ್ಪನವರಿಗೆ ಅವಕಾಶ ಕೊಡಬೇಕು ಎಂಬ ದೃಷ್ಟಿಯಿಂದ ಹೇಳುತ್ತಾ ಇಲ್ಲ—ಇಂಟರ್‌ಪ್ರಿಟೇಷನ್ ಮಾಡುವಾಗ ಸರಿಯಾಗಿ ಮಾಡಬೇಕು, ಸದಸ್ಯರಿಗೆ ಇರತಕ್ಕ ಹಕ್ಕು ಮೋಟಕಾಗತಕ್ಕ ರೀತಿಯಲ್ಲಿ ಅದಾಗಬಾರದು, ಅದನ್ನು ಕಾಪಾಡತಕ್ಕದ್ದು ತಮ್ಮ ಧರ್ಮ ಎಂಬ ದೃಷ್ಟಿಯಿಂದ ಅವರಿಗೆ ಅವಕಾಶ ಕೊಡುವುದು ನ್ಯಾಯ ಎನ್ನುವುದನ್ನು ಹೇಳುವುದಕ್ಕೆ ನಾನು ಈ ಮಾತನ್ನು ಹೇಳಿದ್ದೇನೆ.

*Sri **B. NARAYANASWAMY.** (Mysore City South).—Rule 150 reads like this :

> " After the member who moves has spoken, other members may speak to the motion in such order as the Speaker may call upon them. If any member who is so called upon does not speak, he shall not be entitled, except by the permission of the Speaker, to speak to the motion at any later stage of the debate."

This rule could be used when a member is called upon to speak. In this case, Sri Channabasappa was not called upon to speak. As a matter of fact, he took his chance and, as I have said, this rule cannot be applied. It is only in a case where a member is called upon to speak and he does not speak and after some other members speak, he wants to speak, then only the Speaker can exercise his discretion in allowing the member to speak at a later stage. The Hon'ble Member for Periyapatna was not called upon to speak and he did not speak. As a matter of fact he took his chance and was prepared to speak. As such, the question of 'later stage' and that he should speak at some time else, does not arise.

Even otherwise, Sri Channabasappa has not lost his chance. The interpretation of the term 'later stage' has to be put by the Speaker. The later stage may come immediately after any member has spoken. Now my friend Sri Mallikarjunappa Gowda has spoken. The later stage might be the stage after this member has spoken. After all, it is a matter of degree that counts, not the time and as such, Sri Channabasappa may be asked to continue his speech because he was not, as a matter of fact, directed to speak, but he has come here to take his chance and he is ready to speak. So he may be asked to speak.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಶ್ರೀಮಾನ್ ಚನ್ನಬಸಪ್ಪನವರು ಮೊನ್ನೆ ಟೆನೆನ್ಸಿ ಬಿಲ್ಲಿನ ಮೇಲೆ ಮಾತನಾಡುತ್ತಿದ್ದಾಗ ಆ ದಿವಸ ವೇಳೆ ಆಗಿದ್ದರಿಂದ ತಾವು ಅವರಿಗೆ ಮಾರನೆ ದಿವಸ ಮುಂದುವರಿಸಬಹುದೆಂದು ಆಗ ಹೇಳಿದ್ದಿರಿ. ಆದರೆ ಈಗಾಗಲೇ ಈ ಮಸೂದೆ ಪಾಸಾಗದೆ ನಿಂತು ಬಹಳ ದಿವಸಗಳಾಗಿವೆ. ಇಂಥ ಚರ್ಚೆಗಳಲ್ಲಿ ಕಾಲ ಕಳೆದು ಬಿಲ್ಲಿನ ಪ್ರಾಮುಖ್ಯತೆಯನ್ನೇ ಕೈಬಿಡುತ್ತಿದ್ದೇವೆ. ಇದರಿಂದ ಮುಂದಿನ ಪರಿಣಾಮ ಏನಾಗುತ್ತದೆ ಎನ್ನುವುದನ್ನು ತಾವು ಗಮನಿಸಿರುವಂತೆ ಕಾಣುವುದಿಲ್ಲ. ಈ ಪರಿಣಾಮವೇನಾದೀತೆಂಬುದನ್ನು ತಾವು ಆಲೋಚನೆ ಮಾಡಿ ನೋಡಬೇಕಾದ್ದು ಮುಖ್ಯ. ಈದಿವಸ ಈ ಸಭೆಯಲ್ಲಿರತಕ್ಕಂಥ ಮಾನ್ಯ ಸದಸ್ಯರಲ್ಲಿ ಅನೇಕರಿಗೆ ಎರಡು ದಿವಸ ಗಟ್ಟಲೆ ನಿಂತುಮಾತನಾಡುವಂಥ ಶಕ್ತಿ ಇದೆ. ಅವರಿಗೆ ಪೂರ್ತಿ ಕಾಲ ಮಾತನಾಡಲು ಅವಕಾಶ ಕೊಟ್ಟರೆ ಬೇರೆ ಸದಸ್ಯರಿಗೆ ಮಾತನಾಡಲು ಅವಕಾಶವಿರುವುದಿಲ್ಲ, ಎಂದು ಹೀಗೆ ಹೇಳುತ್ತಿದ್ದೀರಿ. ಈಗ ಈ ಆಕ್ಟ್ ದೇಶಾದ್ಯಂತವೂ ಜಾರಿಗೆ ಬರತಕ್ಕದಾಗಿದೆ. ಈ ಮಾನ್ಯ ಸಭೆಯಲ್ಲಿ ನಾವೀಗ ಲಕ್ಷಾಂತರ ಜನರ ಓಟನ್ನು ಪಡೆದುಕೊಂಡು ಬಂದು ಕುಳಿತಿದ್ದೇವೆ. ಒಂದು ಲಕ್ಷ ಜನರಿಗೆ ಒಬ್ಬ ಸದಸ್ಯರು ....

ಅಧ್ಯಕ್ಷರು.—ತಾವು ಏನಾದರೂ ಮಾತನಾಡುವುದಾಗಿದ್ದರೆ ರೂಲ್ಸು ಮತ್ತು ಕಾನೂನುಗಳು ಏನು ಹೇಳುತ್ತವೆ ಎನ್ನುವುದನ್ನು ನೋಡಿ ಮಾತನಾಡಬೇಕಾಗಿದೆ.

ಶ್ರೀ ಶಿವನಂಜೇಗೌಡ.—ಇದರ ಮೇಲೆ ಮಾತನಾಡತಕ್ಕವರು ಮುಖ್ಯವಾಗಿ ಹಳ್ಳಿಗಳಿಂದ ಬಂದಂಥ ಜನಗಳಿಗೇ ಹೆಚ್ಚು ಅವಕಾಶವಿರಬೇಕು. ಇದು ದೇಶಾದ್ಯಂತವೂ ಅನ್ವಯಿಸಬೇಕಾಗಿದೆ. ಇದನ್ನು ಜಾಗ್ರತೆ ಜಾರಿಗೆ ತರದಿದ್ದಲ್ಲಿ ದೇಶದಲ್ಲಿ ಒಂದು ದೊಡ್ಡ ಆಂದೋಳನವೇ ಉಂಟಾದೀತು. ಈ ಪಟ್ಟಣದಲ್ಲಿ ಕುಳಿತಿರುತಕ್ಕಂಥ ಲಾಯರುಗಳಿಗೆ ಇದರ ವಿಚಾರ ಅಷ್ಟಾಗಿ ಗೊತ್ತಿಲ್ಲ......

*Sri S. GOPALA GOWDA (Sagar-Hosanagar).—The question now is not about the individual member. The only question is, as I have understood, whether a member must be allowed to continue his speech even if he comes after discussion on the Bill commenced and after some other member was allowed to speak. What Sri Shivananje Gowda is speaking, about the merit of the member, does not arise here.

ಅಧ್ಯಕ್ಷರು.—ಈಗ ತಾವು ಮಾತನಾಡುತ್ತಿರುವುದು ಕಾನೂನಿನ ನಿಯಮಗಳಿಗೆ ಸಂಬಂಧಪಡುವುದಿಲ್ಲ. ಈಗ ಸಭೆಯ ಮುಂದೆ ಚರ್ಚೆಯಾಗುತ್ತಿರುವ ವಿಚಾರ ಶ್ರೀ ಚನ್ನಬಸಪ್ಪನವರಿಗೆ ಕಾನೂನು ಪ್ರಕಾರ ಈಗ ಪುನಃ ಮಾತನಾಡುವುದಕ್ಕೆ ಅವಕಾಶವಿದೆಯೋ ಅಥವಾ ಇಲ್ಲವೇ ಎನ್ನುವುದು.

ಶ್ರೀ ಶಿವನಂಜೇಗೌಡ.—ಕಾನೂನು ಪ್ರಕಾರ ಕೇಳುವುದಕ್ಕೆ ನನಗೂ ಅಧಿಕಾರವಿದೆ. ಆದರೆ ಈಗ ಮಾತನಾಡಿದ ಮಾನ್ಯಸದಸ್ಯರು ಏನೇನೋ ಇಂಗ್ಲೀಷಿನಲ್ಲಿ ಹೇಳಿದರು ಹೋಗಲಿ. ಈ ಹಿಂದೆಯೇ ಅವರಿಗೆ ಮಾತನಾಡಲು ಅವಕಾಶ ಇರಬೇಕೆಂದು ಹೇಳಿತ್ತು. ಈಗಲೂ ಅದರಂತೆ.........

*Sri N. C. NAGIAH REDDY (Goribidanur).—Rule 24 is quite clear on this point. It is to be read with rule 150. You have got every discretion to exercise. Of course, we do not want any sympathy for Sri Channabasappa and Sri Channabasappa loses nothing. But I feel that he can effectively speak for certain good cause and the rules are quite clear and you have got every discretion to use. I feel that you will be exercising yourd iscretion quite correctly in allowing Sri Channabasappa to speak today.

*ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮಾಲೂರು).—ಇಂಥ ಒಂದು ಪರಿಸ್ಥಿತಿ ಈ ಮಾನ್ಯ ಸಭೆಯಲ್ಲಿ ಎಂದೂ ಉದ್ಭವಿಸಿರಲಿಲ್ಲ ಅಂಥ ಕಾಣುತ್ತದೆ. ಈಗ ಮಾತನಾಡುತ್ತಿರುವಂಥ ಮಾನ್ಯ ಸದಸ್ಯರು ಮಾತನಾಡಿರತಕ್ಕದ್ದನ್ನು

(ಶ್ರೀ ಎಚ್. ಸಿ. ಲಿಂಗಾರೆಡ್ಡಿ.)

ನೋಡಿದರೆ ವಿಷಯ ಎಷ್ಟು ಪ್ರಾಮುಖ್ಯವಾದುದು ಎನ್ನುವುದರ ಕಡೆಗೆ ಹೆಚ್ಚಿನ ಗಮನ ಕೊಡದೆ ಭಾಷಣ ಎಷ್ಟು ಚೆನ್ನಾಗಿ ಮಾಡುತ್ತಾರೆ, ಎನ್ನುವುದರ ಕಡೆಗೆ ಹೆಚ್ಚಿನ ಗಮನ ಕೊಟ್ಟರೋಹಾಗೆ ಕಂಡುಬರುತ್ತಿದೆ. ಶ್ರೀ ಚೆನ್ನಬಸಪ್ಪನವರೇನೋ ಅನೇಕ ವಿಷಯಗಳನ್ನು ಈಗಾಗಲೇ ತಿಳಿಸಿದ್ದಾರೆ, ಇನ್ನೂ ಅನೇಕ ವಿಷಯಗಳನ್ನು ಅವರು ತಿಳಿಸಬಲ್ಲರು. ಅವರು ಬಹಳ ಚೆನ್ನಾಗಿ ಭಾಷಣ ಮಾಡುತ್ತಾರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

SRI D. DEVARAJ URS (Hunsur).—I rise to a point of order. He is making a debate on that point. Let him confine himself to the Rule of Procedure.

Mr. SPEAKER.—Since some Hon'ble Members raised that point......

ಶ್ರೀ ಎಚ್.ಸಿ. ಲಿಂಗಾರೆಡ್ಡಿ.—ಮಾನ್ಯ ಚನ್ನಬಸಪ್ಪನವರಿಗೆ ಪುನಃ ಮಾತನಾಡಲು ಅವಕಾಶ ಕೊಡಲೇ ಕೂಡದೆಂದು ಯಾವ ಕಾನೂನಿನಲ್ಲಿಯೂ ಹೇಳಿಲ್ಲ.

Sri B. NARAYANA SWAMY.—It is only when a member does not speak.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕಾನೂನಿನಲ್ಲಿ ಹಾಗೆ ಎಲ್ಲಿಯೂ ಹೇಳಿಲ್ಲ. ಹಾಗೆ ಅವಕಾಶ ಕೊಡಬಾರದೆಂದು ಉದ್ದೇಶ ಕೂಡ ಯಾವ ಸದಸ್ಯರಿಗೂ ಇಲ್ಲ. ಆದರೆ ಕಾನೂನು ಏನು ಹೇಳುತ್ತಿದೆ ಎಂದರೆ—ಒಂದಾವರ್ತಿ ಒಬ್ಬ ಸದಸ್ಯರು ಒಂದು ವಿಚಾರದ ಮೇಲೆ ಮಾತನಾಡಿದರೆ ಪುನಃ ಅದೇ ಸದಸ್ಯರಿಗೆ ಆ ವಿಚಾರದ ಮೇಲೆ ಮಾತನಾಡಲು ಅವಕಾಶವಿಲ್ಲ. ಆದರೆ ಪುನಃ ಅವರು ಮಾತನಾಡುವುದಕ್ಕೆ ಅವಕಾಶವೂ ಇದೆ. ಅವಕಾಶ ಯಾವಾಗ ಇದೆಯೆಂದರೆ—ಯಾವಾಗ ಅಧ್ಯಕ್ಷರು ಅಂಥಾದ್ದಕ್ಕೆ ಇಷ್ಟಪಟ್ಟು ಅವಕಾಶ ಕೊಟ್ಟರೆ ಆಗ ಅವರಿಗೆ ಮಾತನಾಡಲು ಪುನಃ ಅವಕಾಶವಿರುತ್ತದೆ. ಈ ಒಂದು ಅಂಶವನ್ನು ಮಾನ್ಯ ಅಧ್ಯಕ್ಷರು ತಮ್ಮ ಗಮನಕ್ಕೆ ತೆಗೆದುಕೊಂಡು ಅಥವಾ ಇತರ ಇನ್ನು ಯಾವುದಾದರೂ ಅಂಥಾ ಪ್ರಾಮುಖ್ಯವಾದ ವಿಚಾರವಿದ್ದರೆ ಅದನ್ನೂ ಕೂಡ ಅಧ್ಯಕ್ಷರು ಗಮನಕ್ಕೆ ತೆಗೆದುಕೊಂಡು ಅವಕಾಶ ಕೊಡಬಹುದು ಎಂದು ರೂಲ್ಸಿನಲ್ಲಿದೆ. ಆದುದರಿಂದ ಈಗ ನಡೆಯುತ್ತಿರುವ ವಿಚಾರದಲ್ಲಿ ಪುನಃ ಅವರಿಗೆ ಮಾತನಾಡಲು ಅವಕಾಶ ಕೊಡಬಹುದೆಂದು ಮಾನ್ಯ ಅಧ್ಯಕ್ಷರು ಭಾವಿಸುವುದಾದರೆ ಮತ್ತೆ ಅವರಿಗೆ ಮಾತನಾಡಲು ಅವಕಾಶ ಕೊಡಬಹುದು ಎಂದು ನಾನು ಹೇಳುತ್ತೇನೆ. ಆದರೆ ಮಾನ್ಯ ಚನ್ನಬಸಪ್ಪನವರು ಈಗಾಗಲೇ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಆದುದರಿಂದ ಈಗ ಅಧ್ಯಕ್ಷರು ತಮ್ಮ ಡಿಸ್ಕ್ರಿಷನ್‌ಅನ್ನು ಉಪಯೋಗಿಸಿ ಅವಕಾಶ ಕೊಡಬಹುದು. ರೂಲ್ಸಿನಲ್ಲಿ ಹಾಗೆ ಕೊಡಕೂಡದೆಂದು ಎಲ್ಲಿಯೂ ಹೇಳಿಲ್ಲ.

9 30 A. M.

ಶ್ರೀ ತಿಮ್ಮಪ್ಪಗೌಡರು ಹೇಳುತ್ತಿದ್ದಹಾಗೆ ಈ ದಿನ ವಿಷಯ ಬಂದ ಸಂದರ್ಭದಲ್ಲಿ ಅವರು ಇರಲಿಲ್ಲ, ಈ ಬಿಲ್ಲಿನ ಮೇಲೆ ಸುಮಾರು 10-15 ದಿವಸಗಳ ಹಿಂದೆ ಚರ್ಚೆ ನಡೆಯಿತು, ಆಗ ಒಂದು ದಿನವೆಲ್ಲಾ ಮಸೂದೆಯ ಮೇಲೆ ಮಾತನಾಡಿದರು, ಮೊನ್ನೆದಿವಸ ಅವರೇ ಭಾಷಣ ಮುಂದುವರಿಸಲಿ ಎಂದು ಹೇಳಿದಪ್ರಕಾರ ಮುಂದುವರಿಸಿದರು, ಈ ದಿನ ಅದೇ ವಿಷಯ ಬಂದಾಗ ಮಾನ್ಯ ಚೆನ್ನಬಸಪ್ಪನವರು ಇಲ್ಲದೆ ಇದ್ದುದರಿಂದ ಬೇರೆಯವರಿಗೆ ಮಾತನಾಡಲು ಅವಕಾಶಕೊಟ್ಟಿರಿ. ಸಭೆ ಪ್ರಾರಂಭವಾದಾಗ ನಾನೂ ಸಹ ಇರಲಿಲ್ಲ. ಆದರೆ ನನ್ನ ಸ್ನೇಹಿತರು ಹೇಳಿದ ಹಾಗೆ ಶ್ರೀ ಚೆನ್ನಬಸಪ್ಪನವರು ಇಲ್ಲದೆ ಇದ್ದು ಈ ಮಸೂದೆಯ ಮೇಲೆ ಚರ್ಚೆ ಮುಂದುವರಿಸಬೇಕಾದಾಗ ಅವರು ಇಲ್ಲದ್ದರಿಂದ ಬೇರೆಯವರಿಗೆ ಅವಕಾಶ ಕೊಟ್ಟಿರಿ ಎಂದು ಹೇಳಿದರು ತಾವು ಈ ಸಂದರ್ಭದಲ್ಲಿ ಕೃಪೆ ಮತ್ತು ಕಾನೂನನ್ನು ಅನುಸರಿಸಿ ಅವರಿಗೆ ಅವಕಾಶ ಕೊಡಿ ಎಂದು ಹೇಳುವುದಿಲ್ಲ. ಚರ್ಚೆಯನ್ನು ಮುಂದುವರಿಸಲು ಕೇಳಿದಾಗ ಆ ಸದಸ್ಯರು ಹಾಜರಿಲ್ಲದೆ ಇದ್ದರೆ ಆ ಅವಕಾಶ ಬೇರೆಯವರಿಗೆ ಹೋಗಬೇಕು ಎಂದು ಹೇಳುತ್ತೇನೆ. ವಿಷಯ ಬಹಳ ಮುಖ್ಯವಾದುದು, ಬಹಳ ಚೆನ್ನಾಗಿ ಮಾತನಾಡುತ್ತಾರೆ ಎಂಬ ಕಾರಣಗಳ ಮೇಲೆ ಅವಕಾಶ ಕೊಡುವುದು ನ್ಯಾಯವಾದುದಲ್ಲ. ಅಲ್ಲದೆ ಅವರು ಈಗಾಗಲೇ ಎರಡು ದಿನಗಳ ಕಾಲ ಭಾಷಣ ಮಾಡಿದ್ದಾರೆ. ಇನ್ನೂ ಭಾಷಣ ಮಾಡುವವರು ಅನೇಕ ಮಂದಿ ಇದ್ದಾರೆ. ಅವರುಗಳಿಗೆಲ್ಲಾ ಅವಕಾಶ ಕೊಡಬೇಕು. ಇವರಿಗೂ ಸಹ, ಅಧ್ಯಕ್ಷರು ಇಷ್ಟಪಟ್ಟಲ್ಲಿ ಮಧ್ಯದಲ್ಲಾಗಲಿ, ಕಡೆಯಲ್ಲಾಗಲಿ, ಯಾವಾಗಲಾದರೂ ಭಾಷಣ ಮಾಡಲು ಅಧಿಕಾರ ಕೊಡುವ ಅಧಿಕಾರವಿದ್ದೇ ಇದೆ. ಆದ್ದರಿಂದ ಈ ರೀತಿಯಾಗಿ ತಾವು regulate ಮಾಡತಕ್ಕದ್ದು ಒಳ್ಳೆಯದು.

ಶ್ರೀ ಟಿ. ಎನ್. ಮುದಲಗಿರಿಗೌಡ (ಕುಣಿಗಲ್).—ಒಂದು ಸತ್ಸಂಪ್ರದಾಯವನ್ನು ಹಾಕುವಾಗ, ಈ ದಿವಸದ ವಿಷಯ ಬಹಳ ಪ್ರಾಮುಖ್ಯವಾದುದು, ಪರಿಣಾಮಕಾರಿಯಾದುದು, ಇದಕ್ಕೆ ಅವಕಾಶವನ್ನು ಕೊಡಬೇಕು ಎನ್ನುವುದು ಒಂದು ವಾದ. ನಾವು ಕಾನೂನು ಮತ್ತು rules ಪ್ರಕಾರ ಸರಿಯಾದ ರೀತಿಯಲ್ಲಿ ಸತ್ಸಂಪ್ರದಾಯವನ್ನು ಹಾಕಬೇಕು ಎನ್ನುವುದು ಮತ್ತೊಂದು ವಾದ. ನಾಳೆಯ ದಿವಸ ಪ್ರತಿ ವಿಷಯದಲ್ಲಿಯೂ ಕೂಡ ಒಬ್ಬ ಭಾಷಣಕಾರರು ಅಥವಾ ಮಾನ್ಯಸದಸ್ಯರು ಯಾರಾದರೂ ಭಾಷಣಮಾಡುತ್ತಿದ್ದು lunch hourನಲ್ಲೋ, ಬೇರೆ ಕಾಲದಲ್ಲೋ ತಾವು ಮಾನ್ಯಸಭೆಯನ್ನು ನಿಲ್ಲಿಸಿ ಮತ್ತೆ ಪ್ರಾರಂಭಮಾಡತಕ್ಕ ಸಂದರ್ಭದಲ್ಲಿ ಆ ಸದಸ್ಯರು ಕಾಲಕ್ಕೆ ಸರಿಯಾಗಿ ಸಿದ್ಧವಾಗಿರಬೇಕಾದದ್ದು ಅವರ ಧರ್ಮ, ಅವರ ಕರ್ತವ್ಯ. ಹಾಗಿಲ್ಲದೆ ಈ ದಿನ ಆ ಸದಸ್ಯರಿಗೆ ಮಾತನಾಡಲು ಅವಕಾಶಕೊಟ್ಟು ಒಂದು precedent ಹಾಕುವುದಾದರೆ, ನಾಳೆ ದಿವಸ ಯಾವ ಕಾಲಕ್ಕೆ ಹೋದರೂ ನಮಗೆ ಮಾತನಾಡುವುದಕ್ಕೆ ಅವಕಾಶವಿದೆ, ಭಾಷಣ ಮುಂದುವರಿಸುವುದಕ್ಕೆ ಅವಕಾಶವಿದೆಯೆಂದು ತಿಳಿಯುತ್ತಾರೆ. ಹೀಗಿರುವಾಗ ಮುಂದೆ ಒಂದು ತಪ್ಪು ಸಂಪ್ರದಾಯಕ್ಕೆ ನಾವು precedent ಹಾಕತಕ್ಕದು, ಅಭಿಪ್ರಾಯ ಹಾಕತಕ್ಕದ್ದು ಸರಿಯಾದದ್ದಲ್ಲ. ಪ್ರಶ್ನೋತ್ತರಕಾಲ ಒಂದು ಗಂಟೆ ಎಂದು ನಿಗದಿಯಾಗಿರುತ್ತದೆ. ಅಷ್ಟೇ ಹೊರತು ಆ ಅವಧಿಯೊಳಗೆ ಯಾವಾಗ ಬೇಕಾದರೂ ಪ್ರಶ್ನೋತ್ತರ ಮುಗಿದ ತರುವಾಯ ಇತರ ಕೆಲಸ ಕಾರ್ಯಗಳು ಪ್ರಾರಂಭವಾಗುತ್ತವೆ. ಒಂದು ಗಂಟೆಗೆ ಮುಂಚಿತವಾಗಿ ಪ್ರಶ್ನೋತ್ತರಗಳು ಮುಗಿದುಹೋದರೆ ಪ್ರಶ್ನೋತ್ತರಗಳ ಅವಧಿಯಾದ ಒಂದು ಗಂಟೆ ಕಳೆಯುವವರೆಗೂ ಸಭೆಯನ್ನು suspend ಮಾಡುವುದಕ್ಕೆ ಸಾಧ್ಯವಿಲ್ಲ. ಹೀಗಿರುವಾಗ ಕಾರ್ಯಕಲಾಪಗಳು ಮುಂದುವರಿಯತಕ್ಕ ಸಂದರ್ಭದಲ್ಲಿ ಹಿಂದಿನ ದಿವಸದ ವಿಷಯ ಏನು ಇತ್ತೋ ಅದನ್ನು ಮುಂದುವರಿಸುತ್ತೇವೆ. ಈ ರೀತಿ ಮುಂದುವರಿಸುವಾಗ ಯಾವ ಸದಸ್ಯರು ಮಾತನಾಡಬೇಕೋ ಅವರು ಇರಬೇಕಾದ್ದು ಅತ್ಯಗತ್ಯ ಮತ್ತು ಇದು ಅವರ ಅಧ್ಯ

ಕರ್ತವ್ಯ. ಹಾಗಿಲ್ಲದೆ ಹೋದರೆ ಅವರ chance lapse ಆಗುತ್ತದೆ ಮತ್ತು ಅವರಿಗೆ ಮತ್ತೊಂದು ಸಾರಿ ಅವಕಾಶವನ್ನು ಕೊಡಬೇಕಾದರೆ ಮಹತ್ತರವಾದ ವಿಷಯವಾಗಿರಬೇಕು. ನ್ಯಾಯವನ್ನು ಪ್ರತಿಪಾದನೆ ಮಾಡತಕ್ಕ ಕ್ರಮವನ್ನನುಸರಿಸುವಾಗ ಸಭೆಯ ಕಾರ್ಯಕ್ರಮ ಮಹತ್ತರವಾದ ವಿಷಯವೇ ಎನ್ನುವುದನ್ನು ನಾವು ಯೋಚನೆಮಾಡಬೇಕಾಗಿದೆ ಮತ್ತು ಸಭೆಯ ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ಹಾಕಿಕೊಂಡು ಸತ್ಸಂಪ್ರದಾಯವನ್ನು ಬೆಳೆಸಬೇಕು. ಈ ವಿಚಾರದಲ್ಲಿ ಅವರಿಗೆ ಭಾಷಣಮಾಡಲು ಅವಕಾಶ ಕೊಡುವುದರಿಂದ ಒಂದು precedent ಹಾಕಿಕೊಟ್ಟ ಹಾಗಾಗುತ್ತದೆ. ಇದು ಸರಿಯಾದದ್ದಲ್ಲವೆಂದು ಖಚಿತವಾಗಿ ಹೇಳುತ್ತೇನೆ.

Sri R. CHANNIGARAMIAH (Koratagere-Madhugiri-Scheduled Castes).—Sir, this is a very simple case...

Mr. SPEAKER.—No, it is not simple. I want to bring to the notice of the Hon'ble Members as to why I have allowed so much of discussion on this matter. It concerns with the privilege of a member. At the same time, while conferring the privilege on one member it curtails the privilege of other members. Therefore, it is a point which has got to be carefully considered.

Sri R. CHANNIGARAMIAH.—This is important no doubt, but if all the members agree it becomes simple. This is an unusual incident that has happened to-day. Normally all members are expected to be here at 8-30, the time at which the House meets on Saturdays. This is the first time in the history of our Legislaturd that all the Hon'ble Members who hae sent questions were not present when the questions were taken up. The Hon'ble Member who had to continue his speech after question hour probably thought that he could be here before 9-30 so that he may have his chance in the normal course to continue his speech. To-day though he was expected to be here at 8-30, he has come a little late. The Hon'ble Home Minister who interpreted section 115 said that under extraordinay circumstances, it is left to the Chair to allow a member or not at a later stage. Later stage does not mean that a member should be allowed to speak at the end of the day or at the end of the session. When a member is called upon to speak and if he is not present at that time in the House, it does not mean the entire House should wait for him. The Chair can call upon another member to speak. In the course of the day the Chair can call upon the previous speaker to speak at any time. It is not right to say that because one member has been allowed to speak, the previous speaker loses his chance. There is nothing wrong if the Speaker decides in favour of Sri Channabasappa now. This itself becomes 'later stage'. My interpretation of 'later stage' is the Speaker can call upon Sri Channabasappa now, or at any time during the day though another member has spoken; since he is present now, he may be called upon to speak now. No Hon'ble Member should feel that his privileges are curtailed. He should not go home with a feeling that he was not allowed to express his views. I feel that we need not go on discussing this subject. The Treasury Bench should also view this liberally. Whether I agree with Sri Channabasappa's arguments on the merit of the Bill or not is a different matter altogether. But, the point is whether the member has the right to speak or not. Certainly, the decision of the Chair must be in favour of the member.

Mr. SPEAKER.—Suppose, the debate on a subject goes on till Three o'clock and the House adjourns for lunch at Three and meets at 3-30 P.M. and the member who was speaking at Three and who had not concluded his speech is not present at 3-30 P.M. to continue his speech. Then what happens ?

Sri R. CHANNIGARAMIAH.—If the member is not present at 3-30 P.M. when he is expected to be present according to the scheduled time, he loses his chance. But, the case is not so here. In the normal course Sri Channabasappa was expected to speak after question hour. But, unfortunately it has so happened to-day that all the members in whose names the questions stood were not present at the time when the questions and answers were taken up. This is very unusual and unprecedented.

Mr. SPEAKER.—Supposing, after one o'clock the Hon'ble Member is not present.

Sri R. CHANNIGARAMIAH.—Then, certainly he loses his chance; there is no doubt about it. But, to-day's situation is not like that.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ) — ಸಭೆ ಪ್ರಾರಂಭವಾದ ಎರಡು ನಿಮಿಷಗಳೊಳಗಾಗಿ ಈ ದಿನ ಇದ್ದ ಪ್ರಶ್ನೆಗಳ ಮೇಲೆ ಉಪಪ್ರಶ್ನೆಗಳನ್ನು ಹಾಕಲು ಸದಸ್ಯರು ಹಾಜರಿಲ್ಲದ್ದರಿಂದ ಪ್ರಶ್ನೋತ್ತರಗಳ ಕಾಲ ಮುಗಿಯಿತೆಂದೂ, Tenancy Bill ತೆಗೆದುಕೊಂಡು ಅದರಮೇಲೆ ಚರ್ಚೆ ಮುಂದುವರಿಸೋಣವೆಂದು ಹೇಳಿದಿರಿ. ಆಗ ಶ್ರೀ ಚನ್ನಬಸಪ್ಪನವರು ಸಭೆಯಲ್ಲಿಲ್ಲವೆಂದು ಶ್ರೀ ಮಲ್ಲಿಕಾರ್ಜುನಪ್ಪಗೌಡರನ್ನು ಮಾತನಾಡಲು ಕರೆದಿರಿ. ಆದರೆ ಶ್ರೀ ಚನ್ನಬಸಪ್ಪನವರು ಇದ್ದಾರೆಯೇ ಇಲ್ಲವೇ ಎಂದು ತಿಳಿಯಲು ತಾವು ಅವರನ್ನು ಕರೆದುದನ್ನು ನಾನು ಕೇಳಲಿಲ್ಲ. ತಾವು ಶ್ರೀ ಚನ್ನಬಸಪ್ಪನವರು ಇದ್ದಾರೆಯೇ ಎಂದು ಕೂಗಿದ್ದರೆ ಪ್ರಾಯಶಃ ಹೊರಗಡೆ ಇದ್ದಿದ್ದರೆ ಬರುವುದಕ್ಕೆ ಅವಕಾಶವಾಗುತ್ತಿತ್ತು. ಪ್ರಶ್ನೋತ್ತರ ಕಾಲ ಒಂದು ಘಂಟೆಯವರೆಗೆ ಇರುತ್ತದೆ ಎಂದು ತಿಳಿದುಕೊಂಡದ್ದರಿಂದ ಪರಿಸ್ಥಿತಿ ಬದಲಾವಣೆಯಾಗಿದೆ. ಒಬ್ಬ ಸದಸ್ಯರು ಭಾಷಣ ಮಾಡಿದನಂತರ ಪುನಃ ಹಿಂದೆ ಮಾತನಾಡುತ್ತಿದ್ದ ಸದಸ್ಯರಿಗೆ ಅವಕಾಶಕೊಡುವುದರಿಂದ ತಪ್ಪಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ತಮಗೆ ಅಧಿಕಾರವಿದೆ. ಆದ್ದರಿಂದ ಮಾನ್ಯ ಸದಸ್ಯರಾದ ಶ್ರೀ ಚನ್ನಬಸಪ್ಪನವರಿಗೆ ಭಾಷಣಮಾಡಲು ಅವಕಾಶಕೊಡಬೇಕೆಂದು ಹೇಳುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).— ಪ್ರಶ್ನೆ ಉತ್ತರಗಳು ಕಾಲ ಒಂದು ಗಂಟೆಯೆಂದು ಇದೆ. ಆದರೆ ಈಗ ಕೆಲವು ದಿನಗಳಿಂದ ಒಂದು ಗಂಟೆ ಕಾಲ ಎಂದೂ ನಡದೇಯಿಲ್ಲ. ಬಹಳ ಬೇಗ ಮುಗಿದುಹೋಗುತ್ತಿದೆ. ಸದಸ್ಯರು ಕಾಲಕ್ಕೆ ಸರಿಯಾಗಿ ಬಂದು ಸಭೆಯಲ್ಲಿ ಹಾಜರಿರಬೇಕಾದದ್ದು ಅವರ ಕರ್ತವ್ಯ. ಹಾಗಿಲ್ಲದೆ ಪ್ರಶ್ನೋತ್ತರ ಕಾಲ ಒಂದು ಗಂಟೆ ಇರುತ್ತದೆ, ಅಷ್ಟರೊಳಗಾಗಿ ಹೋದರೆ ಸರಿಯೆಂದು ಆ ರೀತಿ ಮಾಡುವುದು ಸರಿಯಲ್ಲ. ಸುಮಾರು ಇಪ್ಪತ್ತು ಪ್ರಶ್ನೆಗಳಿದ್ದು, ಆ ಪಟ್ಟಿಯ ಪ್ರಕಾರ ಅರ್ಧ ಗಂಟೆಯಾದ ಮೇಲೆ ನನ್ನ ಪ್ರಶ್ನೆ ಬರುತ್ತದೆ ಎಂದು ಆ ಹೊತ್ತಿಗೆ ಸರಿಯಾಗಿ ಬರುವುದು ಒಳ್ಳೆಯದಲ್ಲ. ಸದಸ್ಯರು ಸಭೆಯಲ್ಲಿ ಹಾಜರಿಲ್ಲದಿದ್ದು ಅವರ chance lapse ಆಗಿ, ಅವರು ಬಂದಾಗ ಪುನಃ ಭಾಷಣಕ್ಕೆ ಅವಕಾಶಕೊಡುವುದು ನ್ಯಾಯವಾದದ್ದಲ್ಲ ಮತ್ತು ಈ ರೀತಿಯಾದ precedent ಹಾಕುವುದೂ ಸರಿಯಾದದ್ದಲ್ಲ. ಆದರೆ ಅಧ್ಯಕ್ಷರು ಇಷ್ಟಪಟ್ಟರೆ ಸಭೆಯು ನಡೆಯುವಾಗ ಯಾವಾಗಲಾದರೂ ಮಾತನಾಡುವುದಕ್ಕೆ ಅವಕಾಶ ಕೊಡಲು ಅಧಿಕಾರ ಹೊಂದಿರುತ್ತಾರೆ. ಸದಸ್ಯರು ಮಾತನಾಡಲು ಅವಕಾಶಕೊಡುವುದಕ್ಕೆ ಬೇಕಾದಷ್ಟು ಅಧಿಕಾರ ಅಧ್ಯಕ್ಷರಿಗಿದೆ. ಈ ರೀತಿ ಅವಕಾಶ ಕೊಡಬೇಕಾದರೆ ಬಹಳ ಮಹತ್ತರವಾದ ವಿಷಯವಾಗಿದ್ದ ಪಕ್ಷದಲ್ಲಿ ಕೊಡಬಹುದೇ ಹೊರತು ಹಾಗಿಲ್ಲದೆ ಪ್ರತಿ ಸಂದರ್ಭದಲ್ಲಿಯೂ ಅವಕಾಶಕೊಟ್ಟರೆ ಅದರಿಂದ ಮುಂದೆ ಬಹಳ ಅನರ್ಥಕಾರಿಯಾದ ಪರಿಣಾಮವಾಗುತ್ತದೆಂದು ಹೇಳುತ್ತೇನೆ.

Sri K. S. VASAN (Kolar Gold Fields).—Sir, I have got a fresh point to urge. Sir, much of the discussion here seems to be on the question of for or against allowing Sri Chennabasappa to speak. That is not the point here. Regarding the question hour, it is stated that the first hour of every day of meeting shall be for asking and answering questions. I feel it was available and every one of the questions with the answers with the name of the concerned member was printed. When the questions were called and since nobody was there, the question hour was over and the next item on the agenda was taken up. Here, when a discussion on a motion is resumed on a particular day, the member who was last speaking on that issue, if he had not concluded his speech, gets a right to speak again. If he is not there, then when another member is called upon to speak, it must be taken by the House that he concluded his speech on the last occasion itself. So Rule 150 cannot be applied in this case and Rule 152 must be taken into consideration. The member wants now to speak for the second time and it is within the discretion of the Speaker to allow or not to allow any member to speak for the second time on the motion. If the Speaker so decides to allow Sri Chennabasappa to speak, he may be given that opportunity to speak, Sir.

Sri Kadidal MANJAPPA (Minister for Revenue and Public Works).—Mr. Speaker Sir, it is not the intention of the Treasury Bench, as some Hon'ble Members have put it, that they want to adopt obstructive tactics; it is for you and for the House to decide whether we are adopting obstructive tactics or some other people.

Sri D. DEVARAJ URS.—I raise a point of order on this issue, Sir. This is a reflection which the Hon'ble Minister is casting upon the Hon'ble Members of this House. Nobody has so far adopted any obstructive tactics.

Sri Kadidal MANJAPPA.—Sri Veeranna Gowda has definitely stated that it looked as though the Government wast adopting obstructive tactics.

Mr. SPEAKER.—The Hon'ble Members must wait. Of course as the Hon'ble Minister puts it, somebody made that remark not intentionally, but in a casual way. Therefore he has met that point.

Sir H. K. VEERANNA GOWDH.—It looks as though the Government is afraid of other members expressing their view freely on this important Bill. That is what I said and I still hold that opinion.

Sri Kadidal MANJAPPA.—It is not our intention to shut out Sri Chennabasappa from what he has got to say. Sri Veeranna Gowdh said that it looks as though we were trying to obstruct Sri Chennabasappa........................

ಶ್ರೀ ವೀರಣ್ಣಗೌಡರು ಮಾತನಾಡುವಾಗ ಸರ್ಕಾರದವರಿಗೆ, ಈ ಮಸೂದೆಯ ಮೇಲೆ ಶ್ರೀ ಚನ್ನಬಸಪ್ಪನವರು ಹೇಳಬೇಕಾದ್ದನ್ನೆಲ್ಲಾ ಹೇಳುವುದಕ್ಕೆ ಅವಕಾಶ ಕೊಡಬಾರದು ಎಂಬ ಉದ್ದೇಶವಿರುವಂತೆ ತೋರುತ್ತದೆ ಎಂದು ಹೇಳಿದರು. ಆ ರೀತಿ ನಾವು ಮಾಡಿಲ್ಲ. ಆ ಉದ್ದೇಶವೂ ಇಲ್ಲ. ಈ ಮಾನ್ಯ ಸಭೆಯಲ್ಲಿರತಕ್ಕ ಎಲ್ಲ ಮಾನ್ಯ ಸದಸ್ಯರುಗಳಿಗೂ ಅವರವರ ಅಭಿಪ್ರಾಯವನ್ನು ಕಾನೂನು ಪ್ರಕಾರ, ರೂಲ್ಸ್ ಪ್ರಕಾರ, ತಿಳಿಸುವುದಕ್ಕೆ ಅವಕಾಶವಿದೆ. ಶ್ರೀ ವೀರಣ್ಣಗೌಡರು ಮಾತನಾಡುವಾಗ, 'ಗೃಹ ಸಚಿವರಿಗೆ ಯಾವುದಾದರೂ ವಿಷಯವನ್ನು ಮಾತನಾಡುವಾಗ ಒಂದು peculiar ಆದ, ವಿಚಿತ್ರಕರವಾದ, ಆಶ್ಚರ್ಯಕರವಾದ ರೀತಿಯಲ್ಲಿ ಆ ವಿಷಯವನ್ನು ಹೇಳತಕ್ಕ ರೀತಿ ಅವರಲ್ಲಿದೆ'ಯೆಂದು ಹೇಳಿದರು.

Sri H. M. CHANNABASAPPA—Is the Home Minister incapable of defending himself?

ಶ್ರೀ ಕಡಿದಾಳ್ ಮಂಜಪ್ಪ.—ಗೃಹಸಚಿವರು ಮಾತನಾಡಿದಾಗ ರೂಲ್ಸ್ ಪ್ರಕಾರ ಯಾವ ರೀತಿಯಿದೆ ಎಂಬುದನ್ನು ವಿವರಿಸಿದರೇ ಹೊರತು, ಶ್ರೀ ಚನ್ನಬಸಪ್ಪನವರಿಗೆ ಕಾನೂನು ಪ್ರಕಾರ ಮಾತನಾಡುವುದಕ್ಕೆ ಅವಕಾಶವಿದ್ದರೂ ಕೂಡ, ಅವಕಾಶಕೊಡಬಾರದೆಂದು ಹೇಳಲಿಲ್ಲ.

ಸ್ವಾಮಿ, ಚರ್ಚೆ ಯಾವ ರೀತಿ ಈ ಸಭೆಯಲ್ಲಿ ನಡೆಯಬೇಕೆಂಬ ಬಗ್ಗೆ ನಿರ್ದಿಷ್ಟವಾದ ನಿಯಮಗಳಿವೆ. ಆ ನಿಯಮಗಳಿಗೆ ನಾವೂ ಬದ್ಧರಾಗಿದ್ದೇವೆ, ಮಾನ್ಯ ಸದಸ್ಯರೂ ಬದ್ಧರಾಗಿದ್ದಾರೆ. ನಾವೂ ಆ ನಿಯಮಗಳನ್ನು ಬಿಟ್ಟು ಹೋಗುವಹಾಗಿಲ್ಲ. ತಾವೂ ಬಿಟ್ಟು ಹೋಗುವ ಹಾಗಿಲ್ಲ.

ಗೃಹ ಸಚಿವರು ಹೇಳಿದ್ದು, ನಿಯಮಗಳ ಪ್ರಕಾರ, ಶ್ರೀ ಚನ್ನಬಸಪ್ಪನವರು Question Hour ಆದನಂತರ ಇಲ್ಲದ್ದರಿಂದ ಅವರ ಹಕ್ಕನ್ನು ಕಳೆದುಕೊಂಡಿದ್ದಾರೆ ಎಂದು. ರೂಲ್ಸ್‌ನಲ್ಲಿ ಕೂಡ ಅದೇ ರೀತಿಯಿದೆ. 150ನೆಯ ರೂಲ್ ನೋಡುವುದಾದರೆ, ಅದರಲ್ಲಿ ಹೇಳಿದೆ.—

> Rule 150. "(1) After the member who moves has spoken, other members may speak to the motion in such order as the Speaker may call upon them. If any member who is so called upon does not speak, he shall not be entitled, except by the permission of the Speaker, to speak to the motion at any later stage of the debate."

ಇಲ್ಲಿ "He shall not be entitled" ಎಂದು ಹೇಳಿರುವುದರಿಂದ ಹಕ್ಕನ್ನು ಕಳೆದುಕೊಂಡಿದ್ದಾರೆಂದು ಅರ್ಥವಾಗುತ್ತದೆಂದು ನಾನು ಮತ್ತೊಮ್ಮೆ ಒತ್ತಿ ಹೇಳುತ್ತೇನೆ. ಒಬ್ಬ ಮಾನ್ಯ ಸದಸ್ಯರಿಗೆ ಮಾತನಾಡತಕ್ಕ ಹಕ್ಕು ಮತ್ತು ಅವಕಾಶ—ಎರಡೂ ಇದ್ದು ಅವರು ನಿಯಮಿತ ಕಾಲದಲ್ಲಿ ಮಾತನಾಡತಕ್ಕದ್ದು ಎಂದು ನಿರ್ಧರವಾಗಿದ್ದಾಗ, ಆ ಕಾಲದಲ್ಲಿ ಅವರು ತಮ್ಮ ಸ್ಥಳದಲ್ಲಿ ಇಲ್ಲದೆ ಇದ್ದರೆ, ಸಭೆಯ ಕಾರ್ಯಕಲಾಪಗಳು ಪ್ರಾರಂಭವಾದಾಗ ಅವರು ಸಭೆಯಲ್ಲಿಲ್ಲದಿದ್ದರೆ, 'It implies that he was called upon.

Sri H. M. CHANNABASAPPA.—How?

ಶ್ರೀ ಕಡಿದಾಳ್ ಮಂಜಪ್ಪ.—ಅವರ ವಾದವನ್ನು ನಾನು ತಾಳ್ಮೆಯಿಂದ ಕೇಳಿದೆ. ನನ್ನ ವಾದವನ್ನೂ ಅವರು ತಾಳ್ಮೆಯಿಂದ ಕೇಳಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ವೇಳೆ ನನಗೆ ಸಂಬಂಧಪಟ್ಟ ವಿಷಯ ಚರ್ಚೆಗೆ ಬರುವ ಕಾಲದಲ್ಲಿ ನಾನು ಇಲ್ಲದೆ ಇದ್ದರೆ, it is open to the Speaker to call upon him to speak. If any member who is so called upon does not speak, he shall not be entitled to speak.

ಈಗ, ಈ ಸಂದರ್ಭದಲ್ಲಿ 'discussion will continue' ಎಂದು ಹೇಳಿದ ಮೇಲೆ, ಸ್ಪೀಕರ್‌ರವರು ಆ ಮಾನ್ಯ ಸದಸ್ಯರನ್ನು ಮಾತನಾಡುವುದಕ್ಕೆ ಆಹ್ವಾನಿಸಿದರು ಎಂದು ಹೇಳಿ ಅರ್ಥ ಬರುತ್ತದೆಂದು ನನ್ನ ವಾದ.

> ಆಮೇಲೆ, 24ನೆಯ ರೂಲ್‌ನಲ್ಲಿ "unless the Speaker otherwise directs, the first hour of every day of the meeting shall be available for the asking and answering of questions".

ಎಂದು ಹೇಳಿದೆ. ಪ್ರಶ್ನೋತ್ತರಗಳಿಗೆ ಒಂದು ಘಂಟೆಯ ಕಾಲ ನಿಗದಿಯಾಗಿತ್ತು. ನಿಗದಿಯಾದ ಅವಧಿಯಲ್ಲಿ, ಯಾರು ಪ್ರಶ್ನೆಗಳನ್ನು ಕಳುಹಿಸಿದ್ದರೋ ಆ ಮಾನ್ಯ ಸದಸ್ಯರು ಸಭೆಯಲ್ಲಿಲ್ಲದ್ದರಿಂದ ಅವರಿಗಿದ್ದ ಅವಕಾಶವನ್ನು ಅವರು ಕಳೆದುಕೊಂಡರು. ಅನಂತರ ಅಜೆಂಡಾದಲ್ಲಿರತಕ್ಕ ಉಳಿದ ವಿಷಯಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾದ ಅಗತ್ಯವಿತ್ತು. ಆ ರೀತಿಯಾಗಿ ತೆಗೆದುಕೊಳ್ಳಲಾಗಿದೆ. ಆ ಕಾಲದಲ್ಲಿ ಶ್ರೀಮಾನ್ ಚನ್ನಬಸಪ್ಪನವರು ಇರಲಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇರುವುದು ಮುಖ್ಯವಲ್ಲ; ಕರೆಯಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ವೆಂಕಟಪ್ಪನವರು ಮಾತನಾಡುವಾಗ, ಮಂತ್ರಿಗಳಿಗೆ, ಅವರು ಒಂದು ವೇಳೆ ಇಲ್ಲದೆ ಇದ್ದರೂ ಕೂಡ, ಅವರು ಬಂದ ತರುವಾಯ ಅವರಿಗೆ ಅಧ್ಯಕ್ಷರು ಅವಕಾಶವನ್ನು ಕೊಡುತ್ತಾ ಇಲ್ಲವೇ, ಎಂದು ಪ್ರಶ್ನಿಸಿದರು. ಯಾವುದಾದರೂ ಒಂದು ವಿಷಯ ಚರ್ಚೆಗೆ ಬಂದಾಗ ಮಂತ್ರಿಗಳೆಲ್ಲರೂ ಗೈರ್‌ಹಾಜರಾಗಿದ್ದರೆ ಏನಾಗುತ್ತದೆಂಬುದು ಮಾನ್ಯ ಸದಸ್ಯರಿಗೂ ಗೊತ್ತಿದೆ, ತಮಗೂ ಗೊತ್ತಿದೆ. ಮಂತ್ರಿಗಳು ಯಾರಾದರೂ ಒಬ್ಬರು ಸಭೆಯಲ್ಲಿ ಗೈರ್‌ಹಾಜರಾಗಿದ್ದರೆ ಇನ್ನೊಬ್ಬರು ಅವರ ಪರವಾಗಿ ಉತ್ತರ ಹೇಳುತ್ತಾರೆ; ಆ ಪ್ರಕಾರ ಮಾತನಾಡಲು ಕಾನೂನು ಪ್ರಕಾರ ಅವರು ಅರ್ಹತೆ ಪಡೆದಿರುತ್ತಾರೆ. ಆದ್ದರಿಂದ ಶ್ರೀ ವೆಂಕಟಪ್ಪನವರ ವಾದದಲ್ಲಿ ಅಷ್ಟೊಂದು ಸತ್ವವಿಲ್ಲವೆಂದು ವಿನಯಪೂರ್ವಕವಾಗಿ ಹೇಳುತ್ತೇನೆ.

(SRI KADIDAL MANJAPPA.)

When there are definite rules, I submit that we are governed by rules. Of course, it is within the discretion of the Speaker to permit Sri Channabasappa to speak at a later stage. Well, Sri Channabasappa has taken two days aheads

Mr. SPEAKER.—What does the Hon'ble Minister mean by 'at a later stage of the debate'?

Sri Kadidal MANJAPPA.—At a later stage means, not in the earlier stage. It should necessarily mean when others have been given chance earlier.

Rule 151. "In cases not specifically provided for in these rules the Speaker may, having regard to the state of business before the Assembly and the nature of the motion, prescribe a time limit for speeches."

Mr. SPEAKER.—That does not apply to this case.

Sri Kadidal MANJAPPA.—Sri Channabasappa has spoken for two days. Whether it is desirable to give him further time, is a matter within your discretion. I do not want to say anything in the matter. Sir, I submit that if you decide to give him another opportunity to speak, it can only be at a later stage and after others have participated in the debate on this Bill.

Mr. SPEAKER.—This is a very important matter concerning the privilege of the Hon'ble Members and also I know the implications of the ruling. Therefore my ruling should not create a bad precedent. I will give a ruling on Monday.

Now the House will rise and meet at 10-30.

The House adjourned for Lunch at Ten of the Clock and met again at Thirty Minutes past Ten of the Clock.

(MR. DEPUTY SPEAKER in the Chair.)

ADJOURNMENT MOTION.

Re. Adverse effect of incidence of Sales-tax on Agricultural Produce.

Sri Mulka GOVINDA REDDY.—(Chitaldrug).—Sir, I had tabled an Adjournment motion yesterday regarding the stoppage of trade in Davangere, Tumkur and Mysore Regulated markets on account of the introduction of sales-tax from 1st April 1955, whereby the agriculturist is made to pay tax on groundnut.

Mr. DEPUTY SPEAKER.—That will be taken up on Monday.

ಶ್ರೀ ಮುಲ್ಕ ಗೋವಿಂದ ರೆಡ್ಡಿ.—ಇದು ಬಹಳ ತ್ವರಿತವಾಗಿ ಆಗಬೇಕಾದದ್ದು. ಸಾಮಾನ್ಯವಾದುದಾಗಿದ್ದರೆ ಸೋಮವಾರ ತೆಗೆದುಕೊಳ್ಳಬಹುದಾಗಿತ್ತು. ಈಗ 8 ದಿವಸಗಳಿಂದಲೂ ದಾವಣಗೆರೆ, ತುಮಕೂರು. ಮೈಸೂರು ಮಾರ್ಕೆಟ್ಟುಗಳಲ್ಲಿ ಅಗ್ರಿಕಲ್ಚರಲ್ ಪ್ರಾಡ್ಯೂಸ್ ಮಾರಾಟಕ್ಕೆ ಅವಕಾಶವಾಗದೆ........

Mr. DEPUTY SPEAKER.—My difficulty is this should have been taken up immediately after question hour at 9-30. At that time you did not raise the point.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆಗ ಚನ್ನಬಸಪ್ಪನವರ ವಿಚಾರ ಚರ್ಚೆಯಾಗುತ್ತಿದ್ದುದರಿಂದ ಹೇಳಲು ಅವಕಾಶವಾಗಲಿಲ್ಲ. ಮಾರ್ಕೆಟ್ಟುಗಳಲ್ಲಿ ಬಹಳ ಮಾಲು ಬಂದು ಬಿದ್ದಿದೆ. ಕಂದಾಯ ಕೊಡಲು ರೈತರಿಗೆ ಬಹಳ ಕಷ್ಟವಾಗಿದೆ. ಒಂದು ವಾರದಿಂದ ಈ ಪರಿಸ್ಥಿತಿಯೊದಗಿರುವುದರಿಂದ ಇದು ಅತಿ ಪ್ರಾಮುಖ್ಯವಾದುದು ಮತ್ತು ಡೆಫಿನಿಟ್ಟಾಗಿರುವ ವಿಷಯ. ರೈತರಿಗೆ ಬಹಳ ತೊಂದರೆಯಾಗಿದೆ.

It is admissible and so I request the Chair to take up this motion.

Mr. DEPUTY SPEAKER.—May I tell the Hon'ble Member that the Adjournment motion was received by our Office at 7-30 in the morning? It should have been received two hours earlier. I would advise him to wait till Monday.

Sri Mulka GOVINDA REDDY.— I sent this motion yesterday 7-50 p.m. on the 8th.

Mr. DEPUTY SPEAKER.—What will the Government say?

Sri Kadidal MANJAPPA (Minister for Revenue and Public Works).—Sir, there is an Act passed by this House last year. In accordance with that Act, Rules have been framed after calling for objections, giving one month's time to prefer objections, if any. In accordance with the rules, I suppose the tax is being collected. Somebody brought this matter to my notice only two days ago and I am going to examine the matter. Anyway it is not a matter for adjournment motion.

Sri Mulka GOVINDA REDDY.—These rules are repugnant to the spirit of the Act, Sir.

Sri V. M. MASCARENHAS (St. John's Hill).—Sir, the Sales Tax Bill was passed by this House 12 months ago in the last Budget Session. It received the assent of the President in October, six months ago. It is rather strange that the Sales Tax Department was not ready with the rules and have taken so much time to frame the rules. I am not speaking on the Adjournment motion, Sir, but I do say that the Sales Tax Department has failed in its duty in not framing the rules earlier.

Mr. DEPUTY SPEAKER.—At this stage, we are only concerned about the admissibility of the motion. You can say all that when the motion is actually taken up.

Sri V. M. MASCARENHAS.—That is for the information of the Minister concerned, Sir.

Mr. DEPUTY SPEAKER.—What is the idea of the Government?

Sri Kadidal MANJAPPA.—Sir, I have no objection to make a definite statement on Monday.

MYSORE SALES TAX (AMENDMENT) BILL 1955.

Extension of time limit for presentaion of Select Committee Report.

Sri Kadidal MANJAPPA (Minister for Revenue and Public Works).—Sir, I move.—

"That the time appointed for the presentation of the report of the Select Committee on the Mysore Sales-Tax (Amendment) Bill, 1955, be extended and that the report be presented before the close of the present session of the Assembly.

Mr. DEPUTY SPEAKER.—The question is:—

"That the time appointed for the presentation of the Report of the Select Committee on the Mysore Sales-Tax (Amendment) Bill 1955, be extended and that the Report be presented before the close of the present session of the Assembly".

The motion was adopted.

MYSORE TENANCY (SECOND AMENDMENT) BILL 1954.

Motion to consider.—(continued).

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಟೆನೆನ್ಸಿ ಕಾನೂನನ್ನು ನಾನು ಸ್ವಾಗತಿಸುತ್ತಾ ಇದರಲ್ಲಿರುವ ಮುಖ್ಯಾಂಶಗಳನ್ನು ಸಭೆಯ ಗಮನಕ್ಕೆ ತರಲು ಪ್ರಯತ್ನಪಡುತ್ತೇನೆ. ಒಬ್ಬ ಜಮೀನ್ದಾರ 25 ಎಕರೆಗಳಿಗಿಂತ ಹೆಚ್ಚಾಗಿ ಜಮೀನನ್ನಿಟ್ಟುಕೊಂಡು ವ್ಯವಸಾಯ ಮಾಡಕೂಡದು, ಜಮೀನ್ದಾರ ಸ್ವಂತ ವ್ಯವಸಾಯ ಮಾಡುವಾಗ ಇಷ್ಟು ಜಮೀನನ್ನಿಟ್ಟುಕೊಳ್ಳಲು ಅವಕಾಶವಿರಬೇಕು. ಖಾಯಂಗುತ್ತಿಗೆದಾರರಿಗೆ ಸ್ವಂತ ಜಮೀನೆಷ್ಟಿರಬೇಕು, ಜಮೀನ್ದಾರ ಸ್ವಂತ ವ್ಯವಸಾಯಕ್ಕೆ ಬೇಕಾದರೆ 25 ಸ್ಟ್ಯಾಂಡರ್ಡ್ ಎಕರೆಗಳಿಗಿಂತ ಹೆಚ್ಚಾಗಿ ಬಿಡಿಸಿಕೊಳ್ಳಲು ಅವಕಾಶವಿರಬಾರದು. ಪ್ಲಾನಿಂಗ್ ಕಮಿಷನ್ ಹೇಳಿರುವಂತೆ ಜಮೀನಿನ ಮೇಲೆ ಒತ್ತಡವಿರುವುದು ಕಡಮೆ ಮಾಡಬೇಕು. ರೈತರು ಸ್ವಂತ ವ್ಯವಸಾಯ ಮಾಡಲು ಜಮೀನು ಕೊಂಡುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲು ಜಮೀನಿನ ಮೇಲಿರುವ ಒತ್ತಡ ಕಡಮೆಮಾಡಬೇಕು ಎಂದು ಪ್ಲಾನಿಂಗ್ ಕಮಿಷನ್ ಶಿಫಾರಸು ಮಾಡಿರುವಂತೆ ಈ ಬಿಲ್ಲನ್ನು ತರಲಾಗಿದೆ. 5 ವರ್ಷಗಳವರೆಗೆ ಗೇಣಿ ಅವಧಿಯಿರಬೇಕೆಂದಿರುವುದನ್ನು 10 ವರ್ಷಗಳವರೆಗೆ ಹೆಚ್ಚಿಸಿ ರಕ್ಷಣೆ ಹೆಚ್ಚಾಗಿ ಕೊಡಬೇಕೆಂಬ ಅಂಶವನ್ನು ಅನೇಕ ಸದಸ್ಯರು ಹೇಳಿದರು. ಸುಮಾರು ಒಂದು ಎಕರೆಯಿಂದ 10 ಎಕರೆಗಳ ವರೆಗೆ ಜಮೀನುಳ್ಳವರು ಸುಮಾರು 10 ಲಕ್ಷ ಜನರಿರುವರು, 42 ಲಕ್ಷ ಎಕರೆ ಅವರ ವಶದಲ್ಲಿದೆ. 10 ಎಕರೆ ಮೇಲ್ಪಟ್ಟು 500 ಎಕರೆ ವರೆಗೆ ಉಳ್ಳವರು ಸುಮಾರು ಒಂದು ಲಕ್ಷ ಜನರಿದ್ದಾರೆ. ವಿಸ್ತೀರ್ಣ 42 ಲಕ್ಷ ಎಕರೆಗಳು. ಇದರಲ್ಲಿರುವ ವ್ಯತ್ಯಾಸ ಕಡಮೆಮಾಡುವುದು ಮುಖ್ಯವಾದ ಅಂಶ. 10—15 ಎಕರೆ ಇರುವವರು ಈ ಜಮೀನನ್ನೇ ತಮ್ಮ ಮುಖ್ಯ ಆಧಾರವಾಗಿಟ್ಟುಕೊಂಡು ವ್ಯವಸಾಯ ಮಾಡುವವರು ಯಾರಿದ್ದಾರೋ ಅವರಿಗೆ ವ್ಯವಸಾಯಮಾಡಲು ಅನುಕೂಲವಾಗುವಂತೆ ಒಂದು ಕಾನೂನನ್ನು ತಂದು ವ್ಯತ್ಯಾಸವಿರುವುದನ್ನು ತೊಡೆದುಹಾಕತಕ್ಕದು ಮುಖ್ಯವಾದ ಉದ್ದೇಶವೆಂದು ಕಂಡುಬರುತ್ತದೆ. ಅರ್ಧ ಎಕರೆ ಒಂದೆಕರೆ ಉಳ್ಳವರು ಅವರ ಜಮೀನನ್ನು ಬಹಳ ಚೆನ್ನಾಗಿ ಸಾಗುವಳಿಮಾಡಿ ಅದರಿಂದ ಜೀವನೋಪಾಯ ನಡೆಸಿಕೊಳ್ಳಲು ಬಹಳ ತೊಂದರೆಯಾಗಿರುವುದರಿಂದ ಹೆಚ್ಚು ಜಮೀನು ಅವರಿಗೆ ಸಿಕ್ಕುವಂತೆ ಮಾಡುವುದು ಕೂಡ ಈ ಕಾನೂನಿನ ಮುಖ್ಯಾಂಶವಾಗಿದೆ. ಆದರೆ ಈ ಕಾನೂನಿನಲ್ಲಿ ಒಂದೆರಡು ಲೋಪದೋಷಗಳು ಕಂಡುಬರುತ್ತವೆ. ಜಮೀನ್ದಾರ ತಾನು ಸ್ವಂತ ವ್ಯವಸಾಯ ಮಾಡದೆ ತನ್ನ ಜಮೀನನ್ನು ರೈತರಿಗೆ ಕೊಟ್ಟಿದ್ದರೆ ಕಾಲಕ್ರಮದಲ್ಲಿ ಆ ಜಮೀನನ್ನು ವಾಪಸು ಪಡೆದುಕೊಳ್ಳಲು ಆತನಿಗೆ ಹಕ್ಕಿದೆ. ಆದ್ದರಿಂದ ಯಾರಾದರೂ ವ್ಯವಸಾಯ ಮಾಡದೆ ಸುಮ್ಮನೆ ಜಮೀನು ಪಡೆದು ಶೋಷಣೆ ಮಾಡುವುದಕ್ಕೆ ಅವಕಾಶವಿರಬಾರದೆಂದು ಈ ಕಾನೂನನ್ನು ತಂದಿದೆ. ಮ್ಯಾಗ್ಸಿಮಂ ಹೋಲ್ಡಿಂಗ್ 25 ಎಕರೆ ಇಡಬೇಕೆಂದು ಹೇಳುವಾಗ ಅದನ್ನು ಬೇರೆಯವರಿಗೆ ಸಾಗುವಳಿಗೆ ಕೊಟ್ಟು ಅವರಿಂದ ಮಾಡಿಸುತ್ತೇವೆಂದು ಹೇಳಕೂಡದು ಎಂದು ಈ ಕಾನೂನಿನಲ್ಲಿದೆ. ಆದ್ದರಿಂದ ಮೂಲ ಉದ್ದೇಶ ಯಾರು ವ್ಯವಸಾಯ ಮಾಡುವುದಿಲ್ಲವೋ ಅವರಿಗೆ ಜಮೀನಿನ ಆವಶ್ಯಕತೆಯಿಲ್ಲ

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

ಎಂದು ಹೇಳುವುದು ಒಂದು ದೊಡ್ಡ ಅನುಕೂಲವಾಗಿದೆ. ಪ್ಲಾನಿಂಗ್ ಕಮಿಷನ್‌ನವರು ಈಗ ದೇಶದಲ್ಲಿ ನೂರಕ್ಕೆ 80 ಜನ ವ್ಯವಸಾಯ ಅವಲಂಬಿಗಳೆಂದೂ, 20 ಜನ ಕೈಗಾರಿಕೆಗಳಲ್ಲಿರುವವರೆಂದೂ ಹೇಳುತ್ತಾರೆ. ಈ ಸೇಕಡ 80 ಜನ ವ್ಯವಸಾಯ ಅವಲಂಬಿಸಿರುವವರು ಒಂದು ಮಟ್ಟದಲ್ಲಿ ಉತ್ಪತ್ತಿ ಮಾಡಿ ಜೀವನೋಪಾಯ ನಡೆಸಿಕೊಳ್ಳಲು ಈಗ ಅನುಕೂಲವಾಗುತ್ತಿಲ್ಲ. ಆದ್ದರಿಂದ ಜಮೀನಿನ ಮೇಲಿರುವ 80 ಭಾಗ ಜನರ ಸಂಖ್ಯೆ ಕಡಮೆಮಾಡಿ 60 ಅಥವಾ 50ಕ್ಕೆ ಅದನ್ನು ಇಳಿಸಿ ಇನ್ನು 40 ಜನರು ಬೇರೆ ಕೆಲಸ ಮಾಡಲು ಅನುಕೂಲ ಕಲ್ಪಿಸಬೇಕೆಂದಿದ್ದಾರೆ. ಹಳ್ಳಿಗಳಲ್ಲಿ ಒಂದೆರಡೆಕರೆ ಇರುವವರು ಹೊರಗಡೆ ಹೋಗಿ ಕೈಗಾರಿಕೆಗಳನ್ನು ಮಾಡಲು ಅವರಿಗೆ ಅವಕಾಶವಿರುವುದಿಲ್ಲ. ಅಲ್ಲಿ ಒಂದು ಎಕರೆಯನ್ನು ಪಡೆದಿರುವವರು ಸ್ವತಂತ್ರವಾಗಿ ಬಾಳುವುದಕ್ಕೆ, ಸಂಸಾರ ನಡೆಸುವುದಕ್ಕೆ ಅವಕಾಶವಾಗುತ್ತಿಲ್ಲ. ಒಂದೆರಡೆಕರೆ ಫ್ರ್ಯಾಗ್‌ಮೆಂಟೇಷನ್ ಇರುವುದನ್ನು ತಪ್ಪಿಸಿ ಕನಿಷ್ಠಪಕ್ಷ 5 ಅಥವಾ 10 ಎಕರೆಯಾದರೂ ವ್ಯವಸಾಯವನ್ನೇ ಅವಲಂಬಿಸಿಕೊಂಡು ಸಂಸಾರ ನಡೆಸತಕ್ಕವರಿಗೆ ಕೊಡಲು ಅವಕಾಶ ಮಾಡಿದರೆ ದೇಶಕ್ಕೆ ಅನುಕೂಲವಾಗುವುದರಿಂದ ಅದಕ್ಕೆ ತಕ್ಕಂತೆ ಈ ಬಿಲ್ಲನ್ನು ಸ್ವಲ್ಪ ಮಾರ್ಪಾಡು ಮಾಡುವುದು ಆವಶ್ಯಕ. 5 ಎಕರೆಗಿಂತ ಕೆಳದರ್ಜೆಯಲ್ಲಿರುವ ರೈತನಿಗೆ ಈ ದಿವಸ ಒಂದೆಕರೆ ಸಾಲದು, ಕೊನೇಪಕ್ಷ 5 ಎಕರೆಯಾದರೂ ಕೊಡಲು ಅವಕಾಶಮಾಡಿದರೆ ಅವನ ಸ್ಥಿತಿ ಉತ್ತಮವಾಗುತ್ತದೆಂದು ಕಂಡುಬರುತ್ತದೆ.

ಈ ಬಿಲ್ಲಿನಲ್ಲಿ ಜಮೀನುಳ್ಳವನೇ ಒಡೆಯನಾಗಬೇಕು, ಕಾಲಕ್ರಮದಲ್ಲಿ ಉಳುವವನಿಗೆ ಜಮೀನನ್ನು ಖರೀದಿಗೆ ಕೊಡಲು ಅವಕಾಶಮಾಡಬೇಕು ಎಂದಿದೆ; ಜಮೀನಿದ್ದರೆ ವ್ಯವಸಾಯ ಕಡ್ಡಾಯವಾಗಿ ಜಮೀನ್ದಾರ ತಾನೇ ಮಾಡಬೇಕು ಎಂದಿದೆ. ಜಮೀನಿದ್ದವರು ಬೇರೆಯವರಿಂದ ಕೆಲಸಮಾಡಿಸಿ ಸುಮ್ಮನೆ ಗುತ್ತಿಗೆಗೆ ಕೊಟ್ಟು ಸೋಮಾರಿಗಳಾಗಿ ಶೋಷಣೆಮಾಡುವುದು ಸರಿಯಲ್ಲ. ಜಮೀನಿಟ್ಟುಕೊಳ್ಳಬೇಕೆಂದು ಇಷ್ಟಪಡುವವರು ತಾವೇ ಸ್ವಂತವಾಗಿ ವ್ಯವಸಾಯಮಾಡಬೇಕು ಎಂದು ಏರ್ಪಾಡುಮಾಡುವುದರಿಂದ ಅನುಕೂಲವಿದೆ. ಇದರಿಂದ ಸೋಮಾರಿಗಳಾಗಲು ಇರುವ ಅವಕಾಶ ತಪ್ಪುತ್ತದೆ ಎಂದು ಈ ಕಾನೂನಿನಿಂದ ಕಂಡುಬರುತ್ತವೆ. ಈ ದಿವಸ ವ್ಯಾಪಾರಮಾಡಿ ಹೆಚ್ಚು ಲಾಭ ಪಡೆಯುತ್ತಿರುವವರಿಗೆ, ಒಂದೆರಡು ಸಾವಿರ ರೂಪಾಯಿ ಸಂಬಳ ಪಡೆಯುತ್ತಿರುವ ಸರ್ಕಾರಿ ಅಧಿಕಾರಿಗಳಿಗೆ ಮತ್ತು ಇನ್ಯಾವುದಾದರೂ ಅನೇಕ ವಿಧವಾದ ಸಂಪಾದನೆಮಾಡುತ್ತಿರುವವರಿಗೆ ಅವರ ಸಂಸಾರಕ್ಕೆ ಬೇಕಾಗುವಷ್ಟು ವರಮಾನವಿದ್ದರೂ ಕೂಡ ಅವರಿಗೂ ಜಮೀನಿನ ಆವಶ್ಯಕತೆಯಿದೆಯೆಂದು ಕೆಲವರು ಊಹೆಮಾಡುತ್ತಿದ್ದಾರೆ. ಆದ್ದರಿಂದ ಯಾರು ಸ್ವತಃ ವ್ಯವಸಾಯಮಾಡಿ ರೂಢಿಸಿಕೊಳ್ಳುತ್ತಾರೋ ಅವರಿಗೆ ಮಾತ್ರ ಜಮೀನಿರಬೇಕೆಂದು ಕಾನೂನುಮಾಡುವ ಆವಶ್ಯಕತೆ ಕಂಡುಬರುತ್ತದೆ. ಈ ಕಾನೂನಿನ ಪ್ರಕಾರ ಕಾಲಕ್ರಮದಲ್ಲಿ ಜಮೀನನ್ನಿಟ್ಟುಕೊಂಡಿರುವವನು ತಾನು ಸ್ವತಃ ವ್ಯವಸಾಯಮಾಡದೆ ಇದ್ದರೆ ಅದನ್ನು ಪಡೆದುಕೊಳ್ಳಲು ಅವಕಾಶವಿಲ್ಲ ಎಂದು ತೋರುತ್ತದೆ. 25 ಎಕರೆ ಹೋಲ್ಡಿಂಗ್ ಇಟ್ಟುಕೊಂಡು ಸ್ವಂತ ವ್ಯವಸಾಯಮಾಡಬೇಕೆಂದು ಹೇಳಬಹುದೇ ವಿನಾ ಬೇರೆಯವರಿಗೆ ಗುತ್ತಿಗೆಗೆ ಕೊಡಲು ಅವಕಾಶವಿಲ್ಲ. ಈಗ ಅಣ್ಣತಮ್ಮಂದಿರಿಗೆ ವ್ಯಾಜ್ಯವಾಗಿ ಕೋರ್ಟುಗಳಲ್ಲಿ ವ್ಯವಹಾರಗಳಿಗೆ ಅವಕಾಶವಾಗುತ್ತಿದೆ. ಈ ದಿನ ಈ ಕಾನೂನನ್ನು ಜಾರಿಗೆತರಬೇಕೆಂದಿರುವ ಸಂದರ್ಭದಲ್ಲಿ ಅನೇಕ ಕಡೆಗಳಲ್ಲಿ ಹೋರಾಟ ನಡೆದು ಕೋರ್ಟುಗಳಿಗೆ ಹೋಗಲು ಅವಕಾಶವಾಗಿದೆ ಇದನ್ನು ನೀಗಿಸಲು ಯಾವುದಾದರೂ ಪರಿಹಾರ ಸೂಚಿಸುವುದು ಉತ್ತಮವಾದುದೆಂದು ನಾನು ತಿಳಿದುಕೊಂಡಿದ್ದೇನೆ.

ಜಮೀನು ಮಾರಾಟದ ವಿಷಯದಲ್ಲಿ ಹತ್ತು ವರ್ಷ ಪ್ರೊಟೆಕ್ಟೆಡ್ ಟೆನೆಂಟ್ ಆಗಿರುವವನಿಗೆ ಜಮೀನ್ದಾರನ ಹತ್ತಿರ 25 ಎಕರೆಗಳಿಗಿಂತ ಹೆಚ್ಚಾಗಿರುವಾಗ ಜಮೀನು ಖರೀದಿಗೆ ಕೊಡಿಸಬಹುದೆಂದು ಕಾನೂನಿನಲ್ಲಿ ಹೇಳಿದೆ. ಇದರ ಪ್ರಕಾರ ಒಂದು ಸಾವಿರ ರೂಪಾಯಿ ಬೆಲೆಬಾಳುವುದಾದ ಒಂದು ಎಕರೆ ಜಮೀನು ಪಡೆಯಬೇಕಾದರೆ ಜಮೀನ್ದಾರನಿಗೆ ನೋಟೀಸು ಕೊಟ್ಟು ಕೇಳಬೇಕು. ಮೂರು ತಿಂಗಳೊಳಗೆ ಒಪ್ಪಿಗೆ ಬಾರದಿದ್ದರೆ ಅನಂತರ ಡೆಪ್ಯುಟಿ ಕಮಿಷನರಿಗೆ ನೋಟೀಸು ಕೊಟ್ಟು ತಾನು ಕೇಳುವ ಬೆಲೆಗೆ ಅಥವಾ ಮಾರ್ಕೆಟ್ ಖರೀದಿಗೆ ಆ ಜಮೀನನ್ನು ಕೊಡಿಸಬೇಕೆಂದು ಕೇಳುತ್ತಾನೆ. ಆಗ ಒಂದು ಸಾವಿರ ರೂಪಾಯಿ ಬೆಲೆಬಾಳುವುದಕ್ಕೆ ಹತ್ತು ಕಂತುಗಳಲ್ಲಿ ಹಣ ಪಾವತಿಮಾಡಲು ಅವಕಾಶಕೊಡಬೇಕೆಂದಿದೆ. ಆ ಹತ್ತು ಕಂತುಗಳಿಗೆ ಹತ್ತು ವರ್ಷ ವಾಯಿದೆ ಕೊಡಬೇಕು. 10 ವರ್ಷ ಹಣ ಕೊಡುವವರೆಗೆ ರೈತನಿಂದ ಜಮೀನ್ದಾರ ಪ್ರತಿ ವರ್ಷವೂ ಆ ಜಮೀನಿನಿಂದ ಗುತ್ತಿಗೆ ಪಡೆಯುತ್ತಾನೆ. ಆ ಗುತ್ತಿಗೆ ಕನಿಷ್ಠಪಕ್ಷ ಒಂದು ಎಕರೆಗೆ ಈ ದಿವಸ 60 ರೂಪಾಯಿನಿಂದ 100 ರೂಪಾಯಿನವರೆಗಿದೆ. ಇದರ ಪ್ರಕಾರ ಹತ್ತು ವರ್ಷಕ್ಕೆ ಬೆಳೆಗಾಗಿ 600 ರೂಪಾಯಿ ಸಲ್ಲಿಸಬೇಕಾಗುತ್ತದೆ. ಜಮೀನಿನ ಬೆಲೆ ಒಂದು ಸಾವಿರ ರೂಪಾಯಿ, ಆದ್ದರಿಂದ ಹತ್ತು ವರ್ಷದಲ್ಲಿ ಕೊಡಬೇಕೆಂದು ಹೇಳಿದರೆ ಆ ಅವಧಿಯಲ್ಲಿ 1,600 ರೂಪಾಯಿ ಕೊಟ್ಟು ಜಮೀನು ಪಡೆಯಬೇಕು. ಇದರ ಬದಲು ಸರ್ಕಾರದವರೇ ಒಂದು ಸಾವಿರ ರೂಪಾಯಿ ಹಣವನ್ನು ಸಾಲವಾಗಿ ರೈತರಿಗೆ ಕೊಟ್ಟು ಅದಕ್ಕೆ ನಾಲ್ಕು ರೂಪಾಯಿನಂತೆ ಬಡ್ಡಿ ಹಾಕಿದರೆ ಒಂದೇ ಮೊತ್ತದಲ್ಲಿ ಜಮೀನ್ದಾರನಿಗೆ ಹಣ ಕೊಡಲು ಅವಕಾಶವಾಗುತ್ತದೆ; ರೈತನಿಗೂ ಅನುಕೂಲವಾಗುತ್ತದೆ, ಇಲ್ಲದಿದ್ದರೆ ರೈತ ಹೆಚ್ಚಾಗಿ ತೆರಬೇಕಾಗುತ್ತದೆ. ಒಂದು ವೇಳೆ ಹತ್ತು ವರ್ಷ ಅವಕಾಶಕೊಟ್ಟರೆ ನಾಲ್ಕು ವರ್ಷದಲ್ಲಿ ರೈತ 400 ರೂಪಾಯಿಗಳನ್ನು ಜಮೀನ್ದಾರನಿಗೆ ಕೊಟ್ಟಿರುತ್ತಾನೆ. ಒಂದು ವೇಳೆ ರೈತ ನಿಗದಿಯಾದ ಅವಧಿಯಲ್ಲಿ ಪೂರ್ತಿ ಹಣಕೊಡದೇಹೋಗುವಪಕ್ಷಕ್ಕೆ ಅಥವಾ ನನಗೆ ಜಮೀನು ಬೇಡ ನನ್ನ ಹಣ ವಾಪಸು ಕೊಡಿ ಅನ್ನುವ ಪಕ್ಷದಲ್ಲಿ, ಸರ್ಕಾರದಲ್ಲಿ ಹಣ ಡಿಪಾಜಿಟ್ ಆಗಿರುವುದು ಇರುತ್ತದೆ, ಅದನ್ನು ಆತನಿಗೆ ವಾಪಸು ಕೊಡುತ್ತೀರಿ. ಹೀಗೆ ಮಾಡುವುದರಿಂದ ಜಮೀನ್‌ದಾರನಿಗೆ ಅನ್ಯಾಯವಾಗಬಹುದು. ಯಾವತ್ತಿನ ದಿವಸ ಆ ಪ್ರೊಟೆಕ್ಟೆಡ್ ಟೆನೆಂಟು ಜಮೀನು ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಾನೋ ಆವೊತ್ತಿನ ದಿವಸ ಜಮೀನಿನ ಬೆಲೆ 1,000 ರೂಪಾಯಿ ಇರಬಹುದು ಅದೇ ಅವನು ಬೇಡ ಎನ್ನುವ ದಿವಸ 300 ರೂಪಾಯಿಗೆ ಬಂದು ಬೆಲೆ ಇಳಿದುಹೋಗಬಹುದು. ಜಮೀನ್ದಾರ ಆವೊತ್ತಿನ ದಿವಸ ಬೇರೆಯವನಿಗೆ ಮಾರಾಟಮಾಡಿದ್ದರೆ ನಿಗದಿಯಾಗಿ ಸಾವಿರ ರೂಪಾಯಿ ಸಿಕ್ಕುತ್ತಾಇತ್ತು. ಈ ದಿನ ಅದು ಸಿಕ್ಕದೇ ನಷ್ಟವಾಗುತ್ತದೆ. ರೈತನ ಪರಿಸ್ಥಿತಿಯನ್ನು ನೋಡೋಣ ಆತನಿಗೆ ಜಮೀನು ಸಿಕ್ಕಬೇಕಾದರೆ ಅವನು ಯಾವ ದರದಂತೆ ಕೊಂಡುಕೊಳ್ಳುತ್ತೇನೆ ಎಂದು ಹೇಳುತ್ತಾನೋ ಆ ದರದಂತೆ ಆಗತಕ್ಕ ಒಟ್ಟು ಮೊಬಲಗನ್ನು ಹತ್ತು ಕಂತಿನಲ್ಲಿ ಹತ್ತು ವರ್ಷದ ಅವಧಿಯೊಳಗೆ ಕೊಡಬೇಕೆಂದು ನಿಗದಿ ಮಾಡಿದ್ದೀರಿ. ಹಾಗಿದ್ದರೂ ಕೂಡ ಅಷ್ಟು ಹಣವನ್ನು

ಅವನು ಕೊಡಬೇಕಾಗಿದ್ದರೆ ಬಹಳ ಕಷ್ಟವಿದೆ. ಆತನಲ್ಲಿ ಹಣ ಇಲ್ಲ. ಬೇರೆ ಕಡೆ ಸಾಲದ ರೂಪವಾಗಿ ಹಣ ತೆಗೆದುಕೊಂಡರೆ 9ರಿಂದ 12 ರೂಪಾಯಿಗಳವರೆಗೂ ಬಡ್ಡಿ ಹಾಕುತ್ತಾರೆ. ಇದನ್ನು ಲೆಕ್ಕಾಹಾಕಿದರೆ 600 ರೂಪಾಯಿ ಜಮೀನಿಗೆ ಕೊಡಬೇಕಾಗಿರುವ ಕಡೆ 400 ರೂಪಾಯಿ ಬಡ್ಡಿಗೇ ಕೊಡಬೇಕಾಗುತ್ತದೆ. ಈ ರೀತಿ ಒಂದಕ್ಕೆ ಎರಡರಷ್ಟು ಬಡ್ಡಿ ಕೊಟ್ಟು, ಜಮೀನ್‌ದಾರನ ಕಿರುಕುಳದಲ್ಲಿ ಸಿಕ್ಕಿಹಾಕಿಕೊಂಡು, ಕೊನೆಗೆ ಹತ್ತುವರ್ಷ ಆದಮೇಲೆ ಜಮೀನು ಸಿಕ್ಕುತ್ತದೆಯೋ ಇಲ್ಲವೋ ಎಂಬ ಒಂದು ಅನುಮಾನದ ಪರಿಸ್ಥಿತಿಯಲ್ಲಿ ಇರಬೇಕಾದ ಸಂದರ್ಭ ಅವನಿಗೆ ಉಂಟಾಗುತ್ತದೆ. ಈ ವ್ಯವಸ್ಥೆ ನೋಡಿದರೆ ರೈತರಿಗೆ ಜಮೀನಿನ ಕೈವಶ ಆಗುತ್ತದೆ ಎಂದು ನಾನಂತೂ ತಿಳಿದುಕೊಂಡಿಲ್ಲ. ಯಾವುದಾದರೂ ಒಂದು ಕಿರುಕುಳದಿಂದ ಜಮೀನ್‌ದಾರರ ಕೈಕೆಳಗೆ ಸಿಕ್ಕಿಹಾಕಿಕೊಂಡು ರೈತ ಜಮೀನು ಪಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ದಿನ ಗುತ್ತಿಗೆ ಕೊಟ್ಟು ಆತ ಜೀವನ ನಡೆಸುತ್ತಿರುವ ಪರಿಸ್ಥಿತಿಯನ್ನು ನೋಡಿದರೆ ಸರ್ಕಾರದವರೇ ಯಾವುದಾದರೂ ಒಂದು ರೀತಿಯಲ್ಲಿ ಆತನಿಗೆ ಜಮೀನಿನ ಬೆಲೆ ಎಷ್ಟಾಗುತ್ತದೆಯೋ ಅಷ್ಟನ್ನು ಮುಂಗಡವಾಗಿ ಕೊಟ್ಟು ಆತ ಜಮೀನನ್ನು ಕೊಂಡುಕೊಳ್ಳುವಹಾಗೆ ಮಾಡಬೇಕೇ ಹೊರತು ಬೇರೆ ಯಾವ ರೀತಿಯಲ್ಲಿ ಮಾಡಿದರೂ ಆತನಿಗೆ ಅನುಕೂಲವಾಗುವುದಿಲ್ಲ. ತಂಟೆತಕರಾರುಗಳು ಬಂದು ಕೋರ್ಟು ವ್ಯವಹಾರ ನಡೆದು ಜಮೀನು ಆತನ ಕೈಸೇರುವುದಿಲ್ಲ. ಜಮೀನಿನ ಮಾರಾಟವಾಗುವುದಿಲ್ಲ. ಮಾರಾಟ ಎನ್ನುವುದು ನಿರ್ದಿಷ್ಟವಾಗಿ ಒಂದು ಕ್ಷಣದಲ್ಲಿ ನಡೆಯಬೇಕು. ಕಂತಿನ ಮೇಲೆ ಹಣ ಕಟ್ಟತಕ್ಕ ರೀತಿಯಲ್ಲಿ ಸರ್ಕಾರದವರು ಹಣ ಡಿಪಾಜಿಟ್‌ಮಾಡಿಸಿಕೊಂಡರೆ ಅದನ್ನು ವಾಪಸು ಪಡೆಯಬೇಕಾದರೆ ರೈತನಿಗಾಗಲಿ, ಜಮೀನ್‌ದಾರನಿಗಾಗಲಿ ಬಹಳ ತೊಂದರೆಯಾಗುತ್ತದೆ. ಅನೇಕ ತೊಂದರೆಗಳಿಗೆ ಒಳಗಾಗಬೇಕಾಗುತ್ತದೆ. ಆ ಹಣ ಪಡೆಯಬೇಕಾದರೆ ಹೈಕೋರ್ಟು, ಸುಪ್ರೀಂ ಕೋರ್ಟಿಗೆ ಹೋಗಬೇಕಾಗುವ ಸಂದರ್ಭ ಬರುತ್ತದೆ. ಆದ್ದರಿಂದ ಈಗ ತಾವು ಇನ್‌ಸ್ಟಾಲ್‌ಮೆಂಟ್‌ಗಳನ್ನು ಡಿಪಾಜಿಟ್‌ಮಾಡಬೇಕೆಂಬ ಯಾವ ಒಂದು ಪದ್ಧತಿಯನ್ನು ಜಾರಿಗೆ ತರಬೇಕೆಂದಿದ್ದೀರಿ, ಅದನ್ನು ಬ್ಯಾಂಕುಗಳಲ್ಲಿ ಡಿಪಾಜಿಟ್‌ಮಾಡುವಂತೆ ಮಾಡಬೇಕು. ಹಾಗೆ ಮಾಡಿದ್ದೇ ಆದಪಕ್ಷದಲ್ಲಿ ಜಮೀನ್‌ದಾರನಿಗಾಗಲೀ, ರೈತನಿಗಾಗಲೀ ಸುಲಭವಾಗಿ ಹಣವಾಪಸು ಪಡೆಯುವುದಕ್ಕೆ ಅವಕಾಶವಿರುತ್ತದೆ. ಹಾಗಲ್ಲದೇ ಸರ್ಕಾರದವರೇ ಡಿಪಾಜಿಟ್ ಮಾಡಿಕೊಂಡಪಕ್ಷದಲ್ಲಿ ಅಧಿಕಾರಿಗಳಿಂದ ಹಣ ವಾಪಸುತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ 100 ರೂಪಾಯಿ ಡಿಪಾಜಿಟ್‌ಮಾಡಿದ್ದರೆ 25 ರೂಪಾಯಿ ಖರ್ಚುಮಾಡಿ 75 ರೂಪಾಯಿ ತೆಗೆದುಕೊಳ್ಳಬೇಕಾದ ಪ್ರಮೇಯ ಬರುತ್ತದೆ ಎಂದು ನನಗೆನ್ನಿಸುತ್ತಾಯಿದೆ. ಆದ್ದರಿಂದ ಯಾವುದೇ ರೀತಿಯಲ್ಲಿ ವ್ಯಾಪಾರ ನಡೆದರೂ ಕೂಡ ಸರ್ಕಾರಕ್ಕೆ ಹಣ ಕಟ್ಟತಕ್ಕ ಪದ್ಧತಿಯನ್ನು ತಪ್ಪಿಸಿ ಕೋ-ಆಪರೇಟೀವ್ ಸೊಸೈಟಿಗಳಲ್ಲೋ ಅಥವಾ ಬ್ಯಾಂಕುಗಳಲ್ಲೋ ಹಣ ಡಿಪಾಜಿಟ್‌ಮಾಡತಕ್ಕ ಪದ್ಧತಿಯನ್ನು ಇದರಲ್ಲಿ ಏರ್ಪಾಡುಮಾಡಬೇಕೆಂದು ಸೂಚಿಸುತ್ತೇನೆ.

ಈ ಮಸೂದೆಯಲ್ಲಿ ಕಾಣುವಂಥ ಅನೇಕ ವ್ಯತ್ಯಾಸಗಳನ್ನು ಮತ್ತು ಲೋಪದೋಷಗಳನ್ನು ನಿವಾರಣೆಮಾಡಲು ಇದನ್ನು ಕೂಲಂಕಷವಾಗಿ ಪರಿಶೀಲಿಸಬೇಕಾಗುತ್ತದೆ. ಆದಕಾರಣ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ಇವುಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ ಈ ಸಭೆಗೆ ಕಳುಹಿಸಿಕೊಡುವುದಾದರೆ ನಾವು ಇದರ ವಿಷಯದಲ್ಲಿ ಒಂದು ತೀರ್ಮಾನಮಾಡಲಿಕ್ಕೆ ಅವಕಾಶವಾಗುತ್ತದೆಯೇ ವಿನಾ ಈ ಒಂದು ಸಭೆಯಲ್ಲಿ ಎಲ್ಲರೂ ಕುಳಿತುಕೊಂಡು clause by clause ಚರ್ಚೆಮಾಡಿ ವಿಷಯಗಳನ್ನು ಕ್ರೋಢೀಕರಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಇದರಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಿ, ಜಮೀನಿನ ವ್ಯವಸಾಯ ಮಾಡತಕ್ಕವನಿಗೆ ಕಾಲಕ್ರಮೇಣದಲ್ಲಿ ಜಮೀನ್‌ದಾರರಿಂದ ಶೋಷಣೆ ಆಗದಂತೆ ಆತನಿಗೆ ಜಮೀನು ದೊರೆಯುವಂತಾಗಲು ತಕ್ಕ ಸೌಲಭ್ಯವುಂಟುಮಾಡಿಕೊಡಬೇಕೆಂದು ಹೇಳುತ್ತೇನೆ. ಆ ರೀತಿ ಆಗಿ ಆತ ಸ್ವತಃ ವ್ಯವಸಾಯಮಾಡುವಂತಾಗಬೇಕು. ಮತ್ತು fragmentation of holdings ½ ಎಕರೆ, ¼ ಎಕರೆ ಇರುವುದೆಲ್ಲಾ ಒಟ್ಟಿಗೆ ಸೇರಿ ಕೊನೆಯಪಕ್ಷ ಒಬ್ಬ ಮನುಷ್ಯನಿಗೆ ಐದು ಎಕರೆ ಜಮೀನು ಇರುವಂತೆಮಾಡಲು ಈ ಕಾನೂನನ್ನು ಸೂಕ್ತ ಬದಲಾವಣೆಮಾಡುವುದರಿಂದ ದೇಶದಲ್ಲಿ ಶಾಂತಿ ನೆಲಸುತ್ತದೆ, ರೈತನಿಗೂ ಕೂಡ ರಕ್ಷಣೆ ದೊರಕುತ್ತದೆ. ಒಟ್ಟಿನಲ್ಲಿ ಇಷ್ಟು ಹೇಳಿ, ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ವಿಷಯಗಳನ್ನು ಕೂಲಂಕಷವಾಗಿ ಚರ್ಚೆಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ ಅನುಸೂಚಿತ ಜಾತಿಗಳು).—ಸ್ವಾಮಿ, ಈ ಗೇಣಿ ಕಾನೂನನ್ನು ನಾನು ಸ್ವಾಗತಮಾಡುತ್ತಾ ಒಂದೆರಡು ಅಂಶಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಈಗ ಸರ್ಕಾರದವರು ಕೊಟ್ಟಿರತಕ್ಕ Statement of Objects and Reasonsನಲ್ಲಿ ಎರಡು ವಿಷಯಗಳನ್ನು ಹೇಳಿದ್ದಾರೆ. ಒಂದು 1952ನೆ ಆಕ್ಟಿನಲ್ಲಿ ಇದ್ದಂಥ ಕೆಲವು ಕುಂದುಕೊರತೆಗಳನ್ನು ಹೋಗಲಾಡಿಸುವುದು, ಎರಡನೆಯದು ಯಾವನು ಕಷ್ಟಪಟ್ಟು ಭೂಮಿಯನ್ನು ಉಳುತ್ತಾನೆಯೋ ಅವನಿಗೆ ಆ ಭೂಮಿಯಲ್ಲಿ ಸಾಕಾದಷ್ಟು ಹಕ್ಕನ್ನು ಸಂಪಾದಿಸಿ ಕೊಡಬೇಕು. ಆಗ ಆತ ನಿರಾಶನಾಗಬಾರದು. ನಿರಾಶನಾದಪಕ್ಷದಲ್ಲಿ ದೇಶಕ್ಕೆ ಬಡತನ ಜಾಸ್ತಿಯಾಗುತ್ತದೆ ಎಂದು ಹೇಳಿ ಪ್ಲಾನಿಂಗ್ ಕಮಿಷನ್‌ನವರು ಶಿಫಾರಸುಮಾಡಿರುವಂತೆ ಆತನಿಗೆ ಒಂದು ಹೆಚ್ಚಿನ ಹಕ್ಕುಬಾಧ್ಯತೆಯನ್ನು ಸಂಪಾದಿಸಿಕೊಳ್ಳಲಿಕ್ಕೆ ಅವಕಾಶಮಾಡಿಕೊಡಬೇಕೆಂದು ಹೇಳಿ ಇದನ್ನು ತಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಕೆಲವು ಸಂಸ್ಥಾನಗಳಲ್ಲಿ ಈ ಭೂಮಿಯ ಸಮಸ್ಯೆಯ ವಿಷಯದಲ್ಲಿ ಬಹಳ ನಿಧಾನಮಾಡುತ್ತಾ ಇದ್ದಾರೆ. ಅದರಲ್ಲೂ ಕೂಡ ಮೈಸೂರು ಸಂಸ್ಥಾನದವರು ಬಹಳ ನಿಧಾನ ಮಾಡುತ್ತಾ ಇದ್ದಾರೆ ಎಂದು ಪ್ಲಾನಿಂಗ್ ಕಮಿಷನ್‌ನವರು ಅಭಿಪ್ರಾಯಪಟ್ಟಿರುವಂತೆ ಕೇಳಿದ್ದೇನೆ. ಮೊನ್ನೆ ದಿನ ಶ್ರೀಮಾನ್ ಚನ್ನಬಸಪ್ಪನವರು ನಾಲ್ಕು ವಿಷಯಗಳನ್ನು ಹೇಳಿದರು. Absentee Landlords ಯಾರಿದ್ದಾರೆ ಅಂಥವರ ಒಂದು ಗುಂಪನ್ನು ತಪ್ಪಿಸಬೇಕು ಎಂಬುದು ಒಂದನೆಯದು, tiller of the soil must be the owner of the land ಎನ್ನುವುದು ಎರಡನೆಯದು, ಇನ್‌ಟೆನ್ಸೀವ್ ಕಲ್ಟಿವೇಷನ್‌ಮಾಡಬೇಕು ಎಂಬುದು ಮೂರನೆಯದು, ಮತ್ತು ಇಂಟರ್‌ಮೀಡಿಯರೀಸ್ ಯಾರಿದ್ದಾರೆ ಅವರನ್ನು ತಪ್ಪಿಸಬೇಕು ಎಂಬುದು ನಾಲ್ಕನೆಯದು. ಈ ರೀತಿ ನಾಲ್ಕು ವಿಷಯಗಳನ್ನು ಹೇಳಿದ್ದಾರೆ.

ಈಗ Absentee landlords ವಿಷಯ ತೆಗೆದುಕೊಂಡರೆ ನನಗೆ ತಿಳಿದಮಟ್ಟಿಗೆ ಮೈಸೂರು ಸಂಸ್ಥಾನದಲ್ಲಿ ಹಿಡುವಳಿ ಬಂಜರು ಬಹಳವಾಗಿ ಇದೆ. ಈ ವಿಷಯದಲ್ಲಿ ಸರ್ಕಾರದವರು ಏನೊಂದು ಕಾನೂನನ್ನು

(ಶ್ರೀ ಎಂ. ಚಿಕ್ಕಲಿಂಗಯ್ಯ.)

ಮಾಡಿದ್ದಾರೆಯೋ ಅದನ್ನು ಸರಿಯಾಗಿ ಜಾರಿಗೆ ಕೊಡುತ್ತಿಲ್ಲ. ಒಬ್ಬೊಬ್ಬರ ಹತ್ತಿರ 300-400 ಎಕರೆ ಬಂಜರು ಜಮೀನು ಇದೆ. ಇಷ್ಟೊಂದು ಏಕೆ ಬಿಟ್ಟುಕೊಂಡಿದ್ದೀರಿ ಎಂದರೆ ಹುಲ್ಲುಗಾವಲಿಗಾಗಿ ಇಟ್ಟುಕೊಂಡಿದ್ದೇವೆ ಎಂದು ಅನೇಕರು ಹೇಳಿದ್ದಾರೆ ಸರ್ಕಾರದವರು ಈ ವಿಷಯದಲ್ಲಿ ಒಂದು ಡಿಸ್ಟ್ರಿಕ್ಟ್ ಕಮಿಟಿ ಮಾಡಿದ್ದರು. ಆ ಕಮಿಟಿಯಲ್ಲಿ ಎಲ್ಲಾ ತಾಲ್ಲೂಕುಗಳಿಂದಲೂ ಇನ್‌ಫರ್ಮೇಷನ್ ಕೂಡಿಸಿಕೊಡಬೇಕೆಂದು ಮನವಿಮಾಡಿಕೊಂಡಿದ್ದರು. ಅದು ನನಗೆ ಚೆನ್ನಾಗಿ ಗೊತ್ತಿದೆ. ಹಿಡುವಳಿ ಬಂಜರು ಯಾರ್‍ಯಾರ ಹತ್ತಿರ ಎಷ್ಟೆಷ್ಟು ಇದೆ ಎಂಬ ಸಮಾಚಾರ ಸಂಗ್ರಹ ಮಾಡಿ, ಅನಂತರ ತಾವು ಆ ಕಾನೂನನ್ನು ಜಾರಿಗೆ ಕೊಡಬೇಕಾಗಿತ್ತು, ಆ ರೀತಿ ಜಾರಿಗೆ ಕೊಟ್ಟಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳುತ್ತಾ ಇದ್ದೇನೆ. ಒಂದು ವೇಳೆ ಆ ಆಕ್ಟು ಅಂಗೀಕಾರವಾದ ಲಾಗಾಯ್ತಿನಿಂದ ಅದನ್ನು ಜಾರಿಗೆ ಕೊಟ್ಟಿದ್ದ ಪಕ್ಷದಲ್ಲಿ ಈ ಟೆನೆನ್ಸಿ ಆಕ್ಟು ಇಷ್ಟು ಕಠಿಣವಾದ ಸಮಸ್ಯೆ ಆಗುತ್ತಿರಲಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಯುದ್ಧ ಪ್ರಾರಂಭವಾಗುವುದಕ್ಕೆ ಮುಂಚೆ ಜಮೀನಿನ ಸಮಸ್ಯೆ ಅಷ್ಟಾಗಿ ಹೆಚ್ಚಿರಲಿಲ್ಲ. ಈ ಹತೋಟಿ ಯಾವಾಗ ಬಂತೋ ಅಂದಿನಿಂದ ಇದು ಪ್ರಾರಂಭವಾಗಿ ಒಂದು ದೊಡ್ಡ ಸಮಸ್ಯೆಯಾಗಿ ತಲೆದೋರಿದೆ. ಮೊದಲು ಕೆಲವರು ತರೀ ಜಮೀನನ್ನು ಎಕರೆಗೆ 30-40 ರೂಪಾಯಿನಂತೆ ಮಾರಿಕೊಂಡಿರುವವರೂ ಇದ್ದಾರೆ, ಇದನ್ನು ಪದೇಪದೇ ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ. ಈಗ 200-300 ಎಕರೆ ತರೀ ಜಮೀನು ಯಾರು ಇಟ್ಟುಕೊಂಡಿದ್ದಾರೆ ಅವರು ಅದಕ್ಕೆ ಸರಿಯಾದ ಬೆಲೆ ಕೊಟ್ಟು ತೆಗೆದುಕೊಂಡಿಲ್ಲ. ಬೇಕಾದರೆ ಅದನ್ನು ಪರಿಶೀಲನೆಮಾಡಬಹುದು. 200-300 ಎಕರೆ ಜಮೀನು ಶ್ರೀರಂಗಪಟ್ಟಣದಲ್ಲಿ ಇಟ್ಟುಕೊಂಡು ಅವರು ಮಾತ್ರ ಬೆಂಗಳೂರೋ, ಮದರಾಸೋ, ಹೈದರಾಬಾದೋ, ಕಲ್ಕತ್ತದಲ್ಲೋ ಇರುತ್ತಾರೆ. ರೈತ ಕಷ್ಟಪಟ್ಟು 24 ಗಂಟೆಯೂ ದುಡಿದು, ರಾತ್ರಿ ಹಗಲು ಕಳೆಕಿತ್ತು, ನೀರಿನಲ್ಲಿ ನಿಂತು, ನಾಟಿಹಾಕಿ ಬೆಳೆ ಮಾಡಬೇಕಾದರೆ ಅವನ ಕಷ್ಟ ಹೇಳತೀರದು ಇದು ರೈತರಾಗಿರತಕ್ಕ ಮಾನ್ಯ ಸದಸ್ಯರನೇಕರಿಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ absentee landlords ಆಗಿ ಮದರಾಸಿನಲ್ಲೋ, ಕಲ್ಕತ್ತಾದಲ್ಲೋ ಯಾರಿರುತ್ತಾರೋ ಅವರಿಗೆ ಇದನ್ನು ಕಡ್ಡಾಯವಾಗಿ ಅನ್ವಯಿಸಬೇಕೆಂದು ಒತ್ತಾಯಪಡಿಸುತ್ತೇನೆ.

ಆ ಮೇಲೆ Tiller of the soil must be the owner of the land ಎಂದು ಹೇಳಿದರು. ಈಗ ಈ ಟೆನೆನ್ಸಿ ಆಕ್ಟು ಜಾರಿಗೆ ಬಂದಮೇಲೆ ಯಾವ ರೀತಿ ಆಗುತ್ತಾ ಇದೆ ಎಂಬುದನ್ನು ಹೇಳುತ್ತೇನೆ. ಕೆಲವರು ಗೇಣಿದಾರರಿಗೆ ಗೇಣಿ ಕೊಡುವಾಗ ರೆಕಾರ್ಡ್ ಮೂಲಕ ಕೊಡುತ್ತಾ ಇಲ್ಲ. ಕೈತೂಕ, ಬಾಯಿಬಣ್ಣ ಅನ್ನುವ ಹಾಗೆ ನಡೆಯುತ್ತಾ ಇದೆ. ಯಾವನಾದರೂ ಒಬ್ಬ ಗೇಣಿದಾರ, ಸ್ವಾಮಿ, ಏನಾದರೂ ಒಂದು ಗುರುತಿಗೆ ಇರಲಿ, ಪತ್ರ ಬರೆದುಕೊಡಿ ಅಂತ ಕೇಳಿದರೆ 20 ವರ್ಷದಿಂದ ಮಾಡುತ್ತಾ ಇದ್ದೀ, ನಿನಗೆ ಏನು ಕಷ್ಟ ಆಗಿದೆ, ಪತ್ರ ಬರೆದುಕೊಟ್ಟರೆ ಕೊನೆಗೆ ನಿನಗೇ ತೊಂದರೆ ಆಗುತ್ತದೆ, ಜಮೀನು ಇಲ್ಲದಹಾಗೆ ಆಗುತ್ತದೆ ಎಂದು ಏನಾದರೂ ಹೇಳಿ ಅವನನ್ನು ಒಪ್ಪಿಸಿಬಿಡುತ್ತಾರೆ. ಅವನು ಹಾಗೇ ಆಗಲಿ ಸ್ವಾಮಿ ಎಂದು ಒಪ್ಪಿಕೊಂಡು ಬಿಡುತ್ತಾನೆ. ಇಂಥಾದ್ದೆಲ್ಲಾ ನಡೆಯುತ್ತಾ ಇದೆ. ಎರಡನೆಯದಾಗಿ 6ನೇ ಸೆಕ್ಷನ್‌ನಲ್ಲಿ for the words "the crop or crops", the words "the main crop" shall be substituted ಎಂದು ಹೇಳುತ್ತೀರಿ. Main crop ಅಂದರೆ ರಾಗಿ ಕೂಡ ಆಗುತ್ತದೆ. ಇದು 4-5 ತಿಂಗಳಿನಲ್ಲಿ ಬರುತ್ತದೆ ಇದಕ್ಕೂ ತಾವು ಅನ್ವಯಿಸಬಹುದೇ ಎಂಬುದನ್ನು ಯೋಚನೆಮಾಡಬೇಕೆಂದು ಹೇಳುತ್ತೇನೆ.

ಈಗ ಪಹಣಿ ಬರೆಯುವಾಗ ಏನಾಗುತ್ತಿದೆ ಎಂದರೆ ಯಾವನು ಕಷ್ಟಪಟ್ಟು ಜಮೀನು ಮಾಡುತ್ತಾನೆಯೋ ಅವನ ಹೆಸರಿಗೆ ಪಹಣಿ ಬರೆಯುತ್ತಾ ಇಲ್ಲ. ಯಾರು ಜಮೀನ್ದಾರರು ಇದ್ದಾರೋ ಅವರ ಹೆಸರಿನಲ್ಲಿ ಪಹಣಿ ಬರೆಯುತ್ತಾ ಇದ್ದಾರೆ. ಇದರಿಂದ ಏನಾಗುತ್ತಿದೆ ಎಂದರೆ ಯಾವನು ಸ್ವತಃ ಜಮೀನು ವ್ಯವಸಾಯ ಮಾಡುತ್ತಾನೋ ಅವನು 10 ವರ್ಷ ಅಲ್ಲ 20 ವರ್ಷ ಮಾಡಿದರೂ ಕೂಡ ಅವನ ಹೆಸರು ಪಹಣಿಯಲ್ಲಿ ಇರುವುದಿಲ್ಲ ಮತ್ತು ಅವನೇ ಜಮೀನು ವ್ಯವಸಾಯಮಾಡುತ್ತಿದ್ದಾನೋ ಅಥವಾ ಜಮೀನುದಾರ ಮಾಡುತ್ತಿದ್ದಾನೋ ಎಂಬ ಸಂಶಯ ಕೂಡ ಬರುತ್ತದೆ. ಆದ್ದರಿಂದ ಪಹಣಿ ಬರೆಯುವಾಗ ಯಾವನು actual ಆಗಿ ಜಮೀನುಮಾಡುತ್ತಾನೋ ಅವನ ಹೆಸರಿನಲ್ಲಿ ಪಹಣಿ ಬರೆಯಬೇಕೆಂದು insist ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಒಬ್ಬ ಮನುಷ್ಯನಿಗೆ 100 ಎಕರೆ ಜಮೀನಿದ್ದರೆ ಆತನಿಗೆ 4-5 ಟೆನೆಂಟುಗಳಿದ್ದರೆ ಅವರಿಗೆ ಇಷ್ಟಿಷ್ಟು ಜಮೀನು ಎಂದು ವಿಭಾಗವಾಡಿ ಅವರಿಗೆ ಖಾತೆ ವರ್ಗಾವಣೆಮಾಡಿಕೊಡಬೇಕಾಗಿದೆ. ಈಗಾಗಲೇ ಈ ವ್ಯವಸಾಯದ ಜಮೀನುಗಳು ಖರೀದಿಯಾಗುವುದು ಜಾಸ್ತಿಯಾಗುತ್ತಿದೆ. ಈಗ ಈ ರೀತಿಯಾಗಿ ಒಂದು ಕಾನೂನನ್ನು ಜಾರಿಗೆ ತರುತ್ತಾರೆಂಬ ಕೂಗು ದೇಶಾದ್ಯಂತವೂ ಜನರಿಗೆಲ್ಲಾ ತಿಳಿದುಹೋಗಿದೆ. ಅದಕ್ಕಾಗಿ ಮುಂದೆ ನಮ್ಮಲ್ಲಿ ಹಾಗೇನಾದರೂ ಹೆಚ್ಚಿನ ಜಮೀನುಗಳನ್ನಿಟ್ಟುಕೊಂಡಿದ್ದರೆ ಹೇಗೂ ಸರ್ಕಾರದವರು ನಾಳೆ ಇವುಗಳನ್ನು ಕಿತ್ತುಕೊಳ್ಳುತ್ತಾರೆಂಬ ಹೆದರಿಕೆಯಿಂದ ಈ ದಿವಸ ಆ ದೊಡ್ಡ ದೊಡ್ಡ ಜಮೀನ್ದಾರರೆಲ್ಲಾ ಜಮೀನನ್ನು ರೈತರಿಂದ ಬಿಡಿಸಿಕೊಂಡು ಮಾರಾಟಮಾಡುತ್ತಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆ ತಾವೇನು ಉಪಾಯ ಸೂಚಿಸುತ್ತೀರಿ ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದರೆ ಈ ದಿವಸ ಹಾಗೆಲ್ಲಾ ಮಾಡುತ್ತಿದ್ದಾರೆಂದು ನಾನು ಈ ಸಬ್-ರಿಜಿಸ್ಟ್ರಾರ್ ಅವರ ಆಫೀಸುಗಳನ್ನೆಲ್ಲಾ ಮುಚ್ಚಿಸಿಬಿಡಿ ಎಂದು ಹೇಳುವುದಿಲ್ಲ. ಆದರೆ ನಾನು ಹೇಳತಕ್ಕದ್ದು ಹೀಗೆ 400-500 ಎಕರೆ ಜಮೀನುಗಳನ್ನಿಟ್ಟುಕೊಂಡಿರತಕ್ಕಂಥವರನ್ನು ಆ ಜಮೀನನ್ನು ಅವರು ಇತರರಿಗೆ ಪರಭಾರೆಮಾಡದಹಾಗೆ ಮಾಡಿ ಎಂದು ಮಾತ್ರ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಹಾಗೊಂದು ವೇಳೆ ಅವರು ಮಾರಾಟಮಾಡಿದರೇನು ವ್ಯತ್ಯಾಸವಾಗುತ್ತದೆ ? ಆ ಜಮೀನು ಅಲ್ಲೇ ಇರುತ್ತದೆಯಲ್ಲವೆ ?

Sri Kadidal MANJAPPA —What the Chair said is, even if the land is sold, the tenant will be there, the land will be there.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಬಗ್ಗೆ ತಾವು ಒಂದು ಕಠೋರವಾದ ಶಾಸನವನ್ನು ಜಾರಿಗೆ ತಂದರೆ ಆಗ ಅವರಿಗೆ ಹೀಗೆಲ್ಲಾ ಜಮೀನನ್ನು ಮಾರಾಟಮಾಡಿಕೊಳ್ಳಲು ಅವಕಾಶವೆಲ್ಲಿರುತ್ತದೆ ? ಆದರೆ ತಾವು ಈಗಾಗಲೇ ದೇಶದಲ್ಲಿ ಆ ಒಂದು ಸೋಷಿಯಲಿಸ್ಟಿಕ್ ಪ್ಯಾಟರ್ನ್

ಸೊಸೈಟಿಯನ್ನು ಜಾರಿಗೆತರುವುದಾಗಿ ಹೇಳುತ್ತಿದ್ದೀರಿ, ಹೀಗೆ ತಾವು ಹೇಳುತ್ತಿರುವುದಕ್ಕಾದರೂ ಕಾರಣವಿಷ್ಟೆ — ದೇಶದಲ್ಲಿ ಬಹಳ ಜನ ಬಡವರಿದ್ದಾರೆ ; ಅವರೂ ಕೂಡ ನಮ್ಮಂತೆ ಎಲ್ಲರಹಾಗೆ ಒಂದು ಒಳ್ಳೆಯ ಸ್ಥಿತಿಗೆ ಬರಲಿ ಅನ್ನತಕ್ಕದ್ದೇ ಆಗಿದೆ. ಹೀಗೆ ಮಾಡಿದರೆ ದೇಶಕ್ಕೂ ಕೂಡ ಒಂದು ಕಲ್ಯಾಣವನ್ನುಂಟುಮಾಡಿದ ಹಾಗ ಆಗುತ್ತದೆ. ತಾವು ಇದನ್ನು ಬೇಗ ಜಾರಿಗೆ ತರಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಈಗ ಈ ಇಂಟರ್‌ಮೀಡಿಯರೀಗಳನ್ನು ತೆಗೆದುಹಾಕತಕ್ಕ ಬಗ್ಗೆ ಈಗಾಗಲೇ ಪರ್ಸನಲ್ ಅಂಡ್ ಮಿಸ್ಲೇನಿಯಸ್ ಇನಾಂ ಅಬಾಲಿಷನ್ ಬಿಲ್ಲನ್ನು ಮತ್ತು ಛಾರಿಟಬಲ್ ಇನಾಂ ಅಬಾಲಿಷನ್ ಬಿಲ್ಲನ್ನು ಜಾರಿಗೆ ತರಲು ಹೊರಟಿದ್ದೀರಿ. ಇದರಿಂದ ಈಗ ಈ ಮಧ್ಯಾವರ್ತಿ ಜನಗಳೆಲ್ಲಾ ಹೊರಟುಹೋಗುತ್ತಾರೆ. ಈಗ ಯಾರೋ ಒಬ್ಬ ಆಬ್‌ಸೆಂಟಿ ಲ್ಯಾಂಡ್‌ಲಾರ್ಡಿದ್ದಾನೆ. ಆತನಿಗೆ 500 ಎಕರೆ ಜಮೀನಿರುತ್ತದೆ. ಆ ಜಮೀನನ್ನೆಲ್ಲಾ ಆತನು ಯಾರಿಗೋ ಗುತ್ತಿಗೆ ಕೊಟ್ಟು ಎಲ್ಲೋ ತಾನು ವಾಸಮಾಡುತ್ತಿರುತ್ತಾನೆ. ಆದರೆ ಬರವಣಿಗೆಯಲ್ಲಿ ಮಾತ್ರ ಏನೂ ಇರುವುದಿಲ್ಲ. ಇಂಥ ಸಂದರ್ಭಗಳು ವಿಶೇಷವಾಗಿವೆ. ಇನ್ನು ಕೆಲವು ಕಡೆಗಳಲ್ಲಿ ಈ ಆಬ್‌ಸೆಂಟಿ ಲ್ಯಾಂಡ್‌ಲಾರ್ಡ್‌ಗಳ ಜಮೀನನ್ನು ಒಳ್ಳೆಯ ಅನುಕೂಲವಾಗಿ ಪಡೆದಿರುವಂಥ ರೈತರು ಎಕರೆ ಒಂದಕ್ಕೆ ಎಂಟು ಪಲ್ಲಗಳಂತೆ ಗುತ್ತಿಗೆ ಕೊಡುತ್ತೇವೆಂದು ಹೇಳಿ ತೆಗೆದುಗೊಂಡು ಜಮೀನ್ದಾರರಿಗೆ ಏನೂ ಕೊಡದೆ ಪೂರಾ ಸತಾಯಿಸುತ್ತಿರುವಂಥ ನಿದರ್ಶನಗಳೂ ಇವೆ. ಇನ್ನು ಕೆಲವು ಸಂದರ್ಭಗಳಲ್ಲಿ ಆ ಜಮೀನ್ದಾರರು "ನೀನು ಸರಿಯಾಗಿ ಗುತ್ತಿಗೆ ಕೊಡುತ್ತಿಲ್ಲ ; ಆದುದರಿಂದ ಜಮೀನನ್ನು ಇನ್ನು ಮೇಲೆ ನೀನು ಬಿಟ್ಟುಬಿಡಬೇಕು" ಎಂದು ಒತ್ತಾಯಪಡಿಸಿದಾಗ ಆ ರೈತರುಗಳೆಲ್ಲಾ ಒಂದಾಗಿ ಹೇಗೂ ಈತನು ಬಂದು ಸ್ವಂತವಾಗಿ ಇಲ್ಲಿ ಜಮೀನ್ ಸಾಗುವಳಿ ಮಾಡಲು ಸಾಧ್ಯವಿಲ್ಲ, ಆದುದರಿಂದ ನಾವೆಲ್ಲರೂ ಸ್ವಲ್ಪ ಬಿಗಿಯಾಗಿದ್ದರೆ ಆಗ ಪುನಃ ಆತನು ಆ ಜಮೀನುಗಳನ್ನೆಲ್ಲಾ ನಮಗೇ ಕೊಟ್ಟುಹೋಗುತ್ತಾನೆಂದು ಕೆಲ ಕೆಲವು ಕಡೆ ಇಂಥ ಕಟ್ಟುಪಾಡುಗಳನ್ನು ಮಾಡಿಕೊಂಡು ಜಮೀನ್ದಾರರಿಗೂ ರೈತರು ತುಂಬ ತೊಂದರೆಗಳನ್ನು ಕೊಡುತ್ತಿದ್ದಾರೆ. ಈ ಎಲ್ಲ ಅಂಶಗಳನ್ನೂ ಸರ್ಕಾರದವರು ಈಗ ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ಈ ಗೇಣೀ ಕಾನೂನು ಜಾರಿಯಲ್ಲಿದ್ದರೂ ಅನೇಕ ಕಡೆಗಳಲ್ಲಿ ಅನೇಕ ಗ್ರಾಮಗಳಲ್ಲಿರತಕ್ಕಂಥ ಜನರಿಗೆ ಇದರ ಅರಿವೇ ಇರುವುದಿಲ್ಲ, ತಾವು ಇದನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ದೇಶಾದ್ಯಂತವೂ ಪ್ರಚಾರಪಡಿಸಬೇಕಾಗಿದೆ. ಈ ಜಮೀನ್ದಾರರಿಗೂ ಮತ್ತು ಜಮೀನ್ ಮಾಡತಕ್ಕಂಥ ರೈತರಿಗೂ ಒಂದು ವಿರಸವನ್ನು ತಂದೊಡ್ಡಬೇಕೆಂಬ ಉದ್ದೇಶದಿಂದಲೇನೂ ನಾನು ಇದನ್ನೆಲ್ಲಾ ಹೇಳುತ್ತಿಲ್ಲ. ನನ್ನ ಉದ್ದೇಶ ಇದಲ್ಲ. ಆದರೆ ಈಗ ಸರ್ಕಾರದವರು ಯಾವ ಒಂದು ತಿದ್ದುಪಡಿಯನ್ನು ಈಗ ತಂದಿದ್ದಾರೋ ಅದರಿಂದ ಜನರಿಗೆ ಅನುಕೂಲವಾಗುತ್ತದೆಯೇ ಹೊರತು ಯಾರಿಗೂ ಅಂಥ ಅನ್ಯಾಯವೇನೂ ಆಗುವುದಿಲ್ಲವೆಂದು ಹೇಳುತ್ತೇನೆ.

ಆದರೆ ಈಗ ಸರ್ಕಾರದವರು ತಂದಿರತಕ್ಕಂಥ ಕಾನೂನಿನಲ್ಲಿಯೇ ಈ ಸೀಲಿಂಗ್ ಲಿಮಿಟ್ಟನ್ನೂ ಸಹ ಏಕೆ ತರಬಾರದಾಗಿತ್ತೆಂದು ಕೆಲವರು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಇದೂ ಕೂಡ ಬಹಳ ಮುಖ್ಯವಾದ ವಿಚಾರ. ಇದನ್ನೂ ಕೂಡ ಮಾಡಲೇಬೇಕಾಗಿದೆ. ಈ ಸೀಲಿಂಗ್ ಲಿಮಿಟ್ಟನ್ನು ನಿರ್ಧಾರ ಮಾಡದೇ ಹೋದರೆ ಈ ಕಾನೂನು ಪೂರ್ತಿಯಾದಂತೆ ಆಗುವುದಿಲ್ಲ. ಆದರೆ ಈಗಾಗಲೇ ಇಂಡಿಯಾ ಸರ್ಕಾರದವರು ಈ ಬಗ್ಗೆ ಒಂದು ಸಮಿತಿಯನ್ನೇ ನೇಮಕಮಾಡಿದ್ದಾರೆಂದು ಕೇಳುತ್ತೇನೆ. ಎಲ್ಲಾ ಸಂಸ್ಥಾನಗಳ ಭೂ ಸುಧಾರಣೆಯನ್ನು ಯಾವ ರೀತಿಯಾಗಿ ಮಾಡಬೇಕಾಗಿರುತ್ತೆಂಬ ಬಗ್ಗೆ ಅವರು ಎಲ್ಲಾ ವಿಷಯಗಳನ್ನೂ ಪರಿಶೀಲನೆ ಮಾಡುತ್ತಿದ್ದಾರೆ. ಅವರೂ ಸಹ ಅಲ್ಲಿ ಈಗ ಸೀಲಿಂಗ್ ಲಿಮಿಟ್ಟನ್ನು ನಿರ್ಧರಿಸಿ ಕಾನೂನನ್ನು ಜಾರಿಗೆ ತರಬೇಕೆಂದಿದ್ದಾರೆಂದು ಕೇಳುತ್ತೇನೆ. ಆದುದರಿಂದ ತಾವೂ ಸಹ ಮೊದಲೇ ಈ ಸೀಲಿಂಗ್ ಲಿಮಿಟ್ಟನ್ನು ನಿರ್ಧಾರ ಮಾಡಿ ಅದನ್ನೂ ಸಹ ಈ ಕಾನೂನಿನಲ್ಲೇ ಅಳವಡಿಸಿದರೆ ಚೆನ್ನಾಗಿರುತ್ತದೆಂದು ತಿಳಿದುಕೊಂಡಿದ್ದೇನೆ.

ಮತ್ತೆ ಕೆಲವರು ಈ ಭೂಸುಧಾರಣೆಯೊಂದನ್ನೇ ತಾವು ಜಾರಿಗೆ ತರಬಾರದು, ಇದೊಂದನ್ನೇ ತಂದರೆ ಏನೂ ಅಷ್ಟು ಸುಖವಿಲ್ಲ, ಇದೇ ರೀತಿ ತಾವು ಇತರೇ ಎಲ್ಲಾ ಆಸ್ತಿಪಾಸ್ತಿಗಳಿಗೂ ಕಾನೂನನ್ನು ತರಬೇಕೆಂದು ಕೇಳುತ್ತಿದ್ದಾರೆ. ಆದರೆ ಈಗ ಸಧ್ಯಕ್ಕೆ ಹಾಗೆ ಮಾಡುವುದಕ್ಕಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ದಿವಸ ಆಗಲೇ ಜನರು ಯಾರೂ ಹಳ್ಳಿಗಳಲ್ಲಿ ವಾಸಮಾಡುವುದಕ್ಕೆ ಇಷ್ಟಪಡುವುದಿಲ್ಲ. ಜನರು ಪಟ್ಟಣವಾಸದಲ್ಲಿ ಮೂರು ನಾಲ್ಕು ಅಂತಸ್ತು ಮನೆಗಳನ್ನು ಕಟ್ಟಿಕೊಂಡು ಜೀವನ ಮಾಡುತ್ತಿರುವುದನ್ನು ನೋಡಿ, ಹಳ್ಳಿಯಲ್ಲಿ ವಾಸ ಮಾಡುವುದಕ್ಕೆ ಈ ದಿವಸ ಯಾರಿಗೂ ಮನಸ್ಸಿಲ್ಲ. ಆದರೆ ಈ ದಿವಸ ಈ ಬೆಂಗಳೂರಿನಲ್ಲಿ ಈ ನಿವೇಶನದ ದರಗಳನ್ನು ಪೂರಾ ಹೆಚ್ಚಿಸಿದ್ದಾರೆ. ಈ ಹಿಂದೆ 1925ರಲ್ಲಿ ಈ ಬೆಂಗಳೂರು ನಗರದಲ್ಲಿ ಅನೇಕ ಬಡಾವಣೆಗಳಲ್ಲಿ ಜನರು ಯಾರೂ ಈ ನಿವೇಶನಗಳನ್ನು ಕೇಳತಕ್ಕವರೇ ಇರಲಿಲ್ಲ. ಅನೇಕ ಬಡಾವಣೆಗಳಲ್ಲಿ ಪಿಶಾಚಿಗಳೂ ಕೂಡ ವಾಸಿಸುವುದಕ್ಕೆ ಇಷ್ಟಪಡುತ್ತಿರಲಿಲ್ಲ. ಆಗ ಈ ನಿವೇಶನಗಳ ಬೆಲೆಗಳೆಲ್ಲಾ ತೀರಾ ಕಡಮೆಯಾಗಿದ್ದವು. ಈ ದಿವಸ ಇವುಗಳ ಬೆಲೆ ಏನಾಗಿದೆ? ಹಿಂದೆ ಚದರಗಜಕ್ಕೆ 3-4 ಆಣೆ ಇದ್ದದ್ದು ಈ ದಿವಸ 30-40 ರೂಪಾಯಿಗಳಾಗಿದೆ.

ಉಪಾಧ್ಯಕ್ಷರು.—ಆ ವಿಚಾರಗಳಿಗೂ ಈ ಮಸೂದೆಗೂ ಏನು ಸಂಬಂಧವಿದೆ ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಸಂಬಂಧವಿದೆ. ಆದುದರಿಂದಲೇ ಹೇಳುತ್ತಿದ್ದೇನೆ. ಈಗ ಬೆಂಗಳೂರು-ಮೈಸೂರು ನಗರಗಳಲ್ಲಿ ಒಬ್ಬೊಬ್ಬರು ನಾಲ್ಕೈದು ಸೈಟುಗಳನ್ನು ಇಟ್ಟುಕೊಂಡಿದ್ದಾರೆ. ಕೇಳಿದರೆ ಚದರಗಜ ಒಂದಕ್ಕೆ 1. -20 ರೂಪಾಯಿಗಳನ್ನು ಹೇಳುತ್ತಿದ್ದಾರೆ. ತಾವೀಗ ಈ ಸೋಷಿಯಲಿಸ್ಟಿಕ್ ಪ್ಯಾಟರನ್ ಸೊಸೈಟಿಯನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿರುವಾಗ ಅದರಲ್ಲಿ ಈ ವಿಚಾರಗಳೆಲ್ಲಾ ಬಂದೇ ಬರುತ್ತವೆ. ಆದುದರಿಂದ ಮಾನ್ಯ ಸಚಿವರು ಈ ಎಲ್ಲಾ ವಿಚಾರಗಳ ಬಗ್ಗೆಯೂ ಬಹಳ ಪ್ರೋಗ್ರೇಸೀವ್ ಐಡಿಯಾಗಳನ್ನು ಇಟ್ಟುಕೊಂಡು ಈ ಕಾನೂನನ್ನು ಜಾಗ್ರತೆ ತರತಕ್ಕದ್ದು ಅತ್ಯಗತ್ಯ ಎಂತ ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ನಾನು ಜಮೀನ್ದಾರನೂ ಅಲ್ಲ, ಆಬ್‌ಸೆಂಟಿ ಲ್ಯಾಂಡ್ ಲಾರ್ಡೂ ಅಲ್ಲ, ಟೆನೆಂಟೂ ಅಲ್ಲ ಮತ್ತು ಮೊಟ್ಟಮೊದಲಿಗೆ ರೈತನೂ ಅಲ್ಲ. ಆದರೆ ನಾನೊಬ್ಬ ಕನ್ಸ್ಯೂಮರು.

ಒಬ್ಬ ಮಾನ್ಯ ಸದಸ್ಯರು.—ಹಾಗಾದರೆ ತಾವು ಒಬ್ಬ ಪ್ಯಾರಾಸೈಟ್‌ಗಳು ಎಂದು ಆಯಿತು.

ಶ್ರೀ ಪಿ. ಆರ್. ರಾಮಯ್ಯ.—ಅಲ್ಲ, ಹಾಗೆ ನಾನು ಒಬ್ಬ ಪ್ಯಾರಾಸೈಟೂ ಸಹ ಅಲ್ಲ.

(ಶ್ರೀ ಪಿ. ಆರ್. ರಾಮಯ್ಯ.)

ಸ್ವಾಮಿ, ಈಗ ಸಭೆಯ ಮುಂದೆ ಬಂದಿರತಕ್ಕಂಥ ಈ ಮಸೂದೆ ಭೂಸುಧಾರಣೆಯ ಒಂದು ಪರಂಪರೆಯಾಗಿ ಬಂದಿರತಕ್ಕಂಥಾಗಿದೆ. ಈ ಭೂಸುಧಾರಣೆ ಎನ್ನತಕ್ಕದ್ದರಲ್ಲಿ ಈ ಟೆನೆನ್ಸಿ ಆಕ್ಟು ಎನ್ನುವುದು ಮೊದಲು ಬಂತು, ಎರಡನೆಯದು ಪರ್ಸನಲ್ ಮತ್ತು ಮಿಸ್ಲೇನಿಯಸ್ ಇನಾಂ ಅಬಾಲಿಷನ್ ಬಿಲ್ಲು ಅನ್ನುವುದು ಬಂತು, ಇನ್ನು ಮೂರನೇಯದು ರಿಲಿಜಿಯಸ್ ಅಂಡ್ ಛಾರಿಟಬಲ್ ಇನಾಂ ಅಬಾಲಿಷನ್ ಬಿಲ್ಲು ಅನ್ನುವುದು ಬಂತು. ಆದರೆ ಇದರಲ್ಲಿ ನಾಲ್ಕನೆಯದು ಒಂದು ಹಂತ ಇದ್ದಿದ್ದರೆ ಚೆನ್ನಾಗಿತ್ತು. ಅದು ಯಾವುದೆಂದರೆ—ಈ ಆಬ್‌ಸೆಂಟಿ ಲ್ಯಾಂಡ್‌ಲಾರ್ಡ್ ಎಂದು ಯಾರಾದರೂ ಇದ್ದರೆ ಅಂಥವರ ಜಮೀನನ್ನು ವಜಾ ಮಾಡುತ್ತೇವೆಂದು ಇನ್ನೊಂದು ಮಸೂದೆಯನ್ನು ತಂದಿದ್ದರೆ ಬಹಳ ಚೆನ್ನಾಗಿತ್ತು. ಈಗಲೂ ನೀವು ಬುದ್ಧಿವಂತರಾಗಿದ್ದರೆ ಜಮೀನ್ದಾರನು ತನ್ನ ಸ್ವಂತ ವ್ಯವಸಾಯಕ್ಕಾಗಿ ಎಷ್ಟು ಜಮೀನನ್ನು ಇಟ್ಟುಕೊಂಡಿದ್ದಾನೋ ಅಷ್ಟನ್ನು ಮಾತ್ರ ಜಮೀನ್ದಾರನಿಗೆ ಬಿಟ್ಟುಕೊಟ್ಟು ಇನ್ನುಳಿದಿದ್ದನ್ನು ಸರಕಾರಕ್ಕೆ ತೆಗದುಕೊಳ್ಳುತ್ತೇವೆಂದು ಹೇಳಿ ಈ ಮಸೂದೆಯನ್ನು ತಂದಿದ್ದರೆ ಆಗ ಇದು ಬಹಳ ಚೆನ್ನಾಗಿರುತ್ತಿತ್ತು. ತಾವು ಈ ಮಸೂದೆಯಲ್ಲಿ ಒಬ್ಬ ವ್ಯವಸಾಯಮಾಡತಕ್ಕಂಥ ಮನುಷ್ಯನಿಗೆ ಮೂರು ಎಕರೆ ತರಿ, ಇಂತಿಷ್ಟು ಎಕರೆ ಖುಷ್ಕಿ ಹಾಗೆ ಎಂದು ಹೇಳಿ ಒಂದು ಸೀಲಿಂಗ್ ಲಿಮಿಟ್‌ನ್ನು ಹಾಕಿ ತಂದಿದ್ದರೆ ಈ ಭೂಸುಧಾರಣೆಯ ಅರ್ಥ ಜನರಿಗೆಲ್ಲಾ ಸುಲಭವಾಗಿ ತಿಳಿಯುತ್ತಿತ್ತು. ಆದರೆ ತಾವು ಈ ಆಬ್‌ಸೆಂಟೀ ಲ್ಯಾಂಡ್‌ಲಾರ್ಡ್ ಮತ್ತು ಈ ಸೀಲಿಂಗ್ ಲಿಮಿಟ್‌ನ ಎರಡು ಮಸೂದೆಗಳನ್ನು ತರದೆ......

Sri Kadidal MANJAPPA.—The ceiling limit deals only with absentee landlords and their tenants.

ಶ್ರೀ ಪಿ. ಆರ್. ರಾಮಯ್ಯ.—ಈ ಮಸೂದೆಯು ಸೆಲೆಕ್ಟ್ ಸಮಿತಿಯ ಮುಂದೆ ಹೋದಾಗ ಇದರಲ್ಲಿರತಕ್ಕಂಥ ಕೆಲವು ಸಾಮಾನ್ಯ ಲೋಪದೋಷಗಳನ್ನು ಅವರು ತಿದ್ದುಪಡಿ ಮಾಡಬಹುದು. ಆದರೆ ಈಗ ನಾವು ಕೆಲವು ಮೂಲ ತತ್ತ್ವಗಳನ್ನು ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ನಾವೆಲ್ಲರೂ ಈ ಭೂಸುಧಾರಣೆಯನ್ನು ನಮ್ಮ ದೇಶದಲ್ಲಿ ಜಾರಿಗೆ ತರಬೇಕೆಂಬ ಉದ್ದೇಶದಿಂದ ಈಗ ಜಮೀನು ಇಲ್ಲದವರಿಗೆ ಜಮೀನು ದೊರೆಯುವ ಹಾಗೆ ಮಾಡಲು ಈ ಕಾನೂನುಗಳನ್ನೆಲ್ಲಾ ತರುತ್ತಿದ್ದೇವೆ. ಹೀಗೆ ಮಾಡುವುದು ಬಹಳ ಒಳ್ಳೆಯದು. ಈ ದಿವಸ ನಮ್ಮ ದೇಶದಲ್ಲಿ ಭೂ ವ್ಯವಸಾಯದಲ್ಲಿ ನಿರತರಾಗಿರತಕ್ಕ ಜನಗಳಲ್ಲಿ ಮೂರು ತರಹೆಯ ಜನಗಳಿದ್ದಾರೆ. ಸ್ವಂತ ಜಮೀನ್ ಮಾಲೀಕರಾಗಿ ತಾವೇ ಸ್ವಂತ ವ್ಯವಸಾಯ ಮಾಡಿಕೊಂಡು ಹೋಗತಕ್ಕಂಥವರ ಗುಂಪು ಒಂದು ; ತಾವು ಜಮೀನಿನ ಮಾಲೀಕರಾಗಿದ್ದರೂ ಸ್ವತಃ ವ್ಯವಸಾಯ ಮಾಡದೆ ಕೂಲಿಯವರನ್ನಿಟ್ಟುಕೊಂಡು ವ್ಯವಸಾಯ ಮಾಡಿಸಿಕೊಂಡು ಹೋಗತಕ್ಕವರು ಎರಡನೆಯ ಗುಂಪು; ಇನ್ನು ಮೂರನೆಯವರು ತಮಗೆ ಯಾವ ಸ್ವಂತ ಜಮೀನುಗಳೂ ಇಲ್ಲದೆ ಗುತ್ತಿಗೆಗೆ ಅಥವಾ ವಾರಕ್ಕೋ ಅನ್ಯರ ಭೂಮಿಯನ್ನು ಪಡೆದುಕೊಂಡು ವ್ಯವಸಾಯದಲ್ಲಿ ನಿರತರಾಗಿರತಕ್ಕವರ ಗುಂಪು ಒಂದು. ಇದರ ಮೇಲೆ ಇನ್ನೂ ಒಂದು ಗುಂಪಿದೆ—ಅವರು ಯಾವ ಈ ಗುತ್ತಿಗೆಯನ್ನೂ ಮಾಡುವುದಿಲ್ಲ ; ವಾರಕ್ಕೂ ಜಮೀನು ಮಾಡುವುದಿಲ್ಲ. ಕೇವಲ ದಿನಗೂಲಿಯ ಮೇಲೆ ಕೆಲಸಮಾಡಿಕೊಂಡು ಹೋಗತಕ್ಕಂಥ ಅಗ್ರಿಕಲ್ಚರಲ್ ಲೇಬರರ್ಸ್ ಕ್ಲಾಸ್ ಒಂದು ಇದೆ. ಈ ನಾಲ್ಕು ಗುಂಪಿನಲ್ಲಿ ಈ ಅಗ್ರಿಕಲ್ಚರಲ್ ಲೇಬರ್ ಕ್ಲಾಸೇ ಬಹಳ ಜಾಸ್ತಿಯಾಗಿ ಇರತಕ್ಕದ್ದು ಎಂದು ಕಾಣಿಸುತ್ತದೆ. ಸುಮಾರು 6 ಲಕ್ಷ ಜನರು ಬರಿ ಈ ಅಗ್ರಿಕಲ್ಚರಲ್ ಲೇಬರರ್ಸ್ ಆಗಿ ಜೀವನ ಮಾಡುತ್ತಿದ್ದಾರೆಂದು ಕಾಣುತ್ತದೆ. ಇನ್ನು ಲ್ಯಾಂಡ್ ಹೋಲ್ಡರ್ಸ್ ಆಗಿರತಕ್ಕವರ ಸಂಖ್ಯೆ 12 ಲಕ್ಷ ಎಂದು ಕೊಟ್ಟಿದ್ದಾರೆ. ಇದರಲ್ಲಿ ಈ ವಾರ ಅಥವಾ ಗುತ್ತಿಗೆ ವ್ಯವಸಾಯ ಮಾಡತಕ್ಕಂಥ ಜನರು 15 ಸಾವಿರ ಜನರಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಈ ಗುತ್ತಿಗೆದಾರರ ಸಂಖ್ಯೆಯೆಷ್ಟಿದೆ, ಸ್ವಂತ ಸಾಗುವಳಿದಾರರ ಸಂಖ್ಯೆಯೆಷ್ಟಿದೆ ಅನ್ನುವ ವಿವರಗಳನ್ನೆಲ್ಲಾ ನಮಗೆ ಒದಗಿಸಿಕೊಟ್ಟಿದ್ದರೆ ಚೆನ್ನಾಗಿತ್ತು.........

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆಲ್ಲಾ ಒದಗಿಸಿ ಕೊಟ್ಟಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯ.—ಹಾಗಾದರೆ ಇವರಲ್ಲಿರ ಸಂಖ್ಯೆ ಎಷ್ಟಿರಬಹುದು ?

ಶ್ರೀ ಡಿ. ದೇವರಾಜ ಅರಸ್.—ಈ ವಾರ ಅಥವಾ ಗುತ್ತಿಗೆದಾರರ ಸಂಸಾರಗಳೇ ಸುಮಾರು 75 ಸಾವಿರದ ಮೇಲಿರಬಹುದು.

Sri H. M. CHANNBASAPPA.—The correct figure is 4,32,415 people or about 75,000 families.

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, ಈ ಲೆಕ್ಕಗಳನ್ನೆಲ್ಲಾ ಸರಿಯಾಗಿ ತಪಶೀಲ್ವಾರಾಗಿ ಪ್ರಕಟಿಸಿ ನಮ್ಮ ಸದಸ್ಯರಿಗೆಲ್ಲಾ ಹಂಚಿದರೆ ಮತ್ತು ಇಡೀ ದೇಶಕ್ಕೆ ತಿಳಿಯುವ ಹಾಗೆ ಮಾಡಲು ಕೆಲವು ಪತ್ರಿಕೆಗಳಲ್ಲಿ ಹಾಕಿಸಿದರೆ ಈ ಸಮಸ್ಯೆಯಮೇಲೆ ಬೆಳಕು ಹಾಕಿದ ಹಾಗಾಗುತ್ತದೆ. ಮುಖ್ಯವಾಗಿ ಈ ಸಮಸ್ಯೆಯನ್ನು ನಾವು ಪರಿಹಾರ ಮಾಡಬೇಕಾದರೆ ಭೂಸುಧಾರಣೆಯಾಗಬೇಕು. ಇದಾಗಬೇಕಾದರೆ ಎರಡು ಮೂರು ವಿಷಯಗಳನ್ನು ಚೆನ್ನಾಗಿ ಆಲೋಚನೆ ಮಾಡಬೇಕು. ಈ ಕಾನೂನು ಈಗ ತಂದಿರತಕ್ಕ ರೀತಿಯಲ್ಲಿ ಇದ್ದರೆ land holdersಗೆ ಕಷ್ಟವಾಗುವ ಹಾಗೆ ಮತ್ತು ತೊಂದರೆಯಾಗುವ ಹಾಗೆ ಕಾಣುತ್ತದೆ. ಟೆನೆಂಟ್‌ಗಳಿಗೆ ಅಷ್ಟು ಉಪಯೋಗವಾಗುವ ಹಾಗೆ ಕಾಣಿಸುತ್ತಿಲ್ಲ. ಆದ್ದರಿಂದ ಈ ಮಸೂದೆಯನ್ನು ತರಬೇಕಾದರೆ ನಾನು ಹೇಳಿದ ಹಾಗೆ ಮಧ್ಯೆ ಎರಡು ವಿಷಯಗಳನ್ನು ಎಂದರೆ, abolition of absentee landlordism ಮತ್ತು ceiling of land limit ಅಂದರೆ,—ಒಬ್ಬ ಮನುಷ್ಯ ಎಷ್ಟು ಎಕರೆ ಜಮೀನು ಹೊಂದಿರಬೇಕು ಎನ್ನತಕ್ಕದ್ದು. ಇವುಗಳನ್ನು ಅಡಕವಾಡಿ ತರಬೇಕಾಗಿತ್ತು—ನಮ್ಮ ಇಂಡಿಯಾ ಸರ್ಕಾರದವರು ನೇಮಿಸಿರುವ Planning Commissionನವರು ceiling limit ವಿಚಾರ ಆಲೋಚನೆ ಮಾಡುತ್ತಿದ್ದಾರೆ. ಆದ್ದರಿಂದ ಈ ಮಸೂದೆಯನ್ನು ತರಬೇಕಾದರೆ comprehensive ಆಗಿ ಎಲ್ಲಾ ವಿಷಯಗಳನ್ನೂ ಅದರಲ್ಲಿ ಅಡಕವಾಡಿ ತಂದಿದ್ದರೆ ಚೆನ್ನಾಗಿತ್ತು. ಅದು ಬಿಟ್ಟು piecemeal ಆಗಿ ಒಂದೊಂದನ್ನೇ ತಂದರೆ ಅದರಿಂದ ಹೆಚ್ಚು ಉಪಯೋಗವಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ.

ಈ Tenancy Act ಜಾರಿಗೆ ಕೊಟ್ಟದ್ದು 1952 ರಲ್ಲಿ. ಅದರಲ್ಲಿ 5 ವರ್ಷಗಳವರೆಗೆ tenantಗೆ ಅವಕಾಶ ಕೊಟ್ಟಿದ್ದಿರಿ. ಈಗ ಆ ಅವಧಿಯನ್ನು 10 ವರ್ಷ ಮಾಡಿದ್ದೀರಿ. ಇದನ್ನು ಜಾರಿಗೆ ಕೊಡುವಾಗ ಕೆಲವು ತಾಲ್ಲೂಕುಗಳಲ್ಲಿ ಮಾತ್ರ ಕೊಟ್ಟಿದ್ದೀರಿ. ಇಡೀ ದೇಶದಲ್ಲಿ ಜಾರಿಗೆ ತಂದಿಲ್ಲ. ಈ Tenancy Act ಸಮರ್ಪಕವಾಗಿ ಕೆಲಸ ಮಾಡುತ್ತಿ

ದೆಯೋ, ಇದರಿಂದ ಏನಾದರೂ ತೊಂದರೆಯಾಗಿದೆಯೋ, ಎಂದು ಕೆಲವು ವರ್ಷಗಳಕಾಲವಾದರೂ ನೋಡದೆ, ಇದರ ಸಾಧಕಬಾಧಕಗಳೇನೆಂಬುದನ್ನು ತಿಳಿಯದೆ, ಮತ್ತು ಈ ವಿಚಾರದಲ್ಲಿ ಒಂದು ಸಮಿತಿಯನ್ನಾದರೂ ನೇಮಿಸಿ ಅವರ ಅಭಿಪ್ರಾಯವನ್ನೂ ಸಹ ತೆಗೆದು ಕೊಳ್ಳದೆ, 5 ವರ್ಷಗಳು ಪೂರೈಸುವುದಕ್ಕೆ ಮುಂಚೆಯೇ ಈ ತಿದ್ದುಪಡಿ ಕಾನೂನನ್ನು ಆತುರವಾಗಿ ತಂದಿರುವುದ ರಲ್ಲಿ ಏನಾಗಿದೆ ಎಂದರೆ ನಾವು ಎಷ್ಟು ತಿನ್ನಬಹುದೋ ಅದಕ್ಕಿಂತ ಹೆಚ್ಚಾಗಿ ತುರುಕಿಕೊಳ್ಳುತ್ತಿದ್ದೇವೆಂದು ಕಾಣುತ್ತಿದೆ. ಹೀಗೆ ಮಾಡದೇಬೇಕು, ಸುಧಾರಣೆ ಯಾಗಲೇಬೇಕು ಎಂದರೆ ಆಗ ಎಲ್ಲಾ ವಿಷಯಗಳನ್ನೂ ಒಳಗೊಂಡಿರತಕ್ಕ ಒಂದು comprehensive ಆಗಿರ ತಕ್ಕ ಮುಸೂದೆಯನ್ನು ತಂದಿದ್ದರೆ ಚೆನ್ನಾಗಿತ್ತು.

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ಅಭಿಪ್ರಾಯ ದಲ್ಲಿ Tenancy Bill, ceiling limit, abolition of intermediaries ಈ ರೀತಿ ಎಲ್ಲವನ್ನೂ ಒಟ್ಟಿಗೆ ತರಬೇಕಾಗಿತ್ತು ಎಂದೇ?

ಶ್ರೀ ಪಿ. ಆರ್. ರಾಮಯ್ಯ.—ಹಾಗೆ ಹೇಳಲಿಲ್ಲ. ಈಗ ಎರಡನ್ನು ತಂದಿದ್ದೀರಿ. ಇನ್ನು Absentee Landlordism ಮತ್ತು ceiling limit ಇವೆರಡನ್ನೂ ತರಬೇಕಾಗಿತ್ತು.

ಶ್ರೀ ಕಡಿದಾಳ್ ಮಂಜಪ್ಪ.—Absentee Landlordism ಗೆ ಸಂಬಂಧಪಟ್ಟ ವಿಷಯ ಈ ಬಿಲ್ಲಿನಲ್ಲಿಯೇ ಇದೆ.

ಶ್ರೀ ಎಸ್. ಗೋಪಾಲಗೌಡ.—ಬಹುಶಃ ಶ್ರೀ ರಾಮಯ್ಯನವರು ಹೇಳುವುದು ಹಿಂದೆ ತಿರುವಾಂಕೂರು ಕೊಚಿನ್‌ನಲ್ಲಿ ಜಾರಿಗೆ ತಂದ ಹಾಗೆ ಒಟ್ಟಿಗೆ ಒಂದೇ ಬಿಲ್ಲಿನಲ್ಲಿ ತರದೆ, ceiling limitಗೆ ಒಂದು, absentee landlordismಗೇ ಒಂದು, tenancy ವಿಷಯಕ್ಕೇ ಒಂದು ಹೀಗೆ ತರುವುದು ಒಳ್ಳೆಯದೆಂದು ಪ್ರಾಯಶಃ ಅವರ ಅಭಿಪ್ರಾಯ ವಿರಬಹುದು.

ಶ್ರೀ ಪಿ. ಆರ್. ರಾಮಯ್ಯ.—Comprehensive Act ತರುವುದು ಯುಕ್ತವಾದದ್ದು ಎನ್ನುವ ಅಭಿಪ್ರಾಯ ದಲ್ಲಿ ಹೇಳುತ್ತಿದ್ದೇನೆ. ನಮ್ಮ ಮಾನ್ಯ ಮಂತ್ರಿಗಳು ಈ Tenancy Amendment Billನಲ್ಲೇ Absentee Landlordism ವಿಷಯ ಅಡಕವಾಗಿದೆ ಎಂದು ಹೇಳಿದರು. ಆದರೆ ಅದರಲ್ಲಿ ಈಗ ಹೇಗಿದೆ ಎಂದರೆ tenancy ಗೆ......................

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಒಂದು ವಿಷಯವನ್ನು ತಿಳಿಸಬೇಕು. Ceiling limit ವಿಚಾರ, Abs ntee Landlordism abolition ವಿಚಾರ ಇವೆಲ್ಲವನ್ನೂ ಒಂದೇ ಬಿಲ್ಲಿನಲ್ಲಿ ತರಬೇಕು ಎಂದು ಹೇಳಿದರು. ಅವರ ಸೂಚನೆಗಳೇನು, ಅವನ್ನು ಯಾವ ರೀತಿ ತರಬೇಕಾಗಿತ್ತು ಎನ್ನುವ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಹೇಳಿದರೆ ಅನುಕೂಲವಾಗು ತ್ತದೆ.

Sri P. R. RAMAIYA.—"Hereafter anybody who possesses the land should cultivate the land for himself", it is a very simple thing.

ಇದನ್ನು ಒಂದು ರೀತಿಯಾಗಿ ತಂದುಬಿಟ್ಟರೆ ಅದು ಚೆನ್ನಾಗಿರುತ್ತದೆ. ಯಾಕೆ ಹೇಳುತ್ತೇನೆಂದರೆ ಇದ ರೊಳಗೆ ತಾವು ಏನುಮಾಡಿದ್ದೀರಿ ಅದನ್ನು circumvent ಮಾಡಿಕೊಂಡು, ಕೂಲಿಗಳನ್ನು ಇಟ್ಟುಕೊಂಡು, I can possess 200 acres of land, but yet I can circumvent this Tenancy law by engaging labourers instead of calling him a tenant I will pay him money and get the lands cultivated. How can you prevent this? The object of the legislation, I think, is to see that a man does not possess more than a certain number of acres of land and that the man who works on the land should get the ownership. But, here there is scope for circumventing"

ಶ್ರೀ ಕಡಿದಾಳ್ ಮಂಜಪ್ಪ.—ಪ್ರೆಸ್ ಯಾರಾದರೂ ಇಟ್ಟುಕೊಂಡು ನಡೆಸುತ್ತಿದ್ದರೆ ಕೂಲಿಗಾರರನ್ನೇ ಇಟ್ಟು ಕೊಳ್ಳಬಾರದು. ಪ್ರೆಸ್ ಇಟ್ಟಿರುವವರೇ ನಡೆಸಬೇಕು!

ಶ್ರೀ ಪಿ. ಆರ್. ರಾಮಯ್ಯ.—ಮುಂದೆ ಅದನ್ನೂ ಮಾಡಬೇಕಾಗುತ್ತದೆ. ಅವರೂ ನೋಡಿಕೊಳ್ಳಬೇಕು. ಮಹಾತ್ಮ ಗಾಂಧಿಯವರು ಹೇಳಿರುವ ತತ್ವವನ್ನು ನಾವು ಜಾರಿಗೆ ತರಬೇಕು. ನಮ್ಮ ಜೀವಮಾನದಲ್ಲಿ ಆ ತತ್ವವನ್ನು ಜಾರಿಗೆ ತರಬೇಕು. ದಿನಕ್ಕೆ 8 ಗಂಟೆ ಕಾಲ ಪ್ರತಿಯೊಬ್ಬ ಮನುಷ್ಯನೂ ಕೆಲಸ ಮಾಡಬೇಕು. ತನ್ನ ಆಹಾರವನ್ನು ತಾನು ಸಂಪಾದಿಸಬೇಕು. ಇದೇ ಮಹಾತ್ಮ ಗಾಂಧಿಯವರ ತತ್ವ. ಇದನ್ನು ನಾವು ಹೇಗೆ ಬೇಕಾದರೂ ಕರೆಯಬಹುದು, Communism, socialism, ಸರ್ವೋದಯ, 8 hours' labour, ಈ ರೀತಿಯಾಗಿ ಯಾವ ಹೆಸರಿನಿಂದ ಬೇಕಾದರೂ ಕರೆಯಬಹುದು. ಆದರೆ he should be entitled for bread. ತಾವು ಆ ರೀತಿ ಮಾಡಿದರೆ ನಾನು ಒಂದು ನೋಬೆಲ್ ಬಹುಮಾನ ಕೊಡುತ್ತೇನೆ.

ನಮಗೆ ಒಂದು ಆಸೆ ಇದೆ. ನಮ್ಮ ಜೀವಮಾನದಲ್ಲಿ ಆ ತತ್ವವನ್ನು ನಾವು ಜಾರಿಗೆ ತರಬೇಕಾಗಿದೆ, ಎಂದರೆ ಉಳತಕ್ಕವನಿಗೆ, ದುಡಿಯತಕ್ಕವನಿಗೆ ಭೂಮಿಯನ್ನು ಕೊಡಬೇಕು. ಈ ತತ್ವವನ್ನು ಜಾರಿಗೆ ತರಬೇಕಾದರೆ ನಾವು ಮನಸ್ಸನ್ನು ಸ್ವಲ್ಪ ಗಟ್ಟಿಮಾಡಿಕೊಂಡು ಒಂದೇ ಸಮಯದಲ್ಲಿ ಎಲ್ಲವನ್ನೂ ತರಬೇಕು. ತಾವು ಆ ರೀತಿ ಯಾಗಿ ತರದೆ ಅರ್ಧ ಮನಸ್ಸಿನಿಂದ ತರುವುದರಿಂದ ಏನೂ ಸಾರ್ಥಕವಾಗುವುದಿಲ್ಲ. Radical ಆಗಿ ಇರಬೇಕು. ಯಾರೂ ಕೂಡ circumvent ಮಾಡಿ, agricultural labour ಇಟ್ಟುಕೊಂಡು ಸಾಗುವಳಿ ಮಾಡಬಾರದು. ಆ ಒಂದು ನಿರ್ಬಂಧ ಮಾಡಬೇಕು. ನನಗೆ ವ್ಯವಸಾಯ ಗೊತ್ತಿಲ್ಲ. ಆದರೆ ಅದರ ತತ್ವ ಗೊತ್ತಿದೆ. ತಾವು ಹೇಳುವುದರಲ್ಲಿ ಉಳುವವನಿಗೆ ಭೂಮಿ ಎಂದು ಇದೆ. ಭೂಮಿಯನ್ನು ಉಳುವವನು ಒಡೆಯನಾಗಬೇಕು, ಉಳುವವನು ಬರಿ ಕೂಲಿ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ. ಅದರ ಅರ್ಥವೇನೆಂದರೆ ಯಾವಾತನು ಉಳುತ್ತಾನೆಯೋ ಅವನಿಗೆ 2 ಎಕರೆ, 5 ಎಕರೆ ಹೀಗೆ ಕೊಡಿ. ಅವನು ಸ್ವಂತವಾಗಿ ಸಾಗುವಳಿ ಮಾಡಲಿ. ಹಾಗೆ ಮಾಡಿದರೆ ನೀವು ನಿಜವಾದ ಸುಧಾರಣೆ ತಂದಹಾಗಾಗುತ್ತದೆ. ಅದಿಲ್ಲದೆ ಹೋದರೆ ಏನೋ ಒಂದು ರೀತಿಯೊಳಗೆ ನಾವೂ ಮಾಡುತ್ತಿದ್ದೇವೆ ಎಂದಹಾಗಾಗುತ್ತದೆ.

ಶ್ರೀ ವಿ ವೆಂಕಟಪ್ಪ (ಚನ್ನಪಟ್ಟಣ).—ಯಾವಾತನು ಭೂಮಿಯನ್ನು ವ್ಯವಸಾಯ ಮಾಡುತ್ತಾನೆಯೋ ಅವ ನಿಗೇ ಸ್ವತ್ತು ಸೇರಬೇಕು. ಎಲ್ಲಾ ವಿಚಾರಗಳಲ್ಲೂ ಹಾಗೆಯೇ......

Sri P. R. RAMAIYA.—I want the socialistic pattern to come to-day in every walk of life ಈ ಸುಧಾರಣೆಗಳಲ್ಲಿ ಆ ತತ್ವ ಯಾವುದೂ ಇಲ್ಲ. ಬೇಕಾದಷ್ಟು ಜನ agricultural labourers ಇಟ್ಟುಕೊಂಡು ಅವರ

(SRI P. R. RAMAIYA)

ಕೈಯಲ್ಲಿ ದುಡಿಸಿದರೆ ಆಗ Tenancy Act ಅದಕ್ಕೆ ಅನ್ವಯಿಸುವುದಿಲ್ಲ. ಕೂಲಿಯವರನ್ನು ಇಟ್ಟುಕೊಂಡು ಕೆಲಸ ಮಾಡಿಸಿ ತಾವು ಸಂಪಾದನೆ ಮಾಡಿಕೊಳ್ಳುತ್ತಾರೆ. ಈ ರೀತಿ ಮಾಡುತ್ತಿರುವ ನಿದರ್ಶನಗಳು ಅನೇಕವಿವೆ. ಆದ್ದರಿಂದ ಒಂದು ceiling limit ಮಾಡಬೇಕು. ಇಲ್ಲದೆ ಇದ್ದರೆ putting the cart before the horse ಎಂದಾಗುತ್ತದೆ.

Indian Planning Commissionನವರು ಈ ceiling limit ವಿಷಯದಲ್ಲಿ ಯೋಚನೆ ಮಾಡುತ್ತಿದ್ದಾರೆ. ಅದನ್ನು ಮಾಡಿದರೆ ಆಗ ಭೂಮಿಯನ್ನು ಹೊಂದಿರುವವನೇ ವ್ಯವಸಾಯ ಮಾಡಬೇಕಾಗುತ್ತದೆ. ಈ ರೀತಿ ಮಾಡುವುದರಿಂದ socialistic pattern ನಿಜವಾಗಿ ಆಗುತ್ತದೆ. ಈ ವಿಚಾರವಾಗಿ ಕಾನೂನು ಬೇರೆ ತಂದರೆ ಅದಕ್ಕೆ ಈ ಸಭೆಯ ಒಪ್ಪಿಗೆ ದೊರೆಯುವುದು ಕಷ್ಟವೆಂದು ನನ್ನ ಅಭಿಪ್ರಾಯ, ಏಕೆಂದರೆ ಅದು ಅರ್ಧ ಆರ್ಧವಾಗುತ್ತದೆ.

ಮತ್ತೆ ಇನ್ನೂ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. Statement of Objects and Reasons ನಲ್ಲಿ ತಾವು

"conferring greater security of tenure on cultivating tenants and the conferring of the right to acquire ownership of the lands cultivated by them."

ಈ ತತ್ವವನ್ನು ನಾನು ಒಪ್ಪುತ್ತೇನೆ. ಅದು ಸಾಧುವಾಗಿದೆ. ಆದರೆ ಇದನ್ನು ತಾವು ಜಾರಿಗೆ ತರುವುದರೊಳಗೆ landlordsನಿಂದ ಕೆಲವು ತೊಂದರೆಗಳು tenantಗೆ ಆಗುತ್ತವೆ. ಆದ್ದರಿಂದ ಏನಾದರೂ compensation ಕೊಟ್ಟು ಜಮೀನುಗಳನ್ನೆಲ್ಲಾ ಸರ್ಕಾರದವರು ತೆಗೆದುಕೊಂಡು ರೈತನಿಗೆ ಪುನಃ ಹಂಚಿದರೆ it would be a sort of free distribution of wealth.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳಿದ್ದನ್ನು ಸುಲಭವಾಗಿ ಮಾಡಬಹುದು.

ಶ್ರೀ ಪಿ. ಆರ್. ರಾಮಯ್ಯ.—ಇಲ್ಲಿ ಅದನ್ನು ಜಾರಿಗೆ ತರಬೇಕು. ಒಟ್ಟಿನಲ್ಲಿ legislation ಹೇಗಿರಬೇಕೆಂದರೆ, —I imagine the picture like this:— ಒಬ್ಬ ಮನುಷ್ಯನಿಗೆ ಜೀವನಕ್ಕೆ ಎಷ್ಟು ಜಮೀನು ಬೇಕೋ ಅದಕ್ಕಿಂತ ಜಾಸ್ತಿ ಕೊಡದು. More than that, the Government must take over the land by giving him some compensation and then distribute that land to the raiyats by fixing some rate. But do not leave the things in suspense. 5 ವರ್ಷ, 10 ವರ್ಷ ಹೀಗೆ ನಾವು suspenseನಲ್ಲಿಟ್ಟುಕೊಟ್ಟಲ್ಲಿ land value ಕಡಿಮೆಯಾಗುತ್ತದೆ.

11-30 A. M.

ನನ್ನ ಹತ್ತಿರ 20 ಎಕರೆಗಳಿದ್ದು ಅದರಲ್ಲಿ 15 ಎಕರೆಗಳನ್ನು ಬೇರೆಯವನಿಗೆ ಸಾಗುವಳಿಗೆ ಕೊಟ್ಟಿರಬಹುದು. ತಾವೀಗ ಮಾಡತಕ್ಕ ಕಾನೂನಿಂದ ಆ 15 ಎಕರೆಗಳನ್ನು ಆ ಟೆನೆಂಟಿಗೆ 10 ವರ್ಷದಲ್ಲಿ ಖರೀದಿಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಅದರ ದರ ಎಷ್ಟೆಂಬುದನ್ನು ಅಸಿಸ್ಟೆಂಟ್ ಕಮೀಷನರು ನಿಗದಿಮಾಡುತ್ತಾರೆಂದು ಹೇಳಿದ್ದೀರಿ. ಆದರೆ ಆ ಹಣವನ್ನು ಒಂದೇ ಸಲ ಕೊಡುವ ಏರ್ಪಾಡಿಲ್ಲ. ಹತ್ತು ವರ್ಷದಲ್ಲಿ ಕೊಡಬಹುದು. ಒಂದೇ ವರ್ಷದಲ್ಲಿ ಅವನಿಗೆ ಕೊಡತಕ್ಕ ಶಕ್ತಿಯಿಲ್ಲವೆಂಬುದೇನೋ ನಿಜವಿರಬಹುದು. ಆದರೂ ಈ ರೀತಿ landlordಗೆ ಕೊಡಬೇಕಾದ್ದನ್ನು suspenseನಲ್ಲಿಡದೆ, ಇನಾಂ ರದ್ದಿಯಾತಿ ಬಿಲ್ಲಿನಲ್ಲಿ ಯಾವ ರೀತಿ ಮಾಡಿದ್ದಿರೋ ಆ ರೀತಿ compensation ಕೊಟ್ಟು, ಆ ಜಮೀನನ್ನು ಟೆನೆಂಟಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಇದು ನ್ಯಾಯವೂ ಆಗಿರುತ್ತದೆ, ಸುಗಮವೂ ಆಗಿರುತ್ತದೆ. ಸರ್ಕಾರದವರು ಈ ಜವಾಬ್ದಾರಿಯನ್ನು ವಹಿಸಿ, ಮಾಡಬೇಕಾದ್ದು ಅವರ ಕರ್ತವ್ಯ. ಏಕೆಂದರೆ, ತಾವು Inams Abolition ಬಿಲ್ಲಿನಲ್ಲಿ ಕಂಪೆನ್‌ಸೇಷನ್ ಕೊಡಬೇಕೆಂಬ ಒಂದು ತತ್ವವನ್ನು observe ಮಾಡಿದ್ದೀರಿ, ನಿಮ್ಮ ಬಿಲ್ಲಿನಲ್ಲಿ ಹೇಳಿರುವಂತೆ ಎಷ್ಟು ಎಕರೆಗಳಿರಬೇಕೋ ಅದಕ್ಕಿಂತ ಹೆಚ್ಚಿಗೆ ಇರುವವನಿಂದ ಜಮೀನು ತೆಗೆದುಕೊಂಡು ಆತನಿಗೆ ಕಂಪೆನ್‌ಸೇಷನ್ ಕೊಡಿ.

ಒಬ್ಬ ಸದಸ್ಯರು.—ಕೊಡುತ್ತಾರಲ್ಲಾ!

ಶ್ರೀ ಪಿ. ಆರ್. ರಾಮಯ್ಯ.—ಯಾರು ಕೊಡುತ್ತಾರೆ? ರೈತರು ಹತ್ತು ವರ್ಷದಲ್ಲಿ ಕೊಡುತ್ತಾರೆ! ಅದುವರೆಗೆ ಜಮೀನ್ದಾರ ಏನು ಮಾಡಬೇಕು? ಅವನು ಆ ಜಮೀನನ್ನು ಇನ್ನೊಬ್ಬನಿಗೆ ಕೊಡುವ ಹಾಗೂ ಇರುವುದಿಲ್ಲ. ಆ ಟೆನೆಂಟಿಗೇ ಕೊಡಬೇಕು. ಹೀಗಾಗಿ land value ಕೂಡ ಕಡಮೆಯಾಗುತ್ತದೆ. ಟೆನೆಂಟು ಹತ್ತು ವರ್ಷದಲ್ಲಿ ಕೊಡಬೇಕೆಂದು ಗೊತ್ತುಮಾಡಿದ್ದೀರಿ. ಅವನು ಒಂಭತ್ತು ವರ್ಷದವರೆಗೂ ಸುಮ್ಮನೆಯಿದ್ದು ಹತ್ತನೆಯ ವರ್ಷದಲ್ಲಿ ಕೊಡದೆಯಿದ್ದರೆ ಏನು ಮಾಡುವುದು! ಇವೆಲ್ಲಾ ಜಮೀನ್ದಾರನಿಗೆ ಅನ್ಯಾಯಮಾಡಿದಂತಾಗುವುದಿಲ್ಲವೇ! ಆದ್ದರಿಂದ ಯಾವುದಾದರೂ ಸುಲಭಮಾರ್ಗದಲ್ಲಿ landlordಗೆ ಹಣ ಬರುವಂತೆ ಸೆಲೆಕ್ಟ್ ಕಮಿಟಿಯವರು ಯೋಚನೆಮಾಡಬೇಕು. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರೋ ಅಥವಾ ಬೇರೆ ಯಾವುದಾದರೂ ಸಂಸ್ಥೆಯವರೋ ರೈತನಾದವನಿಗೆ ಹಣ ಕೊಟ್ಟು ಜಮೀನ್ದಾರನಿಗೆ ಹಣ ಕೊಡಿಸುವಂತೆ ಮಾಡಬೇಕು. The land may be mortgaged in the Land Mortgage Bank. This is a point which deserves the consideration of the Select Committee. They should see that the landlord gets the amount due to him immediately. ಇದೊಂದು ಮುಖ್ಯವಾದ ವಿಷಯ. ಸೆಲೆಕ್ಟ್ ಕಮಿಟಿಯವರು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಆಮೇಲೆ, ಈ ಬಿಲ್ಲಿನ 39ನೆಯ ಪುಟದಲ್ಲಿ (2)ನೆಯ ಅಧ್ಯಾಯದಲ್ಲಿ 31 (ಬಿ)ಯ 2ಎ (8)ನಲ್ಲಿ ಹೇಳಿದೆ.

31-B (8) Nothing in the foregoing provisions of this section shall apply to the land of a landlord,

(a) Who holds arable land, as an owner, the total extent of which in the whole of India does not exceed the area of a permissible holding;

ಎಂದು ಹೇಳಿದೆ. ಇಲ್ಲಿ (ಎ) ಭಾಗದಲ್ಲಿ

"Holds arable land as an owner the total extent of which in the whole of India does not exceed the area of a permissible holding".

ಎಂದು ಹೇಳಿದ್ದೀರಿ. ಇದು practical ಅಲ್ಲವೆಂದು ಹೇಳಬೇಕಾಗಿದೆ. ತಾವು ಈ ಲೆಕ್ಕಗಳೆಲ್ಲವನ್ನು ಹೇಗೆ ನೋಡುತ್ತೀರಿ? ಈ ಆಕ್ಟು ಒಂದು State Law. ಒಬ್ಬಾತನಿಗೆ ಕನ್ಯಾಕುಮಾರಿಯ ಹತ್ತಿರ ಸ್ವಲ್ಪ ಭೂಮಿಯಿರಬಹುದು. ಅದನ್ನು ಹೇಗೆ ಕಂಡುಹಿಡಿಯುತ್ತೀರಿ? ಆದ್ದರಿಂದ 31 (ಬಿ) 8 (a) ನಲ್ಲಿ.

"Who holds arable land as a owner the total extent of which in the whole of India does not exceed the area of a permissible holding......"

ಎಂಬುದರ ಅಸಮಂಜಸತೆಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. Permissible Holding ಎಂಬುದನ್ನು ಅಸಿಸ್ಟೆಂಟ್ ಕಮಿಷನರು ಇಷ್ಟು ಎಕರೆಗಳು Standard ಎಕರೆಗಳೆಂದು ನಿಗದಿಮಾಡಿಕೊಂಡು ಅದರಮೇಲೆ ಗೊತ್ತುಮಾಡಬೇಕಾಗಿದೆ. ಕನ್ಯಾಕುಮಾರಿ ಹತ್ತಿರ ಒಬ್ಬನಿಗೆ ಭೂಮಿಯಿದ್ದರೆ ಅದನ್ನು ತಿಳಿದು ಇಲ್ಲಿ ಪರ್ಮಿಸಿಬಲ್ ಹೋಲ್ಡಿಂಗ್ ಎಷ್ಟು ಎಂಬುದನ್ನು ಹೇಗೆ ಹೇಳುತ್ತಾರೆ?

ಶ್ರೀ ಆರ್. ಮಾನಿಸ್ವಾಮಯ್ಯ.—ಸ್ವಾಮಿ, ಈಗ ಕಾನೂನುಮಾಡುತ್ತಿರತಕ್ಕದು ಇಲ್ಲಿರತಕ್ಕ ಭೂಮಿಗೆ ಮಾತ್ರವಲ್ಲವೆ? ಹೀಗಿರುವಾಗ ಅವರು ಕನ್ಯಾಕುಮಾರಿಯ ವಿಚಾರ ಮಾತನಾಡುತ್ತಿದ್ದೀರಲ್ಲಾ!

ಶ್ರೀ ಪಿ. ಆರ್. ರಾಮಯ್ಯ.—ತಾವು ಸ್ವಲ್ಪ ಇಲ್ಲಿ ಬರೆದಿರುವುದನ್ನು ಓದಬೇಕು. ಇಲ್ಲಿ ಹೇಳಿದೆ.

"... Holds arable land as a owner, the total extent of which in the whole of India dues not exceed the area of a permissible holding......".

I can understand such a section in the Central Legislation. They have got a hold on lands in the whole of India.

ಕೇಂದ್ರ ಸರ್ಕಾರದವರು ಬೇಕಾದರೆ whole of India ಕ್ಕೆ ಸಂಬಂಧಪಟ್ಟಂತೆ ಯಾವ ಜಮೀನಿನ ವಿಷಯವನ್ನಾದರೂ ಉಲ್ಲೇಖಿಸಬಹುದು. ಮೈಸೂರಿನಲ್ಲಿರತಕ್ಕವರಾದ ನಮಗೆ ಆ ರೀತಿ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳುವ ವಾದವನ್ನು ಒಪ್ಪುವುದಾದರೆ, ಮದ್ರಾಸಿನಲ್ಲಿ ಒಬ್ಬನಿಗೆ 1,000 ಎಕರೆ, ಬೊಂಬಾಯಿನಲ್ಲಿ 500 ಎಕರೆ, ಇಲ್ಲೊಂದು ನೂರು ಎಕರೆಗಳಿದ್ದರೆ, ಮದ್ರಾಸಿನಲ್ಲಿ ಮತ್ತು ಬೊಂಬಾಯಿಗಳಲ್ಲಿರತಕ್ಕದ್ದನ್ನು ಗಣನೆಗೆ ತೆಗೆದುಕೊಳ್ಳಕೂಡದು ಎಂದು ಹೇಳಿದಂತಾಯಿತು. ಅದು ಸರಿಯಲ್ಲ. ಇಲ್ಲಿ ಹೇಳಿರತಕ್ಕದ್ದೇ ಸರಿಯಾಗಿದೆ.

*Sri H. M. CHANNABASAPPA.—I want to know one information, Sir. How do you fix the standard acre with regard to the land that is owned by a person residing in Bombay or Madras or Orissa? How is it possible to fix up the limit?

Sri Kadidal MANJAPPA.—It is quite possible, to get the necessary statistics from the neighbouring States and it is quite possible to fix the standard acre.

Sri H. M. CHANNABASAPPA.—So far as the person who holds land to the extent of 100 acres in Madras or in Bombay is concerned, may I know whether that person will not be subject to the respective laws prevailing in those States?

Sri Kadidal MANJAPPA.—Oh Yes.

Sri H. M. CHANNABASAPPA.—In that case, if the tenancy law is to the effect that ceiling limit should be put on the holding of land by a person residing in Bombay or Madras with reference to the land he holds in Bombay or Madras, then our provision to bring him also under the provision of this Bill would become redundant because he will be subject to the same condition there.

Mr. DEPUTY SPEAKER.—Can the laws made in the State Legislature, be made applicable to the border state also?

Sri Kadidal MANJAPPA.—No. It is not the intention at all. When we calculate the standard acre, we take into account the extent owned by the individual in other States. Supposing, as I submitted earlier, a man owns thousand acres in Madras State and 300 acres here, and all that area is being cultivated by the tenants, it is not reasonable to allow him to enjoy thousand acres there and also 300 acres here for self-cultivating.

Sri H. M. CHANNABASAPPA.—But you cannot cut down the extent owning by him in other States. We have no right to do so.

Sri Kadidal MANJAPPA.—We cannot take away the land, but we can take into account the lands owned by him in other States.

Sri H. M. CHANNABASAPPA.—Supposing a person owns 300 acres in Madras and about 50 acres here; so, his permissible holding will be a certain extent and there will be a protected tenant within the meaning of your legislation here. But there will be no legislation there applying to protected tenant. In that case, has that person got to sell away the land to the protected tenant if that man applies for permission to purchase it? How can you make your law applicable to a piece of land tenant who is living elsewhere?

Sri Kadidal MANJAPPA.—It is not the intention of this measure to confer he rights of protected tenant to some persons who are residing elsewhere. It s not the intention at all.

Sri H. M. CHANNABASAPPA.—But there will be difficulty in the working of your law ?

Sri Kadidal MANJAPPA.—Where is it stated that we are going to confer tenancy rights on the person residing outside the Mysore State ?

Sri H. M. CHANNABASAPPA.—I conceded, you only want to limit the extent because you do not want a person to own thousand acres who is residing either in Bombay or in Madras. Well I concede that it is not a desirable thing to allow such a thing. But I am only trying to draw the attention of the Government to the working difficulty that will be confronted when we put the law into operation.

Mr. DEPUTY SPEAKER.—Sri Channabasappa, the point raised by Sri P. R. Ramiah, I think, involves some complications. That point deserves consideration at the hands of the Select Committee.

Sri H. M. CHANNABASAPPA.—On a point of law, it is better that the Government gets it examined by the Law Department and place a statement of the legal opinion on the floor of this House for the benefit of this House.

Sri Kadidal MANJAPPA.—We have got the point examined by the Law Department. There is nothing unconstitutional or illegal in inserting such a provision in the enactment. If there is any objection, we can examine it once again.

Mr. DEPUTY SPEAKER.—All these things will be gone into by the Select Committee.

Sri H. M. CHANNABASAPPA.—I would like to submit one suggestion. Anyway, it may be presumed that the Government has consulted the Law Department while introducing this Bill; the House will be at a greater advantage if the opinion of the Law Department in respect, the various provisions of this Bill, is placed before this House.

Mr. DEPUTY SPEAKER.—This will be referred to the Select Committee. The Select Committee has got liberty to go into the question.

Sri H. M. CHANNABASAPPA.—The question arises whether this Bill can be referred to the Select Committee or not. If the House decides that there is no necessity to refer the Bill to the Select Committee then it can be dropped. Now, on the merits of this Bill whether it is desirable that it should go to the Select Committee or not, it is on the basis of the report of the Law Department, we can decide whether this can be dropped. Therefore the House will be at an advantageous position to decide if the Hon'ble Minister were to place the report of the Law Department on the merits of this Bill so far as the points which have been raised are concerned.

Sri Kadidal MANJAPPA.—We have consulted the Law Department. It is the Additional Law Secretary who has drafted the Bill. We have taken his opinion.

Sri H. M CHANNABASAPPA.—Then place that opinion before this House.

Sri Kadidal MANJAPPA.-You cannot press me like that.

Mr. DEPUTY SPEAKER.—It is only through the concerned Minister that we can take the opinion but not from the Law Secretary.

***Sri M. LINGANNA** (Nanjangud).—May I at this stage submit, that the point of illegality or constitutionality does not arise at this particular stage? We are only considering the principles of the Bill. This could be considered only at the time when we take up the Bill clause by clause. The points raised both by the Hon'ble Member for Periyapatna and the Member in-charge of the Bill are out of order.

Mr. DEPUTY SPEAKER.—It is not like that. When we are considering the general principles of this Bill, the members are at liberty to consider all those points.

Sri H. M. CHANNABASAPPA.—I submit to the Chair, there is also room for the doubt. The right of disposal of property is a right conferred under article 19(f). This right can only be limited by reasonable restriction. But the Government is once again taking

away that right conferred by the Constitution by inserting a provision in this Bill. Even deciding the limitation of holding requires to be legally examined.

Sri Kadidal MANJAPPA.—When the other member is speaking, some other person cannot intervene and raise some other point, Sir.

Sri H. M. CHANNABASAPPA.—I only wanted the Hon'ble Minister to place the opinion of the Law Department before this House for the benefit of members so that we can debate on that point.

Mr. DEPUTY SPEAKER.—The Hon'ble Minister will consider that point.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನಾವು ಕೆಲವು ಸ್ನೇಹಿತರು ಲಾ ಡಿಪಾರ್ಟ್‌ಮೆಂಟಿಗೆ ಹೋಗಿ ಲಾ ಸೆಕ್ರೆಟರಿಯವರ ಮತ್ತು ಇತರೆಯವರೊಡನೆ ಈ ವಿಷಯವನ್ನು ಚರ್ಚೆಮಾಡಿದ್ದೇವೆ. ನಮ್ಮ ಮಿತ್ರರಾದ ಶ್ರೀಮಾನ್ ಚನ್ನಬಸಪ್ಪನವರೂ ಆ ಸಮಯದಲ್ಲಿ ಹಾಜರಿದ್ದರು. ಆಗ್ಗೆ ಲಾ ಸೆಕ್ರೆಟರಿಯವರು ಕಾನೂನಿಗೆ ವಿರುದ್ಧವಾಗಿರುವುದು ಇದರಲ್ಲಿ ಯಾವುದೂ ಇಲ್ಲವೆಂದು ಹೇಳಿದರು.

ಶ್ರೀ ಎಸ್. ಸಿದ್ದಪ್ಪ.—ಅವರೂ ಹಾಜರಿದ್ದ ಮಾತ್ರಕ್ಕೆ ಅದೇ ಸಾಕ್ಷಿಯೇ, ಹೆಬ್ಬೆಟ್ಟಿನ ಗುರುತೇ !

Mr. DEPUTY SPEAKER.—The Member has liberty to make his observations within limits.

Sri P. R. RAMAIYA (Basavangudi).—Mr. Speaker, in a legislation of this kind, common sense tells me that such a clause should be reciprocatory, that is to say, if you pass a law here, that should be reciprocated in the neighbouring States. Even there they should pass the law of a similar kind. Without reciprocity, such laws cannot work properly. Therefore, Sir, this has a standing of all-India importance, which deserves the consideration of the Centre. When the Centre fixes the land reform as a State subject, supposing the Centre legislates that ceiling limit of the land should be so much in India,—I think it is very necessary that as far as property is concerned, there should be a law of that kind which applies to the whole of India. Specially, when you insert a clause like this: 'to hold arable land as owner the total extent of which in the whole of India does not exceed the area of the permissible holding': I think this clause should find a place in a Central legislation. In a legislation of a State, such clause cannot find a place. Therefore I am firmly of the opinion that when you are considering the question of land reform of such far-reaching nature that it affects the position of the owner of land not only in Mysore but in other parts of India, we have to see that there is reciprocity and there is legislation or understanding of an all-India character. Without that, if you make a legislation of this kind applicable to Mysore, it would be penalising the subject of the State and it would be a sort of discrimination also, and it may lead to elucidation being sought on points of law from the tribunals. Therefore Sir, I wish this particular clause—clause 'A' deserves some more consideration at the hands of the Government and let them also consult the Planning Commission, if they are going to have such a legislation in other States also. Then only it would be just and proper to have such a clause in our legislation.

Sir, in determination of the Standard Acre, there should be some reason and rhyme. We cannot determine this quantity or quantum of standard acre arbitrarily. It should be based on certain money value, not merely on so many pallas of ragi or so many pallas of paddy. It should have some money content. That is to say, you say, it shall be Rs. 500 or Rs. 1,000 or something like that which should have an All-India currency. Therefore Sir, instead of determining this measurement of standard acre in terms of pallas of ragi or paddy, I would like that money value be given to that. Then it would have All-India meaning. And then, this clause 'A' will have implication. When we say a man is worth so much landed property, it can be estimated in terms of so many rupees. It cannot be said that he possesses so many standard acres which gives so many pallas of ragi or paddy. Therefore Sir, it is a point for consideration of the Government in the Select Committee. Instead of putting so many pallas of paddy or ragi, let them have it in terms of money. Then it would have some application to All-India standards.

Even regarding this ceiling limit, it would have some relation to the present economic position, Sir. We are

(SRI P. R. RAMAIYA.)

passing through vast changes in the economic structure of our society. When we fix the limit of land that is to be owned by one individual, we have to consider that question in terms of its value in relation to the exchange of other commodities. Therefore, it is of absolute importance that when we fix the ceiling limit, we have to take into consideration the money value of the land in question. I am sure that when the Planning Commission considers the question of land reforms this question will be taken into consideration. Therefore Sir, this legislation is of such a comprehensive character that it deserves to be scrutinised carefully ; it would be wise if the Government get some information from the Planning Commission in regard to this matter.

Sri Kadidal MANJAPPA.—This Bill had been sent to the Planning Commission and they have offered their remarks on the Bill.

Sri P. R. RAMAIYA.—I made some remarks with regard to the money value. I want to know what the Minister has to say about it.

Sri Kadidal MANJAPPA.—At the proper time. I would like to place before this House the comments of the Planning Commission on this Bill.

Sri P. R. RAMAIYA.—Have the Government considered this aspect ?

Sri Kadidal MANJAPPA.—Yes, the suggestion of the Hon'ble Member is impracticable. It is not a practical solution at all.

Sri Mulka GOVINDA REDDY.—ಭೂಮಿಯ ಬೆಲೆ ವರ್ಷವರ್ಷಕ್ಕೂ ವ್ಯತ್ಯಾಸವಾಗುತ್ತಿರುತ್ತದೆ. ಬೆಲೆ ವಿಷಯದಲ್ಲಿ ಇಷ್ಟೇ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

Sri P. R. RAMAIYA.—I want to develop that point so that the Minister might understand the implication, Sir.

ಶ್ರೀ ಪಿ. ಆರ್. ರಾಮಯ್ಯ.—ಈಗ ತಾವು ಇಷ್ಟು ಸ್ಟ್ಯಾಂಡರ್ಡ್ ಎಕರೆಯೆಂದು ವಿಧಾಯಕಮಾಡುವಾಗ ಇಷ್ಟು ಪಲ್ಲ ಬತ್ತ, ರಾಗಿ ಎಂದು ಹೇಳುತ್ತೀರಿ. ಆದರೆ ಬತ್ತ ಮತ್ತು ರಾಗಿ ಬೆಲೆ ಫ್ಲಕ್ಚುಯೇಟ್ ಆಗುವುದಿಲ್ಲವೆ? ಈಗಾಗಲೇ ವ್ಯವಸಾಯವಾಡಿ ಉತ್ಪತ್ತಿಮಾಡುವ ಪದಾರ್ಥಗಳ ಬೆಲೆ ಕಡಮೆಯೆಂದು ಹೇಳುತ್ತಿರುವಾಗ ಇದಕ್ಕೆ ಒಂದು ಸ್ಟ್ಯಾಂಡರ್ಡ್, ಒಂದು ನೆಲೆ ಬೇಡವೆ ? ಇದಕ್ಕೆ ನೆಲೆ ಬೇಕು. ಆ ನೆಲೆ ಹಣದಿಂದ ಅಳತೆಮಾಡಿದರೆ ನೆಲೆಯಾಗುತ್ತದೆಯೆ ? ಈ ವಿಷಯವನ್ನು ಪ್ಲಾನಿಂಗ್ ಕಮಿಷನ್‌ನವರು ಆಲೋಚಿಸಿದ್ದಾರೆಯೆ ? ಇಡೀ ಇಂಡಿಯಾದಲ್ಲೆಲ್ಲಾ ಯಾವ ರೀತಿ ಮಾಡಿದ್ದಾರೆ ?

ಈ ಲೆಜಿಸ್ಲೇಷನ್ ವಿಚಾರದಲ್ಲಿರುವ ಅಭಿಪ್ರಾಯ ಸಾಮಾನ್ಯವಾಗಿ ಈಗ ಹೊರಗಡೆ ವಿಚಾರಿಸಿದ್ದರಲ್ಲಿ ಟೆನೆಂಟುಗಳಿಗೆ ಅನುಕೂಲ ಮಾಡಿಕೊಡುವ ಸಂದರ್ಭದಲ್ಲಿ ಲ್ಯಾಂಡ್ ಲಾರ್ಡುಗಳಿಗೂ ಸರಿಯಾದ ನ್ಯಾಯ ದೊರೆಯುವ ಹಾಗೆ ಮಾಡಬೇಕೆಂದು ಹೇಳುತ್ತಾರೆ. ಇದಕ್ಕೆ 10 ವರ್ಷದ ಅವಧಿಯನ್ನು ಆಲೋಚಿಸದೆ ತಕ್ಷಣವೇ ಟೆನೆಂಟುಗಳಿಗೆ ಜಮೀನು ದೊರೆಯುವ ಹಾಗೆ ಮಾಡಬೇಕಾದರೆ ಸರ್ಕಾರದವರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಮೂಲಕ ಅಥವಾ ಬೇರೆ ರೀತಿಯಲ್ಲಿ ರೈತರಿಗೆ ಸಾಲಕೊಟ್ಟು ಆ ಹಣವನ್ನು ಲ್ಯಾಂಡ್ ಲಾರ್ಡುಗಳಿಗೆ ಕೊಡುವ ಹಾಗೆ ಮಾಡಿದರೆ ಅದು ಸೂಕ್ತವಾದ ಸುಧಾರಣೆಯಾಗುತ್ತದೆ; ಯಾರಿಗೂ ಅನ್ಯಾಯವಾಯಿತೆಂಬ ಶಂಕೆ ಯಾರ ಮನಸ್ಸಿನಲ್ಲೂ ಇರುವುದಿಲ್ಲ.

ಸೀಲಿಂಗ್ ಲಿಮಿಟ್ ಎಂಬುದನ್ನು ಆದಷ್ಟು ಬೇಗನೆ ನಿಗದಿಮಾಡಬೇಕು. ಏಕೆಂದರೆ ಇಷ್ಟು ಜಮೀನಿಗಿಂತ ಜಾಸ್ತಿ ಯಾರಿಗೂ ಇರಬಾರದೆಂದು ವಿಧಾಯಕ ಮಾಡುವವರೆಗೆ ಈ ಕಾನೂನು ಸಂಪೂರ್ಣವಾದ ಕಾನೂನಾಗುವುದಿಲ್ಲ. ಟೆನೆಂಟುಗಳ ಮೂಲಕ ಅಥವಾ ಅಗ್ರಿಕಲ್ಚರಲ್ ಲೇಬರ್ ಮುಖಾಂತರ ವ್ಯವಸಾಯ ಮಾಡಿಸುವವರಿಗೆ ಈ ಕಾನೂನಿನಿಂದ ಯಾವ ರೀತಿಯ ಬಾಧಕವೂ ಆಗುವುದಿಲ್ಲ. ಅಗ್ರಿಕಲ್ಚರಲ್ ಲೇಬರ್ ಮುಖಾಂತರ 100 ಅಥವಾ 200 ಎಕರೆ ಮಾಡಿಸಬಹುದು. ಈ ಸೀಲಿಂಗ್ ಲಿಮಿಟ್ ಅತ್ಯಾವಶ್ಯಕ, ತುರುತಾಗಿ ನಿಗದಿಮಾಡಬೇಕು ಎಂದು ಸೂಚಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರ).—ಸರ್ಕಾರದವರು ತಂದಿರತಕ್ಕಂಥ ಟೆನೆನ್ಸಿ ಆಕ್ಟಿನ ವಿಚಾರದಲ್ಲಿ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಮಾನ್ಯ ರೆವೆನ್ಯೂ ಮಂತ್ರಿಗಳು ಹಿಂದಿನ ಅಧಿವೇಶನದಲ್ಲಿ ಈ ಟೆನೆನ್ಸಿ ಆಕ್ಟನ್ನು ತರುವಾಗಲೇ ಕೆಲವು ವಿಚಾರ ಈ ಸಭೆಯ ಗಮನಕ್ಕೆ ತಂದಿದ್ದರು. ಮೈಸೂರು ದೇಶದಲ್ಲಿ ಎಷ್ಟು ಜನ ಜಮೀನ್ದಾರರಿದ್ದಾರೆ ಎಷ್ಟು ಎಕರೆ ಪಡೆದಿರುವವರಿದ್ದಾರೆ ಎಂಬುದನ್ನು ಹೇಳಿದ್ದರು. ಒಂದು ಎಕರೆಗಿಂತ ಕಡಮೆಯಿರುವವರು 28 000,83 ಜನರೆಂದೂ, ಒಂದರಿಂದ ಐದು ಎಕರೆಯವರೆಗೆ ಹೊಂದಿರುವವರು 6,17,664 ಜನರೆಂದೂ ಹೇಳಿದ್ದರು.

12 NOON

5 ಎಕರೆಯಿಂದ 10 ಎಕರೆ ಒಳಗೆ ಇರತಕ್ಕವರು 84,803 ಜನ ಇದ್ದಾರೆ.
50 ಎಕರೆಯಿಂದ 100 ಎಕರೆಯವರೆಗೂ ಇರತಕ್ಕವರು 12,078 ಜನ ಇದ್ದಾರೆ.
100 ಎಕರೆಗೆ ಮೇಲ್ಪಟ್ಟು 500 ಎಕರೆಯ ವರೆಗೂ ಇರತಕ್ಕ ಜನ 2,480 ಜನ ಇದ್ದಾರೆ.

ಇದರಿಂದ ಯಾರಿಗೆ ಅನುಕೂಲ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂಬ ಉದ್ದೇಶದಿಂದ ಈ ಅಂಕಿ ಅಂಶಗಳನ್ನು ಹೇಳುತ್ತ ಇದ್ದೇನೆ. 500 ಎಕರೆಗಿಂತ ಮೇಲ್ಪಟ್ಟು ಇರತಕ್ಕವರು ಬಹಳ ಕಮ್ಮಿ ಜನ ಇದ್ದಾರೆ. ಈಗ ತಾವು 8 ಪಲ್ಲ ಭತ್ತ, 8 ಪಲ್ಲ ರಾಗಿ ಬೆಳೆಯತಕ್ಕ ಒಂದು ಎಕರೆಯನ್ನು ಸ್ಟ್ಯಾಂಡರ್ಡ್ ಎಕರೆ ಎಂದು ಮಾಡಿರುತ್ತೀರಿ. ಮತ್ತು 25 ಜನಗಳಿರತಕ್ಕ ಒಂದು ದೊಡ್ಡ ಕುಟುಂಬಕ್ಕೆ 100 ಎಕರೆಗಿಂತ ಜಾಸ್ತಿ ಇರಕೂಡದು ಎಂದು ಮಾಡಿದ್ದೀರಿ. ಈ ರೀತಿ ವಿಧಾಯಕಮಾಡಿದ ಮೇಲೆ 100 ಎಕರೆಗೆ ಮೇಲ್ಪಟ್ಟು 500 ಎಕರೆಯವರೆಗೂ ಇರತಕ್ಕ 2,480 ಜನ ಮತ್ತು 500

ಎಕರೆಗೆ ಮೇಲ್ಪಟ್ಟು ಇರತಕ್ಕ ಅತ್ಯಲ್ಪಜನರ ಮೇಲೆ ಸರ್ಕಾರದವರು ಗದಾಪ್ರಹಾರಮಾಡಿರುತ್ತೀರಿ. ಆದರೆ ಈ ಜನಗಳು ಈ ಕಾನೂನು ಆಗುವುದರೊಳಗೇ ಯಾವುದಾದರೂ ಒಂದು ರೀತಿಯಲ್ಲಿ ತಪ್ಪಿಸಿಕೊಂಡು ಕೈಗೇ ಸಿಕ್ಕುವುದಿಲ್ಲ ಎಂದು ನನ್ನ ಭಾವನೆ. ಆಮೇಲೆ Staudard Acre ಎಂದು ಮಾಡಿ ಈ ಜಮೀನುಗಳನ್ನು ಹಂಚುವಾಗ ಒಂದು ಸರಿಯಾದ ವ್ಯವಸ್ಥೆ ಮಾಡಿ ಜಮೀನಿನ ಹಂಚಿಕೆಮಾಡಿ. ಹಾಗಲ್ಲದೆ ಪಟೇಲ್ ಶ್ಯಾನುಭೋಗರು ಅಥವಾ ಇತರ ಅಧಿಕಾರಿಗಳ ಕೈಗೆ ಅಥವಾ ಲಾಯರುಗಳ ಕೈಗೆ ಬಡ ರೈತರು ಸಿಕ್ಕಿ ನರಳಾಡುವಂತೆ ಮಾತ್ರ ಖಂಡಿತವಾಗಿಯೂ ಮಾಡಬೇಡಿ ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ರೈತರು ಈಗ ಸುಮಾರು 7–8 ವರ್ಷಗಳಿಂದಲೂ ಹತೋಟಿ ಬಂದುದರ ದೆಶೆಯಿಂದ ಬಹಳ ಕಷ್ಟಪಟ್ಟಿದ್ದಾರೆ. ಈಗ ಚೇತರಿಸಿಕೊಳ್ಳುವುದಕ್ಕೆ ಸ್ವಲ್ಪ ಪ್ರಯತ್ನಮಾಡುತ್ತಿರುವಾಗ ಅವರಿಗೆ ನೆರವು ಬೇಕೇಬೇಕು. ಇಂಥಾ ಕಾನೂನುಗಳನ್ನು ತರುವಾಗ ಇದರಿಂದ ರೈತರಿಗೆ ಎಷ್ಟುಮಟ್ಟಿಗೆ ಅನುಕೂಲವಾಗುತ್ತದೆ, ಅವರಿಗೆ ಏನಾದರೂ ಪ್ರಯೋಜನವಿದೆಯೇ ಎಂಬುದನ್ನು ನೋಡಬೇಕಾದ್ದು ಅತಿ ಮುಖ್ಯ. ಸರ್ಕಾರದವರು ಪದೇ ಪದೇ ಇಂಥಾ ಕಾನೂನುಗಳನ್ನು ತಂದು ಅವರನ್ನು ಕಷ್ಟಕ್ಕೆ ಈಡುಮಾಡಬಾರದು. ರೈತರು ವಿದ್ಯಾವಂತರಲ್ಲ...............

ಶ್ರೀ ಕಡಿದಾಳ್ ಮಂಜಪ್ಪ.—ಸ್ವಲ್ಪ ವಿವರಣೆ ಕೊಟ್ಟರೆ ಒಳ್ಳೆಯದು ಎಂದು ಕಾಣುತ್ತದೆ. ಪಟೇಲ್ ಶ್ಯಾನುಭೋಗರ ಕೈಗೆ ರೈತರು ಸಿಕ್ಕುವುದಿಲ್ಲ. ಅದೇ ರೀತಿ ಜಮೀನ್‌ದಾರರೂ ಕೂಡ ಸಿಕ್ಕುವುದಿಲ್ಲ. ಏಕೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಒಂದೊಂದು ಸ್ಟ್ಯಾಂಡರ್ಡ್ ಏಕರ್ ಏನೆಂಬುದನ್ನು ಸರ್ಕಾರದವರೇ ಗೊತ್ತುಮಾಡುತ್ತಾರೆ. ಆದ್ದರಿಂದ ಸಣ್ಣ ಪುಟ್ಟ ಅಧಿಕಾರಿಗಳ ಕೈಗೆ ಅವರು ಸಿಕ್ಕುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ತಾವು ತಂದಿರುವ ಈ ಬಿಲ್ ಏನಿದೆ ಇದನ್ನು ಎಲ್ಲಾ ಕಡೆಗೂ ಒಂದೇ ರೀತಿಯಾಗಿ ಅನ್ವಯಮಾಡುವುದಾದರೆ ಅದರಿಂದ ಯಾವ ರೀತಿ ಅನುಕೂಲವಾಗುತ್ತದೆ ಎಂಬುದನ್ನು ಯೋಚನೆಮಾಡಬೇಕು. ಎಲ್ಲಾ ಜಿಲ್ಲೆಗಳಲ್ಲೂ ರೈತರ ಪರಿಸ್ಥಿತಿ ಒಂದೇರೀತಿಯಾಗಿದೆ ಎಂಬ ಭಾವನೆ ಇರುವುದು ತಪ್ಪು. ಏಕೆಂದರೆ ನನಗೆ ತಿಳಿದಿರುವ ಹಾಗೆ 105 ಜನ ಇರತಕ್ಕ ಈ ಸಭೆಯಲ್ಲಿ ಕೆಲವರಿಗೆ ಜಮೀನು ಇರಬಹುದು, ಕೆಲವರಿಗೆ ಇಲ್ಲದೇ ಇರಬಹುದು. ರೈತರ ಕಷ್ಟ ಎಷ್ಟುಮಟ್ಟಿಗೆ ಇದೆ ಎಂಬುದನ್ನು ಅರಿತಿರತಕ್ಕವರು ಬಹಳ ಕಮ್ಮಿ ಎಂದು ಹೇಳುತ್ತೇನೆ ಹಾಗಲ್ಲ ಎಂದರೆ ಒಳ್ಳೆಯದು ಅದು ಬೇರೆ ಪ್ರಶ್ನೆ. ಇವತ್ತಿನ ಮೈಸೂರುದೇಶದ ಪರಿಸ್ಥಿತಿಯಲ್ಲಿ 100–200 ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕ ಸರ್ಕಾರಿ ನೌಕರರು ಯಾವ ಮಟ್ಟದಲ್ಲಿ ಇದ್ದಾರೆ, ಅದೇ 100 ಎಕರೆ ಜಮೀನು ಇರತಕ್ಕ ರೈತ ಯಾವ ಮಟ್ಟದಲ್ಲಿ ಇದ್ದಾನೆ ಎಂಬುದನ್ನು ಸರ್ಕಾರದವರು ಯೋಚನಮಾಡಬೇಕು. 100 ಎಕರೆ ಜಮೀನಿರತಕ್ಕವನ ಕಷ್ಟ ಏನಿದೆ, ಅವನು ಎಷ್ಟು ಸಾಲ ಸೋಲ ಮಾಡಿದ್ದಾನೆ ಎಂಬುದನ್ನು 100 ರೂಪಾಯಿ ಸಂಬಳ ಪಡೆಯತಕ್ಕವನು ಎಷ್ಟು ಸಾಲ ಸೋಲ ಮಾಡಿದ್ದಾನೆ ಅವನ ಕಷ್ಟ ಏನಿದೆ ಎಂಬುದನ್ನು ಹೋಲಿಕೆಮಾಡಿ ನೋಡಿದರೆ, 100 ರೂಪಾಯಿ ಸಂಬಳ ಪಡೆಯತಕ್ಕ ನೌಕರನ ಸ್ಥಿತಿಯೇ ಎಷ್ಟೋ ಮೇಲು ಎಂದು ಹೇಳಬಹುದು. ಇಂಥಾ ಪರಿಸ್ಥಿತಿಯಲ್ಲಿ ಈ ರೀತಿ ಪದೇ ಪದೇ ಕಾನೂನುಗಳನ್ನು ಅವನಮೇಲೆ ಹೇರುವುದಾದರೆ ಅವನ ಗತಿ ಏನು? ಅವನು ಮಾಡಿರತಕ್ಕ ಸಾಲ ತೀರಿಸುವುದಕ್ಕೆ ಸರ್ಕಾರದವರು ಸಿದ್ಧವಾಗಿದ್ದೀರಾ ಎಂದು ಕೇಳುತ್ತೇನೆ. ಜಮೀನಿನಲ್ಲಿ ಕಷ್ಟಪಟ್ಟು ದುಡಿದು ಅದರಿಂದಲೇ ಅವನ ಸಂಸಾರ ಸಾಗಬೇಕು ಮತ್ತು ಅದರಿಂದಲೇ ಅವನ ಸಾಲ ಸೋಲ ತೀರಬೇಕು. ಮೈಸೂರು ದೇಶದಲ್ಲಿ 25 ಎಕರೆ, 50 ಎಕರೆ ಇಟ್ಟುಕೊಂಡು ವ್ಯವಸಾಯಮಾಡುತ್ತಿರತಕ್ಕ ರೈತರ ಲೆಕ್ಕ ತೆಗೆದುಕೊಂಡರೆ ಶೇಕಡ 90ರಷ್ಟು ಜನ ಸಾಲ ಮಾಡಿಯೇ ಮಾಡಿರುತ್ತಾರೆ. ಸಾಲ ಇಲ್ಲದೇ ಇರತಕ್ಕ ರೈತರೇ ಇಲ್ಲ ಎಂದು ನಾನು ಹೇಳಬಲ್ಲೆ. ಅವನಿಗೆ ಸರಿಯಾದ ಬಟ್ಟೆ, ಒಡವೆ ವಸ್ತ್ರ ಹಾಕಿಕೊಳ್ಳಲಿಕ್ಕೆ ಶಕ್ತಿ ಇಲ್ಲ. ಅವನು ಗಜ 4 ಆಣೆಗಿಂತ ಹೆಚ್ಚು ದುಡ್ಡು ಕೊಟ್ಟು ಬಟ್ಟೆ ಹೊಲಸಿಕೊಳ್ಳುವುದಕ್ಕೆ ಆಗುವುದಿಲ್ಲ. ಹೀಗಿರುವಾಗ ಗಂಡ, ಹೆಂಡತಿ, ಒಂದೆರಡು ಮಕ್ಕಳು ಇಂಥಾ ಒಂದು ಸಂಸಾರವನ್ನು ಅವನು ಸಾಲ ಸೋಲ ಇಲ್ಲದೇ ನಿರ್ವಹಣೆಮಾಡಲಿಕ್ಕೆ ಎಷ್ಟು ಜಮೀನು ಅವಶ್ಯಕವಾಗಿ ಬೇಕು ಎಂಬುದನ್ನು ನಿರ್ಧಾರಮಾಡಬೇಕಾದ್ದು ಬಹಳ ಮುಖ್ಯ ಎಂದು ನನಗೆ ಅನ್ನಿಸುತ್ತಿದೆ. ಇವತ್ತು ಬೆಳಿಗ್ಯೆ ಒಂದು ಮೆರವಣಿಗೆ ಹೋಗುತ್ತಾ ಇತ್ತು. ಬರೀ ಒಂದು ಮೆರವಣಿಗೆಗೆ 6 ಸಾವಿರ ರೂಪಾಯಿ ಖರ್ಚಾಯಿತಂತೆ. ಈ ರೀತಿ ಖರ್ಚುಮಾಡತಕ್ಕ ಜನರೂ ಇಲ್ಲಿ ಇದ್ದಾರೆ. ಬೆಂಗಳೂರು ಮೈಸೂರು ಸಿಟಿಗಳಲ್ಲಿ, ಟೌನ್‌ಗಳಲ್ಲಿ 5,000 ರೂಪಾಯಿಗಳವರೆಗೂ, ಒಂದು ತಿಂಗಳಿಗೆ, ಮನೆ ಬಾಡಿಗೆ ಬರತಕ್ಕವರು ಇದ್ದಾರೆ. ಇವರೆಲ್ಲರನ್ನು ಬಿಟ್ಟು ಬಡಪಾಯಿ ಆಗಿರತಕ್ಕ ಈ ರೈತನಮೇಲೆ 'ಮಾರಿಕಣ್ಣು ಹೋತನಮೇಲೆ' ಅನ್ನುವ ಹಾಗೆ ಏಕೆ ಕಣ್ಣು ಹಾಕಿದ್ದೀರೋ ನನಗಂತೂ ಗೊತ್ತಾಗುವುದಿಲ್ಲ. ಇಂಡಿಯಾ ಸರ್ಕಾರದವರು ಭೂಸುಧಾರಣೆ ಜಾರಿಗೆ ತರಬೇಕೆಂದು ಹೇಳಿದ್ದಾರೆ ನಿಜ. ಜಾರಿಗೆ ತರುವಾಗ ರೈತರ ಕಷ್ಟ ಏನಿದೆ ಎಂಬುದನ್ನು ಅರಿತು ರೈತ ಜಮೀನಿನ ಸಾಗುವಳಿ ಮಾಡಿದರೆ ಪ್ರತಿಫಲ ಎಷ್ಟು ಸಿಕ್ಕುತ್ತದೆ. ಅಷ್ಟು ಸಿಕ್ಕಿದರೆ ಅವನು ಸುಖವಾಗಿ ವರ್ಷವೆಲ್ಲಾ ಜೀವನ ಸಾಗಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಯೋಚನೆಮಾಡಬೇಕು. ಈ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಕೂಡ ಜಮೀನನ್ನು ಸಮಾನವಾಗಿ ಹಂಚಬೇಕು ಎಂದು ತಾವು ಅನ್ನುವುದಾದರೆ ಅದೇ ರೀತಿ ಎಲ್ಲರಿಗೂ ಕೂಡ ಸುಖವಾಗಿ ಜೀವನ ಮಾಡುವುದಕ್ಕೆ ಅವಕಾಶ ಕಲ್ಪಿಸಬೇಕಾದ್ದು ಸರ್ವರ ಕರ್ತವ್ಯ ಎಂದು ಹೇಳುತ್ತೇನೆ. ನಾನು ಜಮೀನುದಾರರ ಪರವಾಗಿ ಮಾತನಾಡುತ್ತಿಲ್ಲ ಮತ್ತು ಸರ್ಕಾರದ ಪರವಾಗಿಯೂ ಕೂಡ ಮಾತನಾಡುತ್ತಿಲ್ಲ. ಯಾವುದನ್ನೂ ಯೋಚನೆ ಮಾಡದೆ ಇಂಥಾ ಮಸೂದೆಯನ್ನು ನಮ್ಮ ಮುಂದೆ ಇಟ್ಟರೆ ಮುಂದೆ ರೈತ ಇದರಿಂದ ನರಳಬೇಕಾಗುತ್ತದೆ. ಅದೂ ಅಲ್ಲದೆ ಇವತ್ತಿನ ದಿವಸ ರೈತರಿಗೆ ಒಂದಲ್ಲ ಒಂದು ವಿಧದಲ್ಲಿ ಸಹಾಯಮಾಡುತ್ತಿದ್ದಂಥಾ ಜಮೀನುದಾರರ ಸ್ಥಿತಿಯೂ ಕೂಡ ದಿನ ದಿನಕ್ಕೆ ಹೀನ ಸ್ಥಿತಿಗೆ ಬರುತ್ತಾ ಇದೆ. ಅವರಿಂದಲೂ ಕೂಡ ಅತ ಸಹಾಯಪಡೆಯಲಿಕ್ಕೆ ಅವಕಾಶಗಳು ಕಮ್ಮಿಯಾಗುತ್ತಿವೆ. ಕಂಟ್ರೋಲ್ ಇದ್ದ ಕಾಲದಲ್ಲಿ ರೈತನಿಗೆ ಅಲ್ಪಸ್ವಲ್ಪ ಬೆಳೆಯಾದರೂ ನಾಲ್ಕು ಕಾಸು ಬಂತು, ನಾಳೆ ದಿವಸ 10 ಎಕರೆ 20 ಎಕರೆ ಇಟ್ಟುಕೊಂಡಿರತಕ್ಕವನು ಆಹಾರಧಾನ್ಯಗಳ ಬೆಲೆ ಇಳಿದುಹೋದರೆ ಅವನ ಗತಿ ಏನು? ಅವನ ಸಂಸಾರ ಹೇಗೆ ನಡೆಸಬೇಕು? ಕಂದಾಯ ಹೇಗೆ ಕೊಡಬೇಕು? ಸಾಲ ಹೇಗೆ ತೀರಿಸಬೇಕು ಸ್ವಾಮಿ? ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಒಂದು ಸ್ಟ್ಯಾಂಡರ್ಡ್ ಏಕರ್‌ನಲ್ಲಿ ಎಕರೆಗೆ 15–20 ಪಲ್ಲ ಬೆಳೆಯಬಹುದು. ಅವರಿಗೆ ಅನುಕೂಲವಾಗುತ್ತದೆ. ಅದೇ

(ಶ್ರೀ ವೈ. ಎಂ. ಚಂದ್ರಶೇಖರಯ್ಯ.)

ಕೋಲಾರ ಜಿಲ್ಲೆಯಲ್ಲಿ 1-2 ಪಲ್ಲ ಕೂಡ ಆಗುವುದಿಲ್ಲ ಮಳೆ ಕಮ್ಮಿ ಆಗಿರುವ ಮತ್ತು ನೀರಿನ ಆಶ್ರಯವಿಲ್ಲದೆ ಇರುವ ಪ್ರದೇಶಗಳಲ್ಲಿ ಇದರಿಂದ ಬಹಳ ತೊಂದರೆಯಾಗುತ್ತವೆ. ಭೂಸುಧಾರಣೆ ತರಬೇಕಾದರೆ ಈ ರೀತಿಯಾಗಿ ಸರ್ಕಾರದವರು ಇಂಥಾ ಕಾನೂನುಗಳನ್ನು ತಂದು ದೇಶದಲ್ಲಿ ರೈತರಿಗೆ ಕಿರುಕುಳ ಕೊಡುವುದು ಒಳ್ಳೆಯದಲ್ಲ.

ಏಕೆಂದರೆ ಈ ದಿವಸ ಲಾಯರುಗಳ ಮನೆ ಕಾಣದಿರತಕ್ಕಂಥ ಜನಗಳಿದ್ದಾರೆ. ದೊಡ್ಡ ಪಟ್ಟಣಗಳ ಮುಖವನ್ನೇ ನೋಡದೆ ಇರತಕ್ಕಂಥ ಜನರೂ ಇದ್ದಾರೆ. ಆದುದರಿಂದ ಇಂಥಾ ಸನ್ನಿವೇಶಗಳಿರುವಾಗ ತಾವು ಈ ಸುಧಾರಣೆ ಜಾರಿಗೆ ತರಬೇಕಾಗಿದ್ದರೆ ಅವು ನೇರವಾಗಿ ರೈತರಿಗೆ ಅನುಕೂಲ ಕಲ್ಪಿಸತಕ್ಕಂಥ ಕಾನೂನುಗಳಾಗಿರಬೇಕು. ಸುಲಭವಾಗಿ ರೈತನಿಗೆ ಜಮೀನು ದೊರೆಯುವಂತೆ ಮಾಡಬೇಕು. ಹೀಗೆ ತಾವು ಭೂಸುಧಾರಣೆ ಮಾಡಿದ್ದೇ ಆದರೆ ಆಗ ರೈತನಿಗೆ ಇದರಿಂದ ನಿಜವಾಗಿಯೂ ಅನುಕೂಲವಾಗುತ್ತದೆ. ಹೀಗೆ ಮಾಡಿದರೆ ರೈತನಿಗೂ ಅನುಕೂಲ; ಮತ್ತು ಸರ್ಕಾರಕ್ಕೂ ಅನುಕೂಲ. ಈ ದಿವಸ ಈ ಜಮೀನು ಸಾಗುವಳಿ ಮಾಡುತ್ತಿರುವಂಥ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ. ಈಗಾಗಲೆ ಶ್ರೀಮಾರ್ ಲಿಂಗಾರೆಡ್ಡಿಯವರು ಹೇಳಿದ ಹಾಗೆ ಆ ಜಮೀನು ರೈತರ ಕೈಗೇ ಹೋಗುವ ಹಾಗಿಲ್ಲ. ಆದರೆ ದೇಶದಲ್ಲಿ ಪ್ರಜಾಪ್ರಭುತ್ವಾಡಳಿತ ಬಂದಮೇಲೆ ನಮ್ಮ ಸರ್ಕಾರದವರು ಈಚೀಚೆಗೆ ರೈತರಿಗೆ ಅನೇಕ ಅನುಕೂಲತೆಗಳನ್ನು ಒದಗಿಸಿಕೊಟ್ಟಿದ್ದಾರೆ. ಮನೆ ಕಟ್ಟಿಕೊಳ್ಳುವುದಕ್ಕೆ ರೈತನಿಗೆ ಹಣವನ್ನು ಕೊಟ್ಟಿದ್ದಾರೆ. ದನಕರುಗಳನ್ನು ಕೊಂಡುಕೊಳ್ಳುವುದಕ್ಕೆ ಸಹಾಯಮಾಡಿದ್ದಾರೆ. ಆದರೆ ಈ ದಿವಸ ತಾವು ರೈತನಿಗೆ ಕೊಡತಕ್ಕ ಜಮೀನು ಆ ರೈತನ ಕೈಲೇ ಉಳಿಯುವಂತೆ ಮಾಡಬೇಕಾಗಿದ್ದರೆ, ಈಗ ಜಮೀನ್ದಾರರಾಗಿರತಕ್ಕವರು ತಮ್ಮ ಜಮೀನನ್ನು ಕಳೆದುಕೊಳ್ಳದ ಹಾಗೆ ಮಾಡಬೇಕಾಗಿದ್ದರೆ ತಾವು ದೇಶದಲ್ಲಿರತಕ್ಕ ರೈತನ ಋಣಬಾಧೆ ಎಷ್ಟಿದೆಯೆಂಬುದನ್ನು ಸರ್ವೆ ಮಾಡಿಸತಕ್ಕದ್ದು ತೀರಾ ಅಗತ್ಯ. ತಾವು ಈ ಕೆಲಸವನ್ನು ಈ ದಿವಸ ಮಾಡಿ ರೈತನ ಋಣಪರಿಹಾರಕ್ಕೊಂದು ಉಪಾಯವನ್ನು ಹುಡುಕದೆ ಹೋದರೆ ಈ ಸರ್ಕಾರ ರೈತನಿಗೆ ತುಂಬಾ ದ್ರೋಹ ಮಾಡಿದ ಹಾಗೆ ಆಗುತ್ತದೆ. ಆತನ ಹೆಂಡತಿಮಕ್ಕಳಿಗೆ ಈ ದಿವಸ ಪೂರಾ ತೊಂದರೆಗಳಿರುತ್ತವೆ. ಆದುದರಿಂದ ತಾವು ಮೊದಲು ಈ ರೈತನ ಋಣ ಎಷ್ಟಿದೆಯೆಂಬುದನ್ನು ಕಂಡುಹಿಡಿಯಲು ಒಂದು ಸರ್ವೆ ಮಾಡಿಸಬೇಕಾದ್ದು ಅಗತ್ಯವೆಂದು ಹೇಳುತ್ತೇನೆ. ರೈತನು ಸಾಲಗಾರನಾಗಲು ಒಂದಲ್ಲ ನಾನಾ ಕಾರಣಗಳಿವೆ. ಬರಗಾಲದಲ್ಲಿ ಆತನು ಹೊಟ್ಟೆ ಹೊರೆಯಲು ಸಾಲ ಮಾಡಿದ್ದಾನೆ. ಮಕ್ಕಳು ಮರಿಗಳ ಲಗ್ನ ಮಾಡಲು ಸಾಲಗಾರನಾಗಿದ್ದಾನೆ. ಹೀಗೇ ನಾನಾ ಕಾರಣಗಳಿಂದ ಆತನು ಈ ದಿವಸ ಸಾಲವಂದಿಗನಾಗಿದ್ದಾನೆ. ಈ ದಿವಸ ತಾವು ಒಂದು ದೊಡ್ಡ ಸಂಸಾರಕ್ಕೆ 100 ಎಕರೆಗಳೆಂದೂ ಒಂದು ಚಿಕ್ಕ ಸಂಸಾರಕ್ಕೆ 20 ಎಕರೆಗಳು ಸಾಕೆಂದು ಬಿಡಬಹುದು. ಆದರೆ 100 ಎಕರೆ ಜಮೀನ್ದಾರನೆಂದು ಹೆಸರಿಗೆ ಇದ್ದರೂ ಆತನು ಪೂರಾ ಸಾಲವಂದಿಗನಾಗಿ ತನ್ನ ಅಡವು ಆಸ್ತಿಗಳನ್ನೆಲ್ಲಾ, ಇತರರಿಗೆ ಅಡವು, ಕ್ರಯ, ಭೋಗ್ಯ ಹೀಗೆಲ್ಲಾ ಮಾಡಿಕೊಂಡಿರುತ್ತಾನೆ. ಹೀಗೆ ಆತನು ತನ್ನ ಆಸ್ತಿಯ ಬಲದಮೇಲೆ ಮಾಡಿಕೊಂಡಿರುವ ಸಾಲ ಸೋಲಗಳನ್ನು ತೀರಿಸದೆ ಹಾಗೆ ಉಳಿಸಿಕೊಂಡು ಬಂದಿದ್ದಾನೆ. ಸಾಲ ತೀರಿಸಲು ಇಲ್ಲಿಯವರೆಗೂ ಆತನಿಗೆ ಯಾವ ಮಾರ್ಗವೂ ಸಹ ಸಿಕ್ಕಿರುವುದಿಲ್ಲ. ಈ ದಿವಸ ಜಮೀನನ್ನು ತೆಗೆದುಕೊಳ್ಳುವುದೇನೋ ಸುಲಭ, ಆದರೆ ತಾವು ಈ ಪ್ರಜಾಪ್ರಭುತ್ವ ಯುಗದಲ್ಲಿ ಯಾವುದಾದರೂ ಒಂದು ಕಾನೂನನ್ನು ಮಾಡಿದರೆ ಅದು ಸರ್ವರಿಗೂ ಅನ್ವಯಿಸುವಂತಿರಬೇಕು. ಈಗಾಗಲೇ ನಾನು ಈ ಸಭೆಯಲ್ಲಿ ತಮ್ಮೆಲ್ಲರ ಎದುರಿನಲ್ಲಿಯೂ ಹೇಳಿರುವ ಹಾಗೆ ಮೂರು ಎಕರೆ ಜಮೀನು ಇಟ್ಟುಕೊಂಡಿರುವಂಥ ಜನಗಳೂ ಇದ್ದಾರೆ, ಆದರೆ ಈ ದಿವಸ ಅವರು ಎಷ್ಟು ಸಾಲವಂದಿಗರಾಗಿದ್ದಾರೆ. ಎಷ್ಟು ತೊಂದರೆಗೀಡಾಗಿದ್ದಾರೆ ಅನ್ನುವುದನ್ನು ಯಾರು ಪರಿಶೀಲನೆ ಮಾಡಿ ನೋಡಿದ್ದಾರೆ? ಆತನು ಮದುವೆ, ಮುಂಜಿ ಇತ್ಯಾದಿಗಳಿಗೆಲ್ಲಾ ವಿಶೇಷವಾಗಿ ಸಾಲ ಮಾಡಿದ್ದಾನೆ. ಯಾವಾಗಲೂ ಆತನ ಹಿಂದೆ ಮುಂದೆ ಸಾಲಕೊಟ್ಟ ಜನರು ಬಂದು ಎಳೆಯುತ್ತಿರುತ್ತಾರೆ. ಈ ದಿವಸ ಆತನಿಗೆ ಒಂದಾಣೆ ಸಾಲ ಕೊಡಿ ಅಂತ ಕೇಳಿದರೂ ಕೂಡ ಯಾರೂ ಕೊಡುವುದಕ್ಕೆ ಸಿದ್ಧವಾಗಿಲ್ಲ.

ನಮ್ಮ ಜಿಲ್ಲೆಯಲ್ಲಿ coffee planters ಜಾಸ್ತಿ, ಕಾಫಿ ಪ್ಲಾಂಟರುಗಳಾಗಲಿ, ಯಾಲಕ್ಕಿ ಪ್ಲಾಂಟರುಗಳಾಗಲಿ, ತೆಂಗಿನ ತೋಟದವರಾಗಲಿ, ಯಾರೇ ಆಗಲಿ ಅವರ ಜಮೀನು ನಾವು ವಶಪಡಿಸಿಕೊಂಡರೆ ಅದರಿಂದ ಬಹಳ ಕಷ್ಟವಿದೆ. ಕಾಫಿತೋಟವಾಗಲೀ, ಯಾಲಕ್ಕಿ ತೋಟವಾಗಲೀ, ತೆಂಗಿನ ತೋಟವಾಗಲೀ ಅಥವಾ ಅಡಕೆ ತೋಟವಾಗಲೀ ಯಾವುದೂ ಕೂಡ 25 ಎಕರೆ ಜಮೀನಿನ ಮೇಲೆ ಇರಕೂಡದೆಂದು ತಮ್ಮ ಬಿಲ್ಲಿನಲ್ಲಿ ಹೇಳಿದ್ದೀರಿ. ಕಾಫಿ ತೋಟ ಮಾಡಬೇಕಾದರೆ, ಅಡಿಕೆತೋಟ ಮಾಡಬೇಕಾದರೆ ಎಷ್ಟೋ ಕಷ್ಟವಿದೆ. ಹಾಗೆಯೇ ಯಾಲಕ್ಕಿತೋಟ ಮಾಡಬೇಕಾದರೂ ಕಷ್ಟ. ಇಲ್ಲಿ ಯಾಲಕ್ಕಿ ತೋಟವಿರುವವರು ಯಾರೂ ಇಲ್ಲ. ಯಾಲಕ್ಕಿ ತೋಟಗಳಲ್ಲಿ ನಾಗರಹಾವುಗಳಿರುತ್ತವೆ. ಇಂಥಾ ಜಮೀನನ್ನು ಕಿತ್ತುಕೊಂಡು ಇತರೆಯವರಿಗೆ ಕೊಟ್ಟರೆ ಯಾವ ರೀತಿ ಪರಿಣಾಮವುಂಟಾಗುತ್ತದೆಂಬುದನ್ನು ಯೋಚನೆಮಾಡಬೇಕು. ಜಮೀನ್ದಾರನು ಬಹಳ ಸುಖವಾಗಿದ್ದಾನೆ, ಸಂತೋಷವಾಗಿದ್ದಾನೆ, ಚೆನ್ನಾಗಿ ಬಟ್ಟೆ ಹಾಕಿಕೊಂಡು ಓಡಾಡುತ್ತಾನೆ, ಎಂದು ಸರ್ಕಾರದ ಅಭಿಪ್ರಾಯವಿರುವಂತೆ ತೋರುತ್ತದೆ. ಅದು ತಪ್ಪು ಅಭಿಪ್ರಾಯ, ಅದನ್ನು ಸರ್ಕಾರದವರು ಬದಲಾಯಿಸಬೇಕು ಎಂದು ಹೇಳುತ್ತೇನೆ. ಈ ತರಹ ಕಾನೂನು ಜಾರಿಗೆ ಕೊಡುವುದಕ್ಕೆ ಮೊದಲು ರೈತನ ಋಣ ಪರಿಹಾರಮಾಡಬೇಕು, ಅದನ್ನು ಮಾಡದೆ ಇದ್ದರೆ ಯಾವ ಕಾಲಕ್ಕೂ ಅವನ ಜನ್ಮ ಸಾರ್ಥಕವಾಗುವುದಿಲ್ಲವೆಂದು ನಾನು ಒತ್ತಿಹೇಳುತ್ತೇನೆ.

ಈಗ ಜಮೀನ್ದಾರ, ತಾವು ಮಾಡಿರತಕ್ಕಂಥ, ಈ ಮಾನ್ಯ ಸಭೆಯ ಸದಸ್ಯರು ಅಂಗೀಕರಿಸತಕ್ಕ ಕಾನೂನು ಏನಿದೆಯೋ ಅದನ್ನು ಸಂತೋಷವಾಗಿ ಸ್ವಾಗತಿಸಿ, ಜಮೀನನ್ನು ಬಿಟ್ಟುಕೊಡುವುದಕ್ಕೆ ಸಿದ್ಧನಾಗಿದ್ದಾನೆ. ಆ ರೀತಿಯಾಗಿ ಬಿಟ್ಟುಕೊಟ್ಟರೂ ಸಹ, ತಾವು ಅಧಿಕಾರಿಗಳಿಗೆ ಮತ್ತು ಇನ್ನೂ ಅನೇಕ ಜನಗಳಿಗೆ ಯಾವ ರೀತಿಯಾಗಿ ಅನುಕೂಲವನ್ನು ಕಲ್ಪಿಸಿಕೊಡುತ್ತೀರೋ ಅದೇ ರೀತಿಯಾಗಿ ಜಮೀನ್ದಾರನಿಗೂ ಕಲ್ಪಿಸಿಕೊಡಬೇಕು. ಆ ರೀತಿಯಾಗಿ ಮಾಡಬೇಕಾದರೆ ರೈತನು ಬೆಳೆಯತಕ್ಕ ದವಸಕ್ಕೆ ಒಂದು ನಿಗದಿಯಾದ ಬೆಲೆಯನ್ನು ಮಾಡಬೇಕು. ಆ ರೀತಿ ಮಾಡಿದರೆ ಅವರಿಗೆ ಎಷ್ಟು ವರಮಾನ ಬರುತ್ತದೆ ಎಂಬ ಭರವಸೆ ಬರುತ್ತದೆ. ಇವೊತ್ತು ಒಂದು ಪದಾರ್ಥದ ಬೆಲೆ 15 ರೂಪಾಯಿ ಇರಬಹುದು. ನಾಳೆ 10 ರೂಪಾಯಿ ಆಗಬಹುದು. 25 ಎಕರೆ ಜಮೀನಿನಲ್ಲಿ ಎಷ್ಟು ಬೆಳೆ ಬೆಳೆಯಬಲ್ಲ, ಏನು ಉತ್ಪತ್ತಿ ಬರುತ್ತದೆ, ಮುಂದೆ ಸಂಸಾರ ಯಾವ

ರೀತಿ ನಡೆಸಬಲ್ಲ ಎಂಬುದನ್ನು ಯೋಚನೆಮಾಡಬೇಕು. ಒಂದು ಜಮೀನನ್ನು ಸಂಪಾದನೆ ಮಾಡಬೇಕಾದರೆ ಸಾಲಸೋಲ ಮಾಡಿ ಅನೇಕ ಕಷ್ಟ ಪರಂಪರೆಗಳಿಗೆ ಈಡಾಗಿರಬೇಕಾದರೆ ಈ ದಿವಸ ಜಮೀನನ್ನು ಬಿಟ್ಟು ಕೊಡಬೇಕು ಎಂದರೆ ಎಷ್ಟು ಕಷ್ಟವಿದೆ ಎಂಬುದನ್ನು ತಾವು ಯೋಚನೆಮಾಡಬೇಕು. ನಮ್ಮ ಕಡೂರು ತಾಲ್ಲೂಕಿನಲ್ಲಿ ಪ್ರವಾಸಮಾಡಿ ನೋಡಿದರೆ 100ಕ್ಕೆ 95 ಜನ ರೈತರು ಬಡವರಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಅವರ ವಾದದ ಪ್ರಕಾರ ಈ ತೊಂದರೆ, ಕಷ್ಟ ಇವೆಲ್ಲ 2,000 ಜನರಿಗೆ ಮಾತ್ರ ಅನ್ವಯಿಸುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಎರಡು ಸಾವಿರ ಜನರ ಮೇಲೆ ಈ ಗದಾ ಪ್ರಹಾರ ಮಾಡಿದ್ದಾರೆ. ಮುಂಡೆ ಈ ಕಾನೂನಿನ ಪರಿಣಾಮವೇನಾಗುತ್ತ ದೆಂದು ಹೇಳುತ್ತೇನೆ. ಇದರಿಂದ ಸುಮಾರು ಐದು ಲಕ್ಷ ಜನಕ್ಕೆ ಅನುಕೂಲವಾಗುತ್ತದೆ. ಆದರೆ ಹತ್ತು ಲಕ್ಷ, 1) ಲಕ್ಷ ಜನಗಳಿಗೆ ಅನುಕೂಲಮಾಡಿಕೊಡು ವಷ್ಟು ಜಮೀನು ನಮ್ಮ ದೇಶದಲ್ಲಿದೆ. ಒಬ್ಬೊಬ್ಬ ಐದು ಹತ್ತು ಎಕರೆ ಜಮೀನು ಕೊಡಬಹುದು. ಆದರೆ ಮಲೆನಾಡಿಗೆ ಯಾರೂ ಹೋಗುವುದಕ್ಕೆ ಒಪ್ಪುವುದಿಲ್ಲ. ಅದೇ ಯಾರಾದರೂ ಜಮೀನು ಅಚ್ಚುಕಟ್ಟಾಗಿ ಇಟ್ಟು ಕೊಂಡಿದ್ದರೆ ಅದನ್ನು ಕೇಳುತ್ತೀರಿ. ಜಮೀನಿಲ್ಲದ ರೈತರು ಬೇಕಾದಷ್ಟು ಜನರಿದ್ದಾರೆ, ಮಲೆನಾಡಿನಲ್ಲಿ ಬೇಕಾದಷ್ಟು ಜಮೀನೂ ಇದೆ. ನಾನು ಮಲೆನಾಡಿನ ಪ್ರವಾಸಮಾಡಿರುವುದರಿಂದ ನನಗೆ ಅಲ್ಲಿರುವ ಜನರ ಕಷ್ಟಸುಖಗಳ ಅರಿವಿದೆ. ಅವರಿಗೆ ಜಮೀನುಕೊಟ್ಟು, ಎತ್ತು, ಗಾಡಿ ವಗೈರೆ ಎಲ್ಲಾ ಒದಗಿಸಿಕೊಟ್ಟು ಅವರಿಗೆ ಖರ್ಚಿಗೆ ಸ್ವಲ್ಪ ಹಣವನ್ನೂ ಒದಗಿಸಿ ಜಮೀನು ಸಾಗುವಳಿ ಮಾಡುವುದಕ್ಕೆ ಅನುಕೂಲಮಾಡಿಕೊಡಿ ಆ ಜಮೀನಿನಲ್ಲಿ ಎಷ್ಟು ಉತ್ಪತ್ತಿ ಬರುತ್ತದೆ ಎಂಬುದನ್ನು ನೋಡಿ ಕೊಂಡು ಕ್ರಮಕ್ರಮೇಣ ಅವರಿಗೆ ಕೊಟ್ಟಿರುವ ಹಣ ವನ್ನು ವಾಪಸು ತೆಗೆದುಕೊಳ್ಳಿ. ಈ ಕಾನೂನು ಅನ್ವಯಿ ಸುವುದರಿಂದ ಈ ಪ್ರದೇಶದಲ್ಲಿ ಏನೂ ಅನುಕೂಲವಿಲ್ಲ. ನಮ್ಮ ಕಡೆ ಸಾಗುವಳಿ ಮಾಡುತ್ತಿರುವ ಜಮೀನು ಬೆಂಗಳೂರು ಮೈಸೂರುಗಳ ಕಡೆ ಇದ್ದರೆ ಎಕರೆ ಒಂದಕ್ಕೆ ಸುಮಾರು ಐದು ಸಾವಿರ ರೂಪಾಯಿ ಬೆಲೆ ಬಾಳುತ್ತದೆಂದು ತೋರುತ್ತದೆ. ಯಾವ ರೈತ 50 ಎಕರೆ, 500 ಎಕರೆ ಹೀಗೆ ಸೇಚ್ಛಾದ ಜಮೀನನ್ನು ಹಣ ಖರ್ಚುಮಾಡಿ, ಅಭಿವೃದ್ಧಿಪಡಿಸಿಕೊಂಡು ಸಾಗು ವಳಿ ಮಾಡಿಸುತ್ತಇರುತ್ತಾನೆಯೋ ಅಂತಹ ಜಮೀನು ಗಳನ್ನೆಲ್ಲ ಈ ಕಾನೂನು ಮಾಡಿ ಕಿತ್ತುಕೊಳ್ಳಬೇಕೆಂದು ಹೇಳುತ್ತೀರಿ. ಈ ರೀತಿಯಾಗಿ ತೆಗೆದುಕೊಂಡದ್ದನ್ನು ಸಾಗುವಳಿ ಮಾಡುವವನಿಗೆ ಕೊಡಬೇಕೆಂದು ಹೇಳು ತ್ತೀರಿ. ಇಷ್ಟು ಹೊರತು ಸರ್ಕಾರದವರು ರೈತರಿಗೆ ಏನು ಅನುಕೂಲ ಮಾಡಿಕೊಡುತ್ತಿದ್ದಾರೆಂದು ಹೇಳಲಿಲ್ಲ.

12-30 P.M.

ಈ ದಿವಸ ಕೂಲಿಗಾರ, ಸರ್ಕಾರಿ ಕೆಲಸದಲ್ಲಿರುವ ಸಣ್ಣನೌಕರ, ಇವರುಗಳೆಲ್ಲರಿಗಿಂತ ಕಷ್ಟದಲ್ಲಿರತಕ್ಕವನು ಎಂದರೆ ಜಮೀನ್ದಾರ. 2 ಎಕರೆ, 4 ಎಕರೆ, 10 ಎಕರೆ ಹೀಗೆ ಎಷ್ಟು ಜಮೀನು ಪಡೆದಿದ್ದರೂ ಅವನು ಜಮೀ ನ್ದಾರನೆನ್ನಿಸಿಕೊಳ್ಳುತ್ತಾನೆ. ಪ್ರತಿಯೊಬ್ಬ ಜಮೀನ್ದಾ ರನೂ ಈಗ ಮೈಸೂರು ದೇಶದಲ್ಲಿ ಕಷ್ಟದಲ್ಲಿದ್ದಾನೆಂದು ಹೇಳುತ್ತೇನೆ. ಈ ಕಾನೂನು ಮಾಡುವುದರಿಂದ ಯಾರೂ ಉಳಿಯುವುದಿಲ್ಲ.

ಪ್ರಾಯಶಃ ತಾವು ತಾಲ್ಲೂಕು ಮತ್ತು ಹಳ್ಳಿ ಗಳಲ್ಲಿ ಪ್ರಚಾರಮಾಡಿದರೆ ಸ್ವಲ್ಪ ಅನುಕೂಲವಾಗ ಬಹುದು. ಮೈಸೂರು ದೇಶದಲ್ಲಿ ಸರ್ಕಾರಿ ನೌಕರ ರಿಗೆ ಸುಮಾರು 8 ಕೋಟಿ ರೂಪಾಯಿ ಕೊಡುತ್ತಿದ್ದೀರಿ. ಈ ಹಣವನ್ನು ಸಂಸ್ಥಾನಾದ್ಯಂತ ಜನಗಳಿಂದ ವಸೂ ಲ್ಮಾಡಿದ ಹಣವನ್ನು ನೌಕರರಿಗೆ ಕೊಡುತ್ತಿದ್ದೀರಿ. ಹೀಗಿದ್ದರೂ ಸಣ್ಣವರು ಸಣ್ಣವರಾಗಿದ್ದಾರೆ, ದೊಡ್ಡ ವರು ದೊಡ್ಡವರಾಗಿದ್ದಾರೆ. ಕೆಲವರು ಹೊಟ್ಟೆಗೆ ಹಿಟ್ಟಿಲ್ಲದೆ ಸಾಯುತ್ತಿದ್ದಾರೆ. ಇದು ಭೂಸುಧಾರಣೆ. ಕೆಲವು ನೌಕರರಿಗೆ ಜಾಸ್ತಿ ಸಂಬಳ ಕೊಟ್ಟು ಅನೇಕ ನೌಕರರುಗಳಿಗೆ ಕಮ್ಮಿ ಸಂಬಳ ಕೊಡುತ್ತಿರುವುದು ಯಾವ ನ್ಯಾಯ ?

ಇಲ್ಲಿ ಜನರು ಸುಪ್ಪತ್ತಿಗೆಯಲ್ಲಿ ಮಲಗಿ ಆನಂದಪಡುತ್ತಿ ರುವುದು, ಅಲ್ಲಿ ರೈತರು ಮಳೆ ಬಿಸಿಲುಗಳಿಗೆ ಸಿಕ್ಕಿ ಒಣಗುತ್ತಿರುವುದು ; ಅವರ ಕಷ್ಟ ಸುಖಗಳನ್ನು ನೋಡುವವರೇ ಇಲ್ಲ ! ಆದ್ದರಿಂದ ದೇಶದಲ್ಲಿ ಎಲ್ಲರಿಗೂ ಅನ್ವಯವಾಗುವಹಾಗೆ ಕಾನೂನುಮಾಡಿ. ಇವ ರಿಂದಲೂ ದುಡ್ಡು ತೆಗೆದುಕೊಳ್ಳಿ. ಆದರೆ ದುಡ್ಡು ತೆಗೆದುಕೊಳ್ಳುವುದರಲ್ಲಿ ಅವರಿಗೆ ಎಷ್ಟು ಬೇಕೋ ಅಷ್ಟು ಬಿಟ್ಟು ಹೆಚ್ಚಿನದನ್ನು ತೆಗೆದುಕೊಳ್ಳಿ.

ಉಪಾಧ್ಯಕ್ಷರು.—ಕಾಲ ಆಯಿತು. You may continue your speech next day.

On Monday the Mysore Village Panchayets and District Boards (Amendment) Bill will be taken up and also the Mysore Agricultural Income-tax Bill. The discussion on the Tenancy Bill will continue on some other day.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಲ್ಪ ಸ್ವಲ್ಪ ಒಂದು ಮಸೂದೆಯನ್ನು ಚರ್ಚಿಸಲು ಅವಕಾಶಕೊಟ್ಟು ಅರ್ಧಂಬರ್ಧ ಮಾಡಿದ ನಂತರ ಅದನ್ನು ಬಿಟ್ಟು ಬೇರೆ ತೆಗೆದುಕೊಳ್ಳುವುದು ಸರಿಯಲ್ಲವೆಂದು ಮೊದಲಿನಿಂದಲೂ ಹೇಳುತ್ತಿದ್ದೇವೆ. ಕಂಟಿನ್ಯುಯಸ್ಸಾಗಿ ಒಂದನ್ನು ತೆಗೆದುಕೊಳ್ಳಲು ಅವಕಾಶ ಕೊಡದಿದ್ದರೆ ಟ್ರೆಂಡ್ ಹೋಗುತ್ತದೆ. ಈಗಿರುವ ಪ್ರೋಗ್ರಾಮಿನಂತೆ ಟೆನೆನ್ಸಿ ಬಿಲ್ಲು ಮುಗಿದ ಮೇಲೆ ಬಾಕಿಯಾದ್ದನ್ನು ತೆಗೆದುಕೊಳ್ಳು ವುದು ಉತ್ತಮವೆಂದು ಸಲಹೆ ಕೊಡುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ನನ್ನದೇನೂ ಅಭ್ಯಂತರ ವಿಲ್ಲ. ಮಾನ್ಯ ಸದಸ್ಯರೆಲ್ಲರ ಆಸೆಯಂತೆ ಜಿಲ್ಲಾ ಬೋರ್ಡು ಮತ್ತು ಗ್ರಾಮಪಂಚಾಯಿತಿ ಮಸೂದೆಯು ಈ ಅಧಿವೇಶನ ಮುಗಿಯುವುದರೊಳಗಾಗಿ ಅಂಗೀಕಾರ ವಾಗಬೇಕಾಗಿದೆ. ಇದು ಮುಖ್ಯವಾದುದು. ಟೆನೆನ್ಸಿ ಮಸೂದೆಯ ವಿಚಾರದಲ್ಲೂ ಎಲ್ಲರಿಗೂ ಹೆಚ್ಚು ಆಸಕ್ತಿ ಯಿದೆ. ಆದ್ದರಿಂದಲೇ ಕಾಲ ಜಾಸ್ತಿ ತೆಗೆದುಕೊಳ್ಳು ತ್ತಿದ್ದಾರೆ. ಒಂದು ವೇಳೆ ಟೆನೆನ್ಸಿ ಬಿಲ್ಲನ್ನು ಮುಂದುವ ರೆಸಿದರೆ ಅದು ಸೋಮವಾರ ಮುಗಿಯುವುದಾದರೆ ಪರವಾಗಿಲ್ಲ. ಮಂಗಳವಾರ ಜಿಲ್ಲಾಬೋರ್ಡು ಮತ್ತು ಗ್ರಾಮಪಂಚಾಯ್ತಿ ಬಿಲ್ಲನ್ನು ತೆಗೆದುಕೊಳ್ಳಬಹುದು.

ಶ್ರೀ ಎಸ್. ಸಿದ್ದಪ್ಪ.—ಜಿಲ್ಲಾ ಬೋರ್ಡ್ ಮತ್ತು ಗ್ರಾಮಪಂಚಾಯ್ತಿ ಬಿಲ್ಲು ಬಹಳ ದಿವಸಗಳಿಂದ ನಿಂತಿ ರುವುದರಿಂದ ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ ದಯ ವಿಟ್ಟು ಸೋಮವಾರ ಇದನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

Sri Kadidal MANJAPPA.—Preference will have to be given to the District Boards and Village Panchayets (Amendment) Bill.

Mr. DEPUTY SPEAKER.—It is now decided that on Monday the House will take up the Village Panchayets and District Boards (Amendment) Bill and the Agricultural Income-tax Bill. After this, if there is time, there is no objection to continue the discussion on the Tenancy (Second Amendment) Bill.

The House will now rise and meet at 12 Noon on Monday.

The House adjourned at Thirty-Five Minutes past Twelve of the Clock to meet again at Twelve Noon on Monday the 11th April 1955.

WD 4508—GPB—550—22-9-55.